# ಕನ್ನಡ ಭಾಷಾ ಪಠ್ಯ

ಬಿ.ಕಾಂ.

(ದ್ವಿತೀಯ ಸೆಮಿಸ್ಟರ್)

ಬೆಂಗಳೂರು ನಗರ ವಿಶ್ವವಿದ್ಯಾಲಯ
BENGALURU CITY UNIVERSITY
ಆಗು ನೀ ಅನಿಕೇತನ
BE BOUNDLESS

**2021**

ಬಿ.ಕಾಂ.

# ಎರಡನೇ ಸೆಮಿಸ್ಟರ್

## ಎರಡನೇ ಸೆಮಿಸ್ಟರ್

## I. ಯೌವನ


೧. ಕಾರಿ ಹೆಗ್ಗಡೆಯ ಮಗಳು – ಬಿ.ಎಂ.ಶ್ರೀ. ೧೫೪–೧೫೬

೨. ಬಿಸಿಲುಗುದುರೆ – ದ.ರಾ. ಬೇಂದ್ರೆ ೧೫೭–೧೫೮

೩. ಪ್ರಣಯ – ರಾ.ಯ. ಧಾರವಾಡಕರ ೧೫೯–೧೬೬

ಓದುಪತ್ಯ: ಚೈತನ್ಯದ ಚಿಲುಮೆ ಯುವಶಕ್ತಿ–ಎಸ್ಕೆ ಹಳೆಯಂಗಡಿ ೧೬೭–೧೭೦


## II. ಸಿನಿಮಾ


೧. ನಾನೂ ಸಿನಿಮಾ ಮಾಡಿದೆ – ಪಿ. ಲಂಕೇಶ್ ೧೭೩–೧೮೦

೨. ಸಿನಿಮಾ ಒಂದು ಕಲೋದ್ಯಮ ೧೮೧–೧೮೪
–ಬರಗೂರು ರಾಮಚಂದ್ರಪ್ಪ

೩. ಒಂದು ರಾಜಯೋಗ – ಜಯಂತ ಕಾಯ್ಕಿಣಿ ೧೮೫–೧೯೧

ಓದುಪತ್ಯ: ಸೃಜನಶೀಲ ಕಲಾವಿದೆ ವೈಶಾಲಿ ಕಾಸರವಳ್ಳಿ ೧೯೨–೨೦೫
– ವಿಕಾಸ್ ನೇಗಿಲೋಣಿ


## III. ಭಕ್ತಿ


೧. ಬೇಡರ ಕನ್ನಯ್ಯನ ಕಥೆ – ಜನಪದ ೨೦೯–೨೧೩

೨. ಭಾರತೀಯ ಭಕ್ತಿ ಪರಂಪರೆಯ ಭಿನ್ನಧ್ವನಿ ೨೧೪–೨೨೫
–ವಚನ ಚಳವಳಿ – ಜಿ.ಎನ್. ಉಪಾಧ್ಯ

೩. ಗ್ರಾಮ ದೇವತೆಗಳು –ದಲಿತ ಕವಿ ಸಿದ್ಧಲಿಂಗಯ್ಯ ೨೨೬–೨೩೬

ಓದುಪತ್ಯ : ಪೂಜೆ – ಡಾ। ಎಚ್.ಜಿ. ಲಕ್ಕಪ್ಪಗೌಡ ೨೩೭–೨೪೨


## IV. ಕಾಯ


೧. ವಚನಗಳು – ಆಯ್ದ ವಚನಕಾರರು ೨೪೫–೨೪೬

೨. ತತ್ತ್ವಪದಗಳು – ಶಿಶುನಾಳ ಷರೀಫರು ೨೪೭–೨೪೮

೩. ಕಲ್ಲಾದಳು ಅಹಲ್ಯೆ – ಕಸ್ತೂರಿ ಬಾಯರಿ ೨೪೯–೨೬೨

ಓದುಪತ್ಯ : ಮೂಗಿನ ಮಹತ್ತ್ವ – ಸೂ. ಸುಬ್ರಹ್ಮಣ್ಯ ೨೬೩–೨೭೧

# ಯೌವನ

## ಆಶಯ :

ಮಾನವ ಜೀವನದಲ್ಲಿನ ಬಹುಮುಖ್ಯ ಘಟ್ಟ ಯೌವನ. ಶೈಶವ, ಬಾಲ್ಯಾನಂತರದ ಈ ಕಾಲಘಟ್ಟದಲ್ಲಿ ವ್ಯಕ್ತಿ ಪ್ರಜ್ಞಾವಂತನಾಗುತ್ತಾನೆ; ಬದುಕಿನ ಬಗೆಗೆ ದೂರದರ್ಶಿತ್ವವನ್ನು ತಾಳುತ್ತಾನೆ. ಸ್ವಾವಲಂಬಿಯಾಗಲು ತೊಡಗುತ್ತಾನೆ. ಹೊಸ ಹೊಸ ಆಲೋಚನೆಗಳನ್ನು ಬದುಕಿನಲ್ಲಿ ಅಳವಡಿಸಲು ಯತ್ನಿಸುತ್ತಾನೆ. ತನ್ನ ಸಾಧನೆಯ ಮಜಲುಗಳನ್ನು ಒಂದೊಂದಾಗಿ ಏರತೊಡಗುತ್ತಾನೆ. ಈ ಸಮಯದಲ್ಲಿ ಯುವ ಜನತೆಗೆ ಒಳ್ಳೆಯ ಶಿಕ್ಷಣವೆಂಬ ದಿಗ್ದರ್ಶಕ, ಮಾನವೀಯ ಗುಣಗಳನ್ನು ವರ್ಧಿಸುವ ಪರಿಸರ; ಸದ್ಗುಣಗಳನ್ನು ತುಂಬುವ ಪರಿವಾರ ಇದ್ದರೆ ಸಾಕು, ಅದ್ಭುತವಾದುದನ್ನು ಸಾಧಿಸಲು.

ಯುವಜನತೆ ದೇಶದ ಪ್ರಗತಿಯ ಸಂಕೇತ. ದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ಎಲ್ಲ ಕ್ಷೇತ್ರಗಳ ಬೆಳವಣಿಗೆಯಲ್ಲಿ ಯುವಜನತೆಯ ಪಾತ್ರ ಹಿರಿದು.

ವ್ಯಕ್ತಿ ಶಾರೀರಿಕವಾಗಿಯೂ ಯುವಾವಸ್ಥೆಯಲ್ಲಿ ಬೆಳವಣಿಗೆ ಹೊಂದುತ್ತಾನೆ. ಈ ಸಂದರ್ಭದಲ್ಲಿ ಇಂದ್ರಿಯಗಳ ದಾಸನಾಗದಂತೆ ಹೆಚ್ಚು ಜಾಗರೂಕನಾಗಿರಬೇಕು. ಈ ಹಂತದಲ್ಲಿ ಯುವಜನರು ತಾಳ್ಮೆ, ಕಷ್ಟ ಸಹಿಷ್ಣುತೆ, ಸಂಯಮ, ವಿಶ್ವಾಸ, ಪರೋಪಕಾರ, ಶ್ರದ್ಧೆ ಹಾಗೂ ಅಚಲ ನಿಷ್ಠೆಯ ಗುಣಗಳನ್ನು ತಮ್ಮದಾಗಿಸಿಕೊಳ್ಳಬೇಕು. ಏಕೆಂದರೆ ಈ ಸಮಯದಲ್ಲಿ ಮಾಡುವ ಕಲಿಕೆ ಹೇಗಿರುತ್ತದೆಯೋ ಅದೇ ಮುಂದಿನ ಭವಿಷ್ಯವನ್ನು ನಿರ್ಧರಿಸುವಂಥದ್ದು. ಯುವಾವಸ್ಥೆಯಲ್ಲಿ ವ್ಯಕ್ತಿ ಮಾಡುವ ಸ್ನೇಹ, ಗಳಿಸುವ ಗುಣ, ಸಂಪಾದಿಸುವ ಶಿಕ್ಷಣ–ಗೌರವ ಕೊನೆಯವರೆಗೂ ಆತನನ್ನು ಕಾಪಾಡುತ್ತದೆ.

* * *

# ಕಾರಿ ಹೆಗ್ಗಡೆಯ ಮಗಳು

–ಬಿ.ಎಂ.ಶ್ರೀ.

ಪಡುವ ದಿಬ್ಬದ ಗೌಡನೊಬ್ಬನು
ಬಿಡದೆ ತೊರೆಯನ ಕೂಗಿಕೊಂಡನು
'ತಡೆಯದೀಗಲೆ ಗಡುವ ಹಾಯಿಸು,
ಕೊಡುವೆ ಕೇಳದ ಹೊನ್ನನು'.

'ಆರು ನೀವೀ ಕರಗಿ ಮೊರೆಯುವ
ನೀರ ಕಾಯಲ ಹಾಯುವವರು?'
'ಪಡುವ ದಿಬ್ಬದ ಗೌಡ ನಾನೀ
ಮಡದಿ ಕಾರಿಯ ಕುವರಿಯು.

ಓಡಿಬಂದೆವು ಮೂರು ದಿವಸ
ಜಾಡ ಹಿಡಿದು ಹಿಂದೆ ಬಂದರು.
ನಮ್ಮನೀ ಕಣಿವೆಯಲಿ ಕಂಡರೆ
ಚಿಮ್ಮಿ ಹರಿವುದು ನೆತ್ತರು.

ಹತ್ತಿ ಕುದುರೆಯ ತರುಬಿ ಬರುವರು
ಮುತ್ತಿಕೊಂಡರೆ ನನ್ನ ಕೊಲುವರು
ಘೋರ ದುಃಖದ ನಾರಿಯನು ಬಳಿ
ಕಾರು ನಗಿಸಲು ಬಲ್ಲರು?'

ಆಗ ಅಂಜದೆ ತೊರೆಯನೆಂದನು
'ಬೇಗ, ಜೀಯಾ, ಓಡತರುವೆನು.
ಸುಡಲಿ ಹೊನ್ನು, ಬೆಡಗಿ ನಿನ್ನೀ
ಮಡದಿಗೋಸುಗ ಬರುವೆನು.

ಆದುದಾಗಲಿ ಮುದ್ದಿನರಗಿಣಿ
ಗಾದ ಗಂಡವ ಕಾದು ಕೊಡುವೆನು
ಕಡಲು ನೊರೆಗಡೆದೆದ್ದು ಕುದಿಯಲಿ
ಗಡುವ ಹಾಯಿಸಿ ಬಿಡುವೆನು.

ತೂರುಗಾಳಿಗೆ ಕಡಲು ಕುದಿಯಿತು
ನೀರ ದೆವ್ವಗಳರಚಿಕೊಂಡವು.
ಹೆಪ್ಪುಮೋಡದ ಉಪ್ಪುಗಂಟಿಗೆ
ಕಪ್ಪಗಾದವು ಮುಖಗಳು.

ಕೆರಳಿ ಕೆರಳಿ ಗಾಳಿ ಚಚ್ಚಿತು.
ಇರುಳ ಕತ್ತಲೆ ಕವಿದು ಮುಚ್ಚಿತು.
ಕಣಿವೆ ಇಳಿವರ ಕುದುರೆ ಕತ್ತಿಯ
ಖಣಿ ಖಣಿ ಧ್ವನಿ ಕೇಳಿತು.

'ಏಳು, ಬೇಗೇಳಣ್ಣ' ಎಂದಳು;
ಹೂಳಿಕೊಳಲಿ ನನ್ನ ಕಡಲು
ಮುಳಿದ ಮುಗಿಲ ತಡೆಯಬಲ್ಲೆ
ಮುಳಿದ ತಂದೆಯ ತಡೆಯೆನು.'

ಇತ್ತ ಕರೆಮೊರೆ ಹಿಂದಕಾಯಿತು
ಅತ್ತ ತೆರೆಮೊರೆ ಸುತ್ತಿಕೊಂಡಿತು.
ಆಳ ಕೈಯಲಿ ತಾಳಬಹುದೇ
ಏಳು ಬೀಳಿನ ಕಡಲದು!

ಅಲೆಗಬ್ಬರದಲ್ಲಿ ಮೀಟಿ
ಮುಳುಗುತಿಹರು, ಏಳುತಿಹರು.
ಕರೆಗೆ ಬಂದ ಕಾರಿಹೆಗ್ಗಡೆ
ಕರಗಿ ಮುಳಿಸು, ಅತ್ತನು!

ತೊಂಡು ತೆರೆಗಳ ಮುಸುಕಿನಲ್ಲಿ
ಕಂಡು ಮಗಳ ಕರಗಿಹೋದ.
ಒಂದು ಕೈ ನೀಡಿದಳು ನೆರವಿಗೆ
ಒಂದು ತಬ್ಬಿತು ನಲ್ಲನ!

'ಮರಳು, ಮರಳು ಮಗಳೆ' ಎಂದ.
ಮೊರೆವ ಕಾಯಲ ಗಂಟಲಿಂದ;
'ಮರೆತೆ, ಒಪ್ಪಿದೆ ನಿನ್ನ ನಲ್ಲನ,
ಮರಳು ಕಂದಾ' – ಎಂದನು.

ಮರಳಬಹುದೇ? ಹೋಗಬಹುದೇ?
ಕರೆಯ ತೆರೆಯಪ್ಪಳಿಸಿ ಹೊಯ್ದು
ಹೊರಳಿಹೋದವು ಮಗಳ ಮೇಲೆ,
ಕೊರಗಿನಲಿ ಅವನುಳಿದನು.

* * *

# ಬಿಸಿಲುಗುದುರೆ

–ದ.ರಾ. ಬೇಂದ್ರೆ

ಹಳ್ಳದs ದಂಡ್ಯಾಗ ಮೊದಲಿಗೆ ಕಂಡಾಗ
ಏನೊಂದು ನಗಿ ಇತ್ತs
ಏನೊಂದು ನಗಿ ಇತ್ತ ಏಸೊಂದು ನಗಿ ಇತ್ತ
ಏರಿಕಿ ನಗಿ ಇತ್ತs ॥ಪಲ್ಲವಿ॥

ನಕ್ಕೊಮ್ಮೆ ಹೇಳ ಚೆನ್ನಿ ಆ ನಗಿ ಇತ್ತಿತ್ತ
ಹೋಗೇತಿ ಎತ್ತೆತ್ತs ॥ಅನುಪಲ್ಲವಿ॥

೧
ಕಣ್ಣಾನ ಬೆಳಕೇನs ಮಾರ್‍ಯಾಗಿನ ತುಳುಕೇನ
ತುಟಿಯಾಗಿನ ಝುಳುಕೇನ
ಉಡುಗಿಯ ಮಾಟೇನs ನಡಿಗಿಯ ಥಾಟೇನ
ಹುಡುಗಿ ಹುಡುಗಾಟೇನ!

೨
ಕಂಡ್ಹಾಂಕಾಣsಲಿಲ್ಲ ಅಂದ್ಹಾಂಗನ್ನsಲಿಲ್ಲ
ಬಂದ್ಹಾಂಗ ಬರಲಿಲ್ಲಾ
ಚಂದಾನ ಒಂದೊಂದ ಅಂದೇನಿ ಬೇರೊಂದ
ಅರಿವನs ಇರಲಿಲ್ಲ!

೩
ಬಡತನದ ಬಲಿಯಾಗ ಕರುಳಿನ ಕೊಲಿಯಾಗ
ಬಾಳ್ವಿಯ ಒಲಿಮ್ಯಾಗ

ಸುಟ್ಟು ಹಪ್ಪಳದ್ಹಾಂಗ ಸೊರಗಿದಿ ಸೊಪ್ಪ್ಹಾಂಗ
ಬಂತಂತ ಮುಪ್ಪು ಬ್ಯಾಗ!

೪

ಕಣಕಣ್ಣ ನೆನಸೇನ ಮನಸಿಲೆ ಬಣಿಸೇನ
ಕಂಡೀಂತೆಂತೆಣಿಸೇನ
ಬಿಸಿಲುಗುದುರೀ ಏರಿ ನಿನ ನಗೆಯ ಸವ್ವಾರಿ
ಹೊರಟಿತ್ತು ಕನಸೇನ?

೫

ಮುಂಗಾರಿ ಕಣಸನ್ನಿ ಹಾಂಗ ನಿನ ನಗಿ ಚೆನ್ನಿ
ಮುಂಚ್ಯೊಮ್ಮೆ ಮಿಂಚಿತ್ತ
ನಿನ ಮಾರಿ ನಿಟ್ಟಿಗೆ ಹಚ್ಚಿ ದಿಟ್ಟಿ ದಿಟ್ಟಿಗೆ
ನೋಡ್ತೇನಿ ನಾನಿತ್ತ!

೬

ನಕ್ಕೊಮ್ಮೆ ಹೇಳ ಚೆನ್ನಿ ಆ ನಗಿ ಇತ್ತಿತ್ತ
ಹೋಗೇತಿ ಎತ್ತೆತ್ತs
ಹಳ್ಳದs ದಂಡ್ಯಾಗ ಮೊದಲಿಗೆ ಕಂಡಾಗ
ಏನೊಂದು ನಗಿ ಇತ್ತs
ಏನೊಂದು ನಗಿ ಇತ್ತ ಏಸೊಂದು ನಗಿ ಇತ್ತ
ಏರಿಕಿ ನಗಿ ಇತ್ತs।!!

* * *

# ಪ್ರಣಯ

**–ರಾ.ಯ. ಧಾರವಾಡಕರ**

The lunatic the lover and the poet are of the imagination all compact.

ಪ್ರಣಯ, ಪ್ರಣಯಿಗಳು ಎಂದಾಕ್ಷಣಕ್ಕೆ ಯುವಕ–ಯುವತಿಯರ ವಿವಾಹಪೂರ್ವ ಪ್ರಣಯದ ಚಿತ್ರವೇ ಕಣ್ಣೆದುರಿಗೆ ಬರುತ್ತದೆ. ಇಲ್ಲವೆ ಅನೀತಿಯುತದೇಹ ಸಂಬಂಧದ ಕಲ್ಪನೆ ಮೂಡುತ್ತದೆ. ತಂದೆಯ ಪ್ರೀತಿ, ತಾಯಿಯ ವಾತ್ಸಲ್ಯ, ಮಗುವಿನ ಮಮತೆ, ಗಂಡ–ಹೆಂಡಿರ ಮಾಗಿದ ದಾಂಪತ್ಯ–ಪ್ರೇಮ ಕಣ್ಣೆದುರಿಗೆ ಬರುವುದಿಲ್ಲ. ಪ್ರಣಯ ಕಾಯಿ : ಪ್ರೇಮ ಮಾಗಿದ ಹಣ್ಣು. ಕಾಯಿಗೆ ಒಗರು ಬಹಳ. ಮಾವಿನಕಾಯಿಗೆ ಇನ್ನೂ ಕೇರು ಇರುತ್ತದೆ. ಹಣ್ಣು ಸಿಹಿಯಾಗಿರುತ್ತದೆ. ಹೀಗಾಗಿ, ಪ್ರಣಯ ಶಬ್ದ ಎಷ್ಟೋ ಸಲ ಸವಕಲು ನಾಣ್ಯವಾಗಿದೆ. I love you ಎಂದಾಗ ಅದನ್ನು ನಂಬುವರೆಷ್ಟು ಜನ? ಅಂತಲೆ ಷೆಲ್ಲಿ – One word is too often profaned for me to frofane it; one feeling too falsely disdained for thee to disdain it ಎಂದು ಹೇಳಿ, ತಾನು ತನ್ನ ಪ್ರೇಯಸಿಗೆ ಅರ್ಪಿಸುವುದು ಈ ತರಹದ ಸವಕಲು ಪ್ರಣಯವನ್ನಲ್ಲ, I can give not, what men call love, but will thou accept not the worship that heart lifts above and the Heavens reject not –ಎಂದು ಪ್ರಾರ್ಥಿಸಿಕೊಂಡ. ಅವನು ತನ್ನ ಪ್ರೇಯಸಿಗೆ ಅರ್ಪಿಸುವುದು ಸವಕಲು ಪ್ರಣಯವನ್ನಲ್ಲ; ದೇವರೂ ನಿರಾಕರಿಸದ ಹೃದಯ ತುಂಬಿದ ಪೂಜೆ.

ವೀಕ್ಷಣೆ ಪ್ರಣಯದ ಪ್ರಥಮ ಹೆಜ್ಜೆ; ಮುಗುಳುನಗೆ ಎರಡು; ತದನಂತರ ಪ್ರಶಂಸೆ; ಆಕರ್ಷಣೆ; ಅನುರಕ್ತಿ; ಕ್ರೋಧ; ಮೋಹ ಇತ್ಯಾದಿ. ಭಗವದ್ಗೀತೆಯು ವಿಷಯಾಸಕ್ತಿಯ ಹಂತಗಳನ್ನು ಸರಿಯಾಗಿಯೇ

ವರ್ಣಿಸಿದೆ. 'ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷು ಉಪಜಾಯತೇ, ಸಂಗಾತ್ ಸಂಜಾಯತೇ, ಕಾಮಃ ಕಾಮಾತ್ ಕ್ರೋಧೋಭಿಜಾಯತೇ, ಕ್ರೋಧಾತ್ ಭವತಿ ಸಂಮೋಹಃ, ಸಂಮೋಹಾತ್ ಸ್ಮೃತಿವಿಭ್ರಮಃ, ಸ್ಮೃತಿಭ್ರಂಶಾತ್ ಬುದ್ಧಿನಾಶೋ ಬುದ್ಧಿ ನಾಶಾತ್ ಪ್ರಣಶ್ಯತಿ; ಯಾವುದೋ ವಿಷಯದ ಬಗ್ಗೆ ಚಿತ್ತ ಬಿಡದೆ ವಿಚಾರ ಮಾಡುವುದರಿಂದ, ಅದರಲ್ಲಿ ಅವನಿಗೆ ಅನುರಕ್ತಿ ಉಂಟಾಗುತ್ತದೆ: ಆ ಅನುರಕ್ತಿಯಿಂದ ಕಾಮ; ತಾನು ಕಾಮಿಸಿದ ವ್ಯಕ್ತಿಯ ಬಗ್ಗೆ ಎಲ್ಲರೂ ಪ್ರಶಂಸೆಯ ಮಾತುಗಳನ್ನೇ ಆಡಬೇಕು. ಯಾರಾದರೂ ಅವಳನ್ನು ಹೀಗಳೆಯುವುದು ಒತ್ತಟ್ಟಿಗಿರಲಿ. ಅವಳ ಬಗ್ಗೆ ಉದಾಸೀನವಾಗಿ ಮಾತನಾಡಿದರೂ, ಇವನಿಗೆ ಕ್ರೋಧ; ಕ್ರೋಧದಿಂದ ಸಂಮೋಹ; ಸಂಮೋಹದಿಂದ ಸ್ಮೃತಿ ವಿಭ್ರಮ; ಸ್ಮೃತಿಭ್ರಂಶದಿಂದ ಬುದ್ಧಿನಾಶ; ಬುದ್ಧಿನಾಶದಿಂದ ವಿನಾಶ. ನಾವು ಸ್ಮೃತಿವಿಭ್ರಮುದವರೆಗೂ ಹೋಗಬೇಕಾದ್ದಿಲ್ಲ; ಕ್ರೋಧ ಉಂಟಾಯಿತೆಂದರೆ ಸಾಕು, ಅವಿವೇಕತನಕ್ಕೆ ಪ್ರಾರಂಭ, ಕ್ರೋಧ ಹುಚ್ಚಿನ ತಮ್ಮ. ಕ್ರೋಧದ ಮುಂದಿನ ಹೆಜ್ಜೆಯೇ ಹುಚ್ಚು. ಕೋಪಿಷ್ಠನಾದ ವ್ಯಕ್ತಿ ಹಾರಾಡುವುದೇನು? ತಾರಾಡುವುದೇನು? ರೇಗಾಡುವುದೇನು? ಅರ್ಥಹೀನ ಬಡಬಡಿಸುವುದೇನು? ಅವುಡು ಕಚ್ಚುವುದೇನು? ಹುಚ್ಚಿನ ಅಲ್ಪ ಪ್ರಮಾಣವನ್ನು ಕಾಣಬೇಕಾದರೆ ಕೋಪಿಷ್ಠನನ್ನು ನೋಡಿದರೆ ಸಾಕು. ಕೋಪಿಷ್ಠ ಹುಚ್ಚಿನಿಂದ ಮೂರು ಬೆರಳು ಮಾತ್ರ ಈಚೆ ಇರುತ್ತಾನೆ.

ಆದ್ದರಿಂದ ಈ ಕ್ರೋಧ ಬುದ್ಧಿನಾಶಗಳ ಬೀಜವಾದ ಪ್ರಣಯದಿಂದ ವ್ಯಕ್ತಿ ದೂರವಿರಬೇಕು. ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ; ಸುತ್ತು ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ. ಪ್ರಣಯಿಯ ಕೋಡಂಗಿತನ ಕ್ಷಣಕ್ಷಣಕ್ಕೆ ವ್ಯಕ್ತವಾಗುತ್ತದೆ. ಏಕಸೂತ್ರವಿರದ ಅವನ ಮಾತು, ಕಾರಣವಿಲ್ಲದ ನಗೆ, ತದೇಕ ಧ್ಯಾನ–ಇವೆಲ್ಲವೂ ಅವನು ಎಂಥ ರೋಗಿಯಾಗಿದ್ದಾನೆಂಬುದನ್ನು ಸಾರಿ ಹೇಳುತ್ತವೆ. ಅವನು ಯಾವಾಗಲೂ ವಿಮನಸ್ಕ. ಕುಂಟನಿಗೆ ಎಂಟು ಚೇಷ್ಟೆ; ಪ್ರಣಯಿಗೆ ಸಾವಿರ ಚೇಷ್ಟೆ. ಕಂಪೆನಿಯಲ್ಲಿ ಅವನು ಬಫೂನ್, ಬೇವಕೂಫ್,

ಯಾರು ಅವನ ಬಗ್ಗೆ ಏನು ಗೇಲಿ ಮಾಡಿದರೂ ಅರ್ಥ ಮಾಡಿಕೊಳ್ಳದಷ್ಟು, ಅವನ ಕಿವಿ ಕಿವುಡಾಗಿರುತ್ತದೆ. ಕಣ್ಣಿಗೆ ಪೊರೆ ಬಂದಿರುತ್ತದೆ. ಕೆಮ್ಮು ಮತ್ತು ಪ್ರಣಯಗಳನ್ನು ಬಚ್ಚಿಡಲಾಗುವುದಿಲ್ಲ; ಅವು ಯಾವಾಗಲಾದರೂ ಸ್ಫೋಟಗೊಳ್ಳತಕ್ಕುವೇ.

ಛಳಿಜ್ವರ ಬರಬೇಕಾದರೆ ಮೈ ಬಿಸಿಬಿಸಿಯಾಗಿ ಛಳಿ ಬಂದು ಮನುಷ್ಯನನ್ನು ಮಲಗಿಸುತ್ತದೆ. ಪ್ರಣಯ, ಛಳಿಜ್ವರದ ಹಾಗೆ ನಿಧಾನವಾಗಿ ಬರುವುದಿಲ್ಲ. Love ನಾಯಿಯ ಹಾಗೆ ಔವ್ ಎಂದು ಕಚ್ಚುತ್ತದೆ. ಹುಚ್ಚಿನಲ್ಲಿ, ಪ್ರಣಯದಲ್ಲಿ ದೂರ ಹೋದವರನ್ನು ವಾಪಸು ಕರೆತರುವುದು ಬಹಳ ಕಠಿಣ. What is love? ಎಂದು ಬೈರನ್ ಪ್ರಶ್ನೆ ಕೇಳಿ, It is a doll dressed up for idleness to cosset, nurse and dandle; a thing of soft misnomers, so divine by loving, and so goes on yawning and doting a whole summer long. ಕಣ್ಣಿಗೆ ಪೊರೆ ಬಂದ ಈ ಪ್ರಣಯಿಗೆ ನೆರೆಮನೆಯ ಕಪ್ಪು ಕಮಲೆ, ಕ್ಲಿಯೋಪಾತ್ರ, ರಂಭೆ, ಊರ್ವಶಿ, ಹೆಲೆನ್ ಆಫ್ ಟ್ರಾಯ್, ಅವಳ ಧ್ವನಿ ಸಂಗೀತ, ಅವಳ ನಡೆ ಲಾಸ್ಯ. ಅವಳ ನಗೆ ಹುಣ್ಣಿಮೆಯ ಬೆಳದಿಂಗಳು. ಹೀಗಾಗಿ ಪ್ರಣಯದ ಕಳ್ಳುಸುಕಿನಲ್ಲಿ ಸಿಕ್ಕವನನ್ನು ಮೇಲೆಬ್ಬಿಸುವುದು ಕಠಿಣ; ಅವನು ಮುಳುಗುತ್ತ ಹೋಗುವವನೇ. ಮಲುಹಣಿಯ ಪ್ರೇಮಕ್ಕಾಗಿ ಕೊರೆಯುವ ಚಳಿಯಲ್ಲಿ ಅವಳ ಮನೆಯ ಮುಂದು ನಿಂತ ಮಲುಹಣ ತಾನು ಹಿಮದಲ್ಲಿ ಮುಚ್ಚಿಹೋದರೂ, ಅವನಿಗೆ ಪ್ರಜ್ಞೆ ಬರಲಿಲ್ಲ. ಈ ಮಾನವ ಪ್ರಣಯ ಅವನಲ್ಲಿ ದೈವಭಕ್ತಿಗೆ ಮಾರ್ಗ ಮಾಡಿಕೊಟ್ಟಿತು. ಆದರೆ, ಈ ಸೈಪು ಎಷ್ಟು ಜನಕ್ಕಿರುತ್ತದೆ?

ಆದ್ದರಿಂದ ಪ್ರಣಯದ ಬಗ್ಗೆ ಮನುಷ್ಯ ಜಾಗರೂಕನಾಗಿರಬೇಕು. ಅದು ಕೆಮ್ಮು ನೆಗಡಿ ಇದ್ದಹಾಗೆ ತುಂಬಾ ಸಾಂಕ್ರಾಮಿಕ. ಪ್ರಣಯ ಪ್ರಥಮ ದರ್ಶನದಲ್ಲಿಯೇ ಹಿಡಿದುಕೊಂಡುಬಿಡುತ್ತದೆ. Whoever loved that loved not at first sight ಪ್ರಥಮ ದರ್ಶನದಲ್ಲಿಯೇ ಪ್ರಣಯ ಮಾಡದವರು ಯಾರಿದ್ದಾರೆ? ಆದರೆ, ದುರ್ದೈವದ ಮಾತು.

ಶ್ರೇಯಸ್ಸಿಗೆ ಬಹುವಿಘ್ನಗಳಿರುವಂತೆ ಪ್ರಣಯಕ್ಕೂ ಸಾವಿರ ವಿಘ್ನಗಳು. ಪ್ರೀತಿಸಿದವರು ಮದುವೆಯಾದರು ಎಂಬ ರಾಜ–ರಾಣಿಯರ ಕಥೆ ತುಂಬ ಅಪರೂಪ. ತಾಯಿ–ತಂದೆಗಳು, ಬಂಧು–ಬಾಂಧವರು ಸಮಾಜ ಈ ಎಲ್ಲ ಅಡೆತಡೆಗಳನ್ನು ದಾಟಿ ಪ್ರಣಯ ಫಲ ಬಿಡಬೇಕು. ಪ್ರಣಯಕ್ಕಾಗಿ ಸಾಮ್ರಾಜ್ಯತ್ಯಾಗ ಮಾಡಿದವರಿದ್ದಾರೆ; ಅದರ ಹಾದಿಯಲ್ಲಿ ಮುಗ್ಗರಿಸಿದ ರೋಮಿಯೋ ಜ್ಯೂಲಿಯಟ್ಟರು. ಲೈಲಾ–ಮಜನುಗಳು ಎಷ್ಟೋ! The course of true love seldom runs smooth. ಪ್ರಣಯ ಪ್ರವಾಹ ಸರಳವಾಗಿ ಹರಿಯುವುದು ತುಂಬಾ ಅಪರೂಪ.

ಹೀಗೆಂದಾಕ್ಷಣಕ್ಕೆ, ಪ್ರಣಯ ಉದಾತ್ತೀಕರಿಸುವುದಿಲ್ಲ ಎಂದೇನೂ ಅಲ್ಲ. ಅದರ ಅಮೃತಸಿಂಚನ ಅನೇಕ ಮೃತಪ್ರಾಯರಿಗೆ ಜೀವಸಂಜೀವಿನಿಯನ್ನು ಒದಗಿಸಿದೆ. ಅದರ ಕುಲುಕುಲು ನಗೆಗೆ ಗಿಡಮರಗಳು ಫಲಿಸಿವೆ. ಅದರ ಪಾದಾಘಾತಕ್ಕೆ ಅಶೋಕ ಹೂಬಿಟ್ಟಿದೆ. ವಿಕಸತಿ ಬಕುಲಃ ಸೀದಗಂಡೂಷಸೇಕಾತ್. ಕುರೂಪಿ ಕಪ್ಪೆ ನಿರಾಶೆಯ ಕೊಳದಲ್ಲಿ ಮುಳುಗಿದಾಗ ಚೆಲುವೆ ರಾಜಕುಮಾರಿ ಅಂತಃಕರಣದ ಮುತ್ತು ಕೊಟ್ಟಾಗ, ಅದು ಸುಂದರ ರಾಜಕುಮಾರನಾಗಿ ಪರಿವರ್ತಿತವಾಯಿತೆಂದು ಆಂಗ್ಲ ಜನಪದ ಕಥೆ ಹೇಳುತ್ತದೆ. ಸೋತು ನಿರಾಶೆಯಲ್ಲಿ ಹೊಟ್ಟೆ ಹೊಸೆಯುವ ಹುಳುಗಳು ಕೂಡ ತಲೆ ಎತ್ತಿ ಅಭಿಮಾನದಿಂದ ಸೆಟೆದು ನಿಲ್ಲುವಂತೆ ಮಾಡಿದೆ ಪ್ರಣಯ. ಅವರವರ ಜೀವಕ್ಕೊಂದು ಜೀವಕಳೆ ಕೊಟ್ಟಿದೆ. ಆದರೆ, ಪ್ರಣಯದಲ್ಲಿ ಗೆದ್ದವರಿಗಿಂತ ಸೋತವರೇ ಹೆಚ್ಚು!

ವ್ಯಕ್ತಿಗಳನ್ನು ಅಳೆಯುವುದರಲ್ಲಿ ಪುರುಷರಿಗಿಂತ ಸ್ತ್ರೀಯರೇ ಮಿಗಿಲು. ಗಂಡು ದಿಟ್ಟಿಸಿ ನೋಡಬೇಕಾದುದನ್ನು, ಹೆಣ್ಣು ಒಂದು ತೇಲುಗಣ್ಣಿನಲ್ಲಿ ನೋಡಿರುತ್ತಾಳೆ. ಅದನ್ನು ಸಮಗ್ರವಾಗಿ ಗುರುತಿಸಿರುತ್ತಾಳೆ, ಅಳೆದಿರುತ್ತಾಳೆ. ಪ್ರಸಂಗ ಬಂದಾಗ ತನ್ನ ನೆನಪಿನ ಗುದಾಮಿನಿಂದ ಈ ಸರಕನ್ನು ಹೊರಗೆ ತೆಗೆಯುತ್ತಾಳೆ. ಗಂಡು ಬಯಲು ಬಂಗಾರ, ಅಡವಿಗಂಟು. ಸ್ತ್ರೀಯರ ನಾಲಿಗೆ ಪುರುಷರ ನಾಲಿಗೆಗಿಂತ ಹರಿತವೇನೋ ನಿಜ. ಅವರು ಮಾತಾಡಲು ಆರಂಭಿಸಿದರೆ ಜೋಗದ ಜಲಪಾತ. ಪಕ್ಷಿಗಳು

ಗೂಡು ಸೇರುತ್ತವೆ. ಅದಕ್ಕೆ ಪೂರ್ಣವಿರಾಮವೇ ಇರುವುದಿಲ್ಲ. ನೈಗರಾ ಧಬಧಬೆಯನ್ನು ನೋಡಲು ವಿದ್ಯಾರ್ಥಿನಿಯರ ತಂಡವನ್ನು ಕರೆದುಕೊಂಡು ಹೋದ ಅಧ್ಯಾಪಕರೊಬ್ಬರು ವಿದ್ಯಾರ್ಥಿನಿಯರ ಬಿಡುವಿಲ್ಲದ ಚಿಲಿಪಿಲಿಗೆ ಬೇಸತ್ತು, ನೈಗರಾದ ಎದುರು ಅವರನ್ನು ನಿಲ್ಲಿಸಿ, “ಇದು ನೈಗರಾ ಧಬಧಬೆ. ಇದರ ಶಬ್ದ ಮೈಲಿಗಳಾಚೆ ಕೇಳಿಬರುತ್ತದೆ. ಈ ಶಬ್ದಕ್ಕೆ ಎಲ್ಲರೂ ಬೆಚ್ಚಿಬಿದ್ದಿದ್ದಾರೆ. ನೀವೂ ಸ್ವಲ್ಪ ಒಮ್ಮೆ ಮಾತು ನಿಲ್ಲಿಸಿದರೆ ನಿಮಗೂ ಅದು ಕೇಳಿಸುತ್ತದೆ” ಎಂದು ಹೇಳಿದರಂತೆ. ವಿದ್ಯಾರ್ಥಿನಿಯರು ಏನು ಮಾಡಿದರೋ ಗೊತ್ತಿಲ್ಲ. ಅಂತೂ ನೈಗರಾ ಶಬ್ದವನ್ನು ಮುಳುಗಿಸುವಷ್ಟು ಅವರ ಧ್ವನಿ.

ಆದರೆ, ಪ್ರಣಯದ ವಿಷಯ ಬಂದಾಗ ಅವರು ರಿಸೀವಿಂಗ್ ಎಂಡ್‌ದಲ್ಲಿ ಇರುತ್ತಾರೆ. ಪ್ರಣಯದಲ್ಲಿ ಸ್ತ್ರೀಯರು ನಾಲಿಗೆಯಿಂದ ಮಾತನಾಡದೇ ಕಣ್ಣಿನಿಂದಲೇ ಮಾತನಾಡುತ್ತಾರೆ. ಅನುಕಂಪ, ಆಶ್ಚರ್ಯ, ಅದ್ಭುತ, ಪ್ರಶಂಸೆ, ಕ್ರೋಧ, ತುಂಟತನ–ಎಲ್ಲವೂ ಅವರ ಕಣ್ಣಿನಲ್ಲಿಯೇ ವ್ಯಕ್ತವಾಗುತ್ತವೆ. ಸ್ತ್ರೀಯರ ಕಣ್‌ಗುಲಾಬಿ ಅರಳಿದಾಗ, ಯಾರ ಹೃದಯ ತಾನೆ ಝುಲ್ ಎನ್ನಲಿಕ್ಕಿಲ್ಲ! ಹೂಡಿ ಹಣ್ಣಿದ ಜಗದ ಜಂತ್ರವ ತಾನಾಡಿಸಬಲ್ಲ ಅಲ್ಲಮಪ್ರಭುವನ್ನು ಮಾಯೆಗೆ ವಿಮಳೆ ಕಣ್ ಮಾತಿನಿಂದಲೇ ತೋರಿಸಿದಳು. ಚಾಮರಸ ಹೇಳಿದ ಹಾಗೆ ಕಂಗಳಲಿ ಮಾಟಗಳು, ಸಂಮೋಹಗಳು, ನೇಹಕಾಹುಗಳು, ಕಂಗಳಲಿ ಸರ್ವ ಪ್ರಪಂಚಗಳು ಅಂಗನೆಯರಿಗೆ ಸಹಜ.

ಎಲ್ಲರೂ ಮಾಯಾ ಕೋಲಾಹಲರಾದ ಅಲ್ಲಮರಾಗಲು ಹೇಗೆ ಸಾಧ್ಯ? ಯಾಕೆಂದರೆ ಮಾಯೆ ಹರಿಯ ಎದೆಯನ್ನು ಮೆಟ್ಟಿದಳು. ಶಂಕರನ ಅರ್ಧಾಂಗದೊಳು ನೆಟ್ಟನೆ ಹರಿಸುಟಿಗೆಯಾಡಿದಳು, ಬ್ರಹ್ಮನ ಬಾಯಿ ಮುದ್ರಿಸಿದಳು, ಸುರನರೋರಗರೆಂಬ ಮರವೆಯ ಮರುಳತಂಡನವನ್ನು ತನ್ನ ತೊತ್ತಿರ ಮಾಡಿಕೊಂಡಳು; ಕಾವಿ–ಕಚ್ಚುಟ ತೊಟ್ಟ ಬಡ ಮುನಿ ಋಷಿಗಳನ್ನು ತನ್ನ ದಾವಣಿಯ ದನವಾಗಿ ಕಟ್ಟಿಹಾಕಿದಳು. ಅಂದಮೇಲೆ ಪ್ರಣಯದ ಮಾಯೆ ಎಂತೆಂಥವರನ್ನೋ ಮೂಲೆಗುಂಪು ಮಾಡಿದೆ. ಚಾರುದತ್ತ ಸಾಧುಪ್ರಾಣಿ, ಧಾರ್ಮಿಕ,

ಪರೋಪಕಾರಿ. ಲಕ್ಷಾಂತರ ಜನರಿಗೆ ದಾನಧರ್ಮ ಮಾಡಿ, ತನಗೆ ಬಡತನ ಬಂದಾಗ ನಿದಾಘಕಾಲೇಷು ಸೋದಕೋ ಹ್ರದೋನರಾಂಚ ತೃಷ್ಣಾಂ ಅವನೀಯ ಶುಷ್ಕವಾನ್ ಎಂದು ಪರಿತಪಿಸಿದವ. ಇಂಥ ಧರ್ಮಿಷ್ಠ ವ್ಯಕ್ತಿಯು ಕೂಡ ವಸಂತಸೇನೆ ಎಂಬ ವೇಶ್ಯೆಯ ಮೋಹಪಾಶದಲ್ಲಿ ಸಿಲುಕಿ, ಪಡಬಾರದ ಕಷ್ಟಗಳನ್ನು ಪಡಬೇಕಾಯಿತು. ಕೊನೆಗೆ ಯೌವನಂ ಅತ್ರ ಅಪರಾಧ್ಯತಿನತು ಚಾರಿತ್ರ್ಯಂ ಎಂದು ತನಗೆ ತಾನೇ ಸಮಾಧಾನ ಹೇಳಿಕೊಳ್ಳಬೇಕಾಯಿತು. ಜ್ಯೂಲಿಯಸ್ ಸೀಝರ್ ಮೂರು ಲೋಕದ ಗಂಡ, ಚಂಡಪ್ರಚಂಡ, ಈ ರೋಮೀಯ ಚಕ್ರವರ್ತಿಯ ವಿರುದ್ಧ ಯಾವ ಸಾಮ್ರಾಜ್ಯಗಳೂ ಉಳಿಯಲಿಲ್ಲ. ಇಸ್ಪೀಟು ಎಲೆ ಉರುಳಿಬಿದ್ದ ಹಾಗೆ. ಒಂದರ ಮೇಲೊಂದರಂತೆ ಉರುಳಿಬಿದ್ದವು. ಆದರೆ, ಅವನು ಯಾವ ವಿಷಗಳಿಗೆಯಲ್ಲಿ ಈಜಿಪ್ತ ದೇಶವನ್ನು ಗೆಲ್ಲಲು ಹೊರಟನೋ ಏನೋ! ಕ್ಲಿಯೋಪಾತ್ರ ಈಜಿಪ್ತದ ಸಾಮ್ರಾಜ್ಞಿ; ತ್ರಿಲೋಕ ಸುಂದರಿ. ಅವಳ ಕಟಾಕ್ಷವೀಕ್ಷಣಕ್ಕೆ ಎಂತೆಂಥ ಸಾಮ್ರಾಜ್ಯಗಳೇ ಉರುಳಿಬಿದ್ದವು. ಕುಲಗಿರಿಗಳೇ ಕೆಡೆದಿದ್ದವು. ಹಡಗುಗಳು ಮುಳುಗಿದ್ದವು. ಆದ್ದರಿಂದ ಅಂಥ ಕ್ಲಿಯೋಪಾತ್ರಳನ್ನು ಕಂಡ ಸೀಝರ್ ತನ್ನ ಪ್ರಬಲ ಖಡ್ಗವನ್ನು ಒರಗಿಸಿ ಸುಖನಿದ್ರೆಗೈದ. ಸೀಝರ್, ಈಜಿಪ್ತವನ್ನೇನೋ ಗೆದ್ದ: ಆದರೆ ಕ್ಲಿಯೋಪಾತ್ರ ಅವನನ್ನು ಗೆದ್ದಳು. ಸೀಝರ್‌ನ ನಂತರ ಈಜಿಪ್ತದ ಮೇಲೆ ಅಭಿಯೋಗ ಮಾಡಿದ ಪರಾಕ್ರಮಿ ವಾಗ್ಮಿ ಮಾರ್ಕ್ ಆ್ಯಂಟೊನಿಯ ಸ್ಥಿತಿಯೂ ಭಿನ್ನವಾಗಲಿಲ್ಲ. ವಿಜಿಗೀಷುವಾಗಿ ಅವನು ಈಜಿಪ್ತ ದೇಶವನ್ನು ಪ್ರವೇಶಿಸಿದಾಗ ಅವನನ್ನು ಬರಮಾಡಿಕೊಳ್ಳಲು ಚೆಲುವೆ ಕ್ಲಿಯೋಪಾತ್ರ ವಜ್ರ–ವೈಢೂರ್ಯಗಳಿಂದ ಖಚಿತವಾದ ತನ್ನ ನೌಕೆಯಲ್ಲಿ ನೈಲ ನದಿಯಗುಂಟ ಹೊರಟಾಗ ಆ್ಯಂಟೊನಿಯನ್ನು ಸ್ವಾಗತಿಸಲು ಅಲ್ಲಿ ಪ್ರಜೆಗಳೇ ಇರಲಿಲ್ಲ. ಎಲ್ಲರೂ ಕ್ಲಿಯೋಪಾತ್ರಳ ಸೌಂದರ್ಯ ವೈಭವಗಳನ್ನು ನೋಡಲು ನೈಲ್ ನದಿಯ ಕಡೆಗೇ ಧಾವಿಸಿದ್ದರು. ಆ್ಯಂಟೊನಿಯ ಅನಂತರ ಬಂದ ಆಗಸ್ಟಸ್ ಸೀಝರ್ ಮಾತ್ರ ಇದಕ್ಕೆ ಅಪವಾದ. ಅವನನ್ನೂ ತನ್ನ ಬುಟ್ಟಿಗೆ ಹಾಕಿಕೊಳ್ಳಲು ಕ್ಲಿಯೋಪಾತ್ರ ಬಹುವಿಧವಾಗಿ ಪ್ರಯತ್ನಿಸಿದಳು. ಆದರೆ ಅವನು ಅವಳ ಯಾವ ಪ್ರಲೋಭನಕ್ಕೂ ಜಗ್ಗಲಿಲ್ಲ. ಕೊನೆಗೆ ತನ್ನ ಸೌಂದರ್ಯದ

ವರ್ಷದಲ್ಲಿ Here are my bluest veins to kiss, which kings have kissed and trembled kissing ಎಂದು ತನ್ನ ಸೌಂದರ್ಯದ ವೈಭವವನ್ನು ಹೇಳಿಕೊಂಡಳು. ಅದಕ್ಕೂ ಆಗಸ್ಟಸ್ ಮಣಿಯಲಿಲ್ಲ. ಆಗ ಅವನಿಗೆ "ಬುದ್ಧಿಯಿಲ್ಲದ ಕತ್ತೆ!" ಎಂದು ಬಿರುದು ಕೊಟ್ಟಳು. ಆದರೆ, ಪ್ರಣಯದ ವಿಷಯದಲ್ಲಿ ಬುದ್ಧಿಯಿಲ್ಲದ ಕತ್ತೆಯಾಗಿರುವವರೆಷ್ಟು ಜನ? ಎಲ್ಲರೂ ಕ್ಲಿಯೋಪಾತ್ರಳ ಸೌಂದರ್ಯ ಸಾಗರದಲ್ಲಿ ಮುಳುಗಿಹೋಗುವವರೆ. ಅಂತಲೇ ಕ್ಲಿಯೋಪಾತ್ರಳ ಮೂಗು ಸ್ವಲ್ಪ ಕಿರಿದಾಗಿದ್ದರೆ, ಜಗತ್ತಿನ ಇತಿಹಾಸವೇ ಬದಲಿಸುತ್ತಿತ್ತೋ ಏನೋ ಎಂದು ಹೇಳುವುದು.

ಪ್ರಣಯದ ಭೂತ ದೇಹವನ್ನು ಹೊಕ್ಕಿತೆಂದರೆ, ತನ್ನ ವಸ್ತುವನ್ನು ದೊರಕಿಸಿದ ಹೊರತು ಅದಕ್ಕೆ ಉಪಶಮನವಿಲ್ಲ. ಅದು ಸಾಮ್ರಾಟರ ಮೈಯನ್ನು ಹೊಕ್ಕು ವಶಪಡಿಸಿಕೊಂಡಂತೆ ಎಂತೆಂಥ ಪ್ರಾಜ್ಞರ, ತಪಸ್ವಿಗಳ, ದೇಹವನ್ನು ಹೊಕ್ಕು ಅವರನ್ನು ಸದೆಬಡಿದಿದೆ.

* * *

ಷೇಕ್ಸ್‌ಪಿಯರನ ಕಾವ್ಯದಲ್ಲಿಯಂತೆ, ಜೀವನದಲ್ಲಿಯೂ ಪುರುಷ ಬೇಟೆಗಾರ. ಸ್ತ್ರೀ ಬೇಟೆಯ ವಸ್ತುವಾದ ಜಿಂಕೆ. ಹೆಣ್ಣನ್ನು ಬೆಂಬತ್ತಿ ಧಾವಿಸಿದ ಪುರುಷ ಅವಳ ಅವಜ್ಞೆಗೆ ಗುರಿಯಾಗಿ ಸೋತು ನಿರ್ವಿಣ್ಣನಾಗುತ್ತಾನೆ.

The shepherd in virgil wooed and found himself native of the rocks ವರ್ಜಿಲ್‌ನ ಕಾವ್ಯದಲ್ಲಿನ ಕುರುಬ ಪ್ರೀತಿ ಮಾಡಿ ಅಡವಿ ಪಾಲಾದ. ಸಿರಿಂಕ್ಸ್ ಸುರಸುಂದರಿಯನ್ನು ಬಯಸಿದ ಸುಗ್ಗಿಯ ದೇವ ಪ್ಯಾನ್ ತನ್ನ ಅಳಲನ್ನು ತೋಡಿಕೊಂಡ, ಅವಳನ್ನು ಹಿಡಿಯಲು ಅವನು ಬೆಂಬತ್ತಿ ಹೋದಾಗ ಅವಳು ನದಿಯ ದಡದಲ್ಲಿ ಮೆಳೆಯಾಗಿ ನಿಂತಳು. ಹೆಣ್ಣನ್ನು ಹಿಡಿಯಹೋದ ಪ್ಯಾನ್ ಮೆಳೆಯ ಬಿದಿರನ್ನು ತಬ್ಬಿಕೊಳ್ಳಬೇಕಾಯಿತು. ಅಂದಿನಿಂದಲೂ ಪ್ಯಾನ್ ಆ ಬಿದಿರನ್ನೇ ತನ್ನ ಸಂಗೀತವಾದ್ಯವನ್ನಾಗಿ ಮಾಡಿಕೊಂಡು ಅದನ್ನು

ನುಡಿಸುತ್ತಿದ್ದಾನಂತೆ. ಸೂರ್ಯದೇವ ಎಪೋಲೊನ ಎದುರಿಗೆ ತನ್ನ ಸಂಕಟವನ್ನು ತೋಡಿಕೊಳ್ಳುವಾಗ ಸಿರಿಂಕ್ಸಳನ್ನು ಒಲಿಸಿಕೊಳ್ಳಲು ತಾನು ನುಡಿಸಿದ ಸಂಗೀತದ ಬಗ್ಗೆ ಹೀಗೆ ಹೇಳುತ್ತಾನೆ:

ಪ್ರಣಯ, ಶಲ್ಯದ ಹಾಗೆ ನಮ್ಮ ಹೃದಯದಲ್ಲಿ ತಿವಿಯುತ್ತದೆ. ನಮ್ಮ ಹೃದಯದಿಂದ ರಕ್ತ ಒಂದೇ ಸಮನೆ ಚಿಲ್ಲೆಂದು ಚಿಮ್ಮುತ್ತಿದೆ.

ಹೆಣ್ಣೇ ಬೆಂಬತ್ತಿ ಬಂದ ಮುರುಳಸಿದ್ಧರಂಥವರ, ಅಲ್ಲಮಪ್ರಭುಗಳಂಥವರ ಉದಾಹರಣೆಗಳು ವಿರಳ. 'ಮರುಳ ಮಾಡಾಕ ಹೋಗಿ ಮರುಳಸಿದ್ಧನ ನಾರಿ ಮರುಳಾಗ್ಯಾಳೊ ಜಂಗಮಯ್ಯಗ, ಕಿನ್ನರಿ ಆಗ್ಯಾಳೊ ಕೈಯ್ಯಾಗ ನುಡಿದಾಳ ಬಂಧಾಂಗ ಮೈಯಾಗ.'

ಇದು ಪ್ರಣಯ ಸಾಗಿಬಂದ ದಾರಿ. ಇಷ್ಟೆಲ್ಲ ಗೊತ್ತಿದ್ದೂ ಮನುಷ್ಯ ಪ್ರೀತಿಸುವುದನ್ನು ಬಿಟ್ಟಿಲ್ಲ. (ಪ್ರಣಯದ ವಿರುದ್ಧವಾಗಿ ಟನ್ನುಗಟ್ಟಲೆ ಉಪದೇಶವಿದ್ದರೂ ಅದು ಕಾರ್ಯಾಚರಣೆಗೆ ಬರುವುದು ಅಪರೂಪ. ಹಾಗೆ ನೋಡಿದರೆ ಪ್ರಣಯದ ಗೊಬ್ಬರ ಏಳದೆ ಯಾವ ಪುರುಷ ದೊಡ್ಡವನಾಗಿದ್ದಾನೆ?).

* * *

ಓದು ಪಠ್ಯ

# ಚೈತನ್ಯದ ಚಿಲುಮೆ ಯುವ ಶಕ್ತಿ

**–ಎಸ್ಕೆ ಹಳೆಯಂಗಡಿ**

ಕಪ್ಪು ಇದ್ದಿಲನ್ನು ನೀರಿನಲ್ಲಿ ಇಲ್ಲವೇ ಹಾಲಿನಲ್ಲಿ ತೊಳೆದರೂ ಅದರ ಮಸಿ ಹೋಗದು. ಅದನ್ನೇ ಸುಡುವ ಬೆಂಕಿಯಲ್ಲಿ ಹಾಕಿದಾಗ ಕಪ್ಪು ಇದ್ದಿಲ ತುಂಡೂ ದೇದೀಪ್ಯಮಾನವಾಗಿ ಪ್ರಜ್ವಲಿಸುತ್ತದೆ. ನಮ್ಮ ಯುವಕರು ಸುಟ್ಟ ಇದ್ದಿಲಿನಂತಾಗಿದ್ದಾರೆ. ಅವರು ದೇಶ ಪ್ರೇಮವನ್ನು ಮೈಗೂಡಿಸಿಕೊಂಡಾಗ ಅದ್ಭುತ ಶಕ್ತಿಯಾಗಿ ಮಿಂಚಬಲ್ಲರು.

ಯುವಕರೆಂದರೆ ಎಳೆಯ ವಯಸ್ಸಿನವರು ಅಥವ ಯೌವನಾವಸ್ಥೆಯಲ್ಲಿರುವವರು ಎಂದು ಭಾವಿಸಲಾಗದು. ಉತ್ಸಾಹ, ಧೈರ್ಯ, ಸ್ಥೈರ್ಯ, ಸಾಹಸ, ಪರಾಕ್ರಮ, ಭಕ್ತಿ, ಶಕ್ತಿ ಇವು ಯುವಕರ ಮುಖ್ಯ ಲಕ್ಷಣಗಳು.

ಚಾರಿತ್ರ್ಯವೇ ಜೀವನ. ಚಾರಿತ್ರ್ಯವಿಲ್ಲದ ಬದುಕು ವ್ಯರ್ಥ. ದೇಶಪ್ರೇಮ ಚಾರಿತ್ರ್ಯಕ್ಕೆ ಬುನಾದಿ ಅಂದರೆ ಇಂದಿನ ಯುವಕರು ಕೇವಲ ಹಣ ಗಳಿಸುವುದರಲ್ಲಿ ವ್ಯಸ್ತಗೊಂಡು ಪೈಪೋಟಿ ನಡೆಸುತ್ತಿದ್ದಾರೆ. ಪ್ರತಿಯೊಬ್ಬರಲ್ಲೂ ಸದ್ಗುಣಗಳಿವೆ, ದುರ್ಗುಣಗಳಿವೆ. ಯೌವನದ ಹಂತದಲ್ಲಿದ್ದಾಗ ವಿವೇಕದಿಂದ ವರ್ತಿಸಿ ಸದ್ಗುಣಗಳನ್ನೇ ಪೋಷಿಸಬೇಕು. ಮನಸ್ಸು ಒಳ್ಳೆಯದನ್ನೇ ಆಲೋಚಿಸಬೇಕು. ಮಾನವನ ವ್ಯಕ್ತಿತ್ವದಲ್ಲಿ ಮುಕ್ಕಾಲು ಅಂಶ ಚಾರಿತ್ರ್ಯಗಳಿದ್ದಾಗ ಮಾತ್ರ ಮಾದರಿ ಮಾನವ ಎಂದು ಅವನನ್ನು ಕರೆಯಬಹುದು ಎಂದು ಅನುಭಾವಿಗಳು ಹೇಳುತ್ತಾರೆ.

ಮಾನವ ತನ್ನ ಜೀವನದಲ್ಲಿ ಮುಖ್ಯವಾದ ಮೂರು ತತ್ವಗಳನ್ನು ಪಾಲಿಸಬೇಕು. ದೈವ ಪ್ರೀತಿ, ಪಾಪ ಭೀತಿ, ಸಂಘ ನೀತಿ. ಇಂದು ನಮ್ಮಲ್ಲಿ ಪಾಪ ಪ್ರೀತಿ ಹೆಚ್ಚಿದೆ. ದೈವ ಪ್ರೀತಿ ಕಡಿಮೆಯಾಗಿದೆ. ಹೀಗಾಗಿ ನಾವು ಪತನದತ್ತ ಸಾಗುವಂತಾಗಿದೆ. ಶಿಸ್ತು ಮತ್ತು ನೈತಿಕತೆ ಮಾನವನ ಮುಖ್ಯ ಅಂಗಗಳು. ನಮ್ಮಲ್ಲಿ ನೈತಿಕತೆಯಿದ್ದರೆ ನಾವು ನಿಜವಾದ

ಮಾನವರಾಗುತ್ತೇವೆ. ಸಮಾಜ ಒಳಿತಾಗಬೇಕಾದರೆ ಯುವಕರಲ್ಲಿ ನೈತಿಕತೆಯಿರಬೇಕು.

ಪ್ರತಿದಿನ ಸೂರ್ಯೋದಯ, ಸೂರ್ಯಾಸ್ತಮಾನಗಳು ಕ್ರಮಬದ್ಧವಾಗಿ ನಡೆದುಕೊಂಡು ಬರುತ್ತಿದೆ. ಸೂರ್ಯನಿಗೆ ದ್ವಾಪರ, ಕಲಿಯುಗ ಎನ್ನುವುದಿಲ್ಲ. ಹಾಗೇನಾದರೂ ಏರುಪೇರಾಗುತ್ತಿದ್ದರೆ ಈ ಜಗತ್ತೇ ಉಳಿಯುತ್ತಿರಲಿಲ್ಲ. ಪ್ರಕೃತಿಯಲ್ಲಿ ಎಲ್ಲವೂ ಕ್ರಮಬದ್ಧವಾಗಿ ಸಾಗಿಕೊಂಡು ಬಂದಿದೆ. ಪಶು, ಕ್ರಿಮಿ, ಕೀಟ, ಜೀವ ಸಂಕುಲಗಳು ಪ್ರಕೃತಿಗೆ ಬದ್ಧವಾಗಿ ನಡೆದುಕೊಂಡು ಬರುತ್ತಿದೆ. ಆದರೆ ಮಾನವ ಮಾತ್ರ ಸ್ವಾರ್ಥದಿಂದಾಗಿ ಅಶಾಂತಿ, ಆತಂಕಗಳಿಗೆ ಗುರಿಯಾಗಿ ವಿನಾಶದತ್ತ ಸಾಗುತ್ತಿದ್ದಾನೆ. ಇಂದಿನ ಯುವ ಶಕ್ತಿ ಕ್ಷುಲ್ಲಕ ಆಕರ್ಷಣೆಗಳಿಗೆ ಬಲಿ ಬಿದ್ದು ದೈಹಿಕವಾಗಿಯೂ, ಮಾನಸಿಕವಾಗಿಯೂ ದುರ್ಬಲರಾಗುತ್ತಿದ್ದಾರೆ. ಶಾರೀರಿಕವಾಗಿ ದೃಢಕಾಯರಾಗಿ ಗಟ್ಟಿಮುಟ್ಟಾಗಿ ಚೈತನ್ಯದ ಚಿಲುಮೆಯಂತಿರಬೇಕು. ತಾರುಣ್ಯದ ಹೊಸ್ತಿಲಲ್ಲಿರುವ ೧೬–೧೮ರ ವಯಸ್ಸಿನ ಯುವ ಪಡೆಗಳನ್ನು ಹತ್ತಿರದಿಂದ ಸೂಕ್ಷ್ಮವಾಗಿ ನೋಡುವಾಗ ಮನಸ್ಸಿಗೆ ಬಹಳ ದುಃಖವಾಗುತ್ತದೆ. ಇದು ಸಾಕಷ್ಟು ಆಹಾರವಿಲ್ಲದೆ, ಸರಿಯಾದ ಸಾಕಣೆಯಿಲ್ಲದೆ ಉಂಟಾಗಿರುವ ದುರ್ಗತಿಯಲ್ಲ. ಇದು ತನ್ನ ಇಂದ್ರಿಯಗಳನ್ನು ಲಂಗುಲಗಾಮಿಲ್ಲದೆ ದುರುಪಯೋಗ ಪಡಿಸಿಕೊಂಡಿದ್ದರಿಂದ ಉಂಟಾದ ಕೆಟ್ಟ ಹವ್ಯಾಸಗಳ ಫಲವಾಗಿದೆ. ಅಮೂಲ್ಯವಾದ ತನ್ನ ಇಂದ್ರಿಯ ಶಕ್ತಿಗಳನ್ನು ಅಪವ್ಯಯ ಮಾಡಿಕೊಳ್ಳುವುದು ದೊಡ್ಡ ದುರಂತ.

ಗಡಿಯಾರ ಒಂದೊಂದು ಬಾರಿ ಟಿಕ್ ಟಿಕ್ ಎಂದಾಗಲೂ ನಮ್ಮ ಬದುಕಿನ ದಾರದ ಒಂದಷ್ಟು ಉದ್ದವನ್ನು ಕತ್ತರಿಸಿ ಕಡಿತಗೊಳಿಸುತ್ತದೆ. ಹಣವನ್ನು ವೆಚ್ಚ ಮಾಡದೇ ಉಳಿತಾಯ ಮಾಡಿಕೊಂಡು ಬಂದಾಗ ಅದು ನಮ್ಮ ಖಾತೆಯಲ್ಲೇ ಬಡ್ಡಿ ಸಹಿತ ಉಳಿತಾಯವಾಗಿ ವೃದ್ಧಿಯಾಗುತ್ತದೆ. ಆದರೆ ಯುವಕರು ಅವಿವೇಕದಿಂದ ತನ್ನ ಬದುಕನ್ನು ವ್ಯರ್ಥವಾಗಿ ನಿರುಪಯುಕ್ತಗೊಳಿಸುತ್ತಿದ್ದಾರೆ.

ವಿದ್ಯೆ–ವಿಜ್ಞಾನ ನಮ್ಮ ಯುವಕರ ಪ್ರಮುಖ ಅಗತ್ಯ ಎಂಬುದರಲ್ಲಿ

ಎರಡು ಮಾತಿಲ್ಲ. ಅದನ್ನು ಅವರು ಶ್ರಮ ಪಟ್ಟು ಸರ್ವತ್ಯಾಗದಿಂದ ವಶಪಡಿಸಿಕೊಳ್ಳಬೇಕು. ಅದಕ್ಕಾಗಿ ಯಾವುದೇ ಅಡ್ಡದಾರಿ ಹಿಡಿಯಬಾರದು. ಜತೆಗೆ ನಮ್ಮ ಭಾಷೆ, ನಮ್ಮ ಸಂಸ್ಕೃತಿ, ಆಧ್ಯಾತ್ಮಿಕ ಪರಂಪರೆಗಳನ್ನು ಎಂದೂ ಮರೆಯಬಾರದು. ವಿಶ್ವದ ಮಹಾನ್ ವಿಜ್ಞಾನಿಗಳೂ ದೈವಕ್ಕೆ ತಲೆ ಬಾಗಿದ್ದಾರೆ. ನಮ್ಮೆಲ್ಲರ ಮೇಲೊಬ್ಬ ಒಡೆಯನಿದ್ದಾನೆ. ಅವನನ್ನು ದೇವರು, ಪ್ರಕೃತಿ, ಶಕ್ತಿ ಯಾವ ಹೆಸರಿನಲ್ಲಿ ಬೇಕಾದರೂ ಕರೆಯಬಹುದು ಎಂದು ವಿಜ್ಞಾನಿ ಐನ್‌ಸ್ಟೀನ್ ಹೇಳಿದ್ದಾರೆ.

ಚಾರ್ಲ್ಸ್ ಡಾರ್ವಿನ್ ತನ್ನ ವಿಕಾಸವಾದವನ್ನು ಪ್ರತಿಪಾದಿಸುತ್ತಾ ವಿಕಾಸವು ಸತ್ಯ ಎನ್ನುವುದಾದರೆ ಅದು ಭಗವಂತ ಎಂಬ ಅಗೋಚರ ಶಕ್ತಿ ಇರುವುದರಿಂದಲೇ ಸಾಧ್ಯವಾಗಿದೆ. ದೇವರೆಂಬ ಅದ್ಭುತ ಶಕ್ತಿ ಖಂಡಿತವಾಗಿಯೂ ಇದೆ. ಅಂತಿಮವಾಗಿ ಎಲ್ಲವೂ ಭಗವಂತನಲ್ಲೇ ಲೀನವಾಗುತ್ತದೆ ಎನ್ನುವ ಭಾರತೀಯ ಆಧ್ಯಾತ್ಮಿಕ ಚಿಂತನೆಯನ್ನು ಒಪ್ಪುತ್ತೇನೆ ಎಂದು ಹೇಳಿದ್ದಾನೆ. ನಮ್ಮ ಯುವ ಶಕ್ತಿ ವಿದೇಶಿ ಮೋಹಕ್ಕೆ ಬಲಿಯಾಗಬಾರದು. ಅವರ ವೈಜ್ಞಾನಿಕ ತಂತ್ರಜ್ಞಾನ ವೃತ್ತಿಪರ ಪ್ರಗತಿಪರ ಅಂಶಗಳನ್ನು ನಾವು ಬರಮಾಡಿಕೊಳ್ಳುವ, ಆದರೆ ಅವರ ಸಂಸ್ಕೃತಿ ನಮಗೆ ಬೇಡ.

ಯುವಕರು ನಮ್ಮ ದೇಶದ ಭಾಗ್ಯ ವಿಧಾತರಾಗಿದ್ದಾರೆ. ಅವರು ಮನಸ್ಸು ಮಾಡಿದರೆ ಈ ದೇಶವನ್ನು ಭೂಲೋಕದ ಸ್ವರ್ಗವನ್ನಾಗಿ ರೂಪಿಸಬಲ್ಲರು. ಅವರಿಗೆ ಯೋಗ್ಯ ಮಾರ್ಗದರ್ಶನದ ಕೊರತೆಯಿದೆ.

ನಮ್ಮ ದೇಶ ಹಿಂದಿನಿಂದಲೂ 'ವಿಶ್ವದ ಗುರು'ವಿನ ಸ್ಥಾನದಲ್ಲಿತ್ತು. ನಮ್ಮದು ಬಡ ದೇಶವಲ್ಲ. ಈ ದೇಶದಲ್ಲಿ ಐಕ್ಯತೆಯ ಹೊರತು ಬೇರೆ ಯಾವುದಕ್ಕೂ ಕೊರತೆ ಇರಲಿಲ್ಲ. ಹಿಂದೊಮ್ಮೆ ಭರತಖಂಡ ವೈದ್ಯಕೀಯ ಕ್ಷೇತ್ರದಲ್ಲಿ ಜಗತ್ತನ್ನೇ ಬೆರಗುಗೊಳಿಸುವಂತಹ ಸಾಧನೆಗಳನ್ನು ಮಾಡುತ್ತಿತ್ತು. ಪ್ರತಿಭಾನ್ವಿತ ವೈದ್ಯರು ನಮ್ಮಲ್ಲಿದ್ದರು. ಅಂದು ಉತ್ತರ ಭಾರತದ ವೈದ್ಯರಲ್ಲೊಬ್ಬರು ಎಂತಹ ಭೀಕರ ರೋಗವನ್ನಾದರೂ ಗುಣಪಡಿಸುತ್ತಿದ್ದರು. ಇದರಿಂದಾಗಿ ಆಶ್ಚರ್ಯಚಕಿತಳಾದ ಆ ಊರಿನ ರಾಣಿ, ವೈದ್ಯರನ್ನು ಅರಮನೆಗೆ ಬರಮಾಡಿಕೊಂಡಳು. ಅಂದಿನ

ಸಾಮಾಜಿಕ ಕಟ್ಟುಪಾಡಿನಂತೆ ಪುರುಷನೊಬ್ಬ ಪರ ನಾರಿಯನ್ನು ಮುಖಾಮುಖಿ ಭೇಟಿಯಾಗುವಂತಿರಲಿಲ್ಲ. ಹೀಗಾಗಿ ವೈದ್ಯ ಮತ್ತು ರಾಣಿಯ ಮಧ್ಯೆ ಪರದೆಯೊಂದನ್ನು ಇಳಿ ಬಿಡಲಾಯಿತು. ರಾಣಿಯ ಮಣಿಗಂಟಿಗೆ ನೂಲಿನ ದಾರವೊಂದನ್ನು ಕಟ್ಟಿಕೊಳ್ಳಲು ಹೇಳಿ ದಾರದ ಇನ್ನೊಂದು ತುದಿಯನ್ನು ವೈದ್ಯರು ತನ್ನ ಕಿವಿಗೆ ಸಿಲುಕಿಸಿಕೊಂಡು ನಾಡಿ ಪರೀಕ್ಷೆಯ ಪ್ರಕ್ರಿಯೆಗೆ ತೊಡಗಿದರು. ಆದರೆ ರಾಣಿ ಮಾತ್ರ ಆ ದಾರವನ್ನು ತಾನು ಕಟ್ಟಿಕೊಳ್ಳದೆ ಬೆಕ್ಕಿನ ಕಾಲಿಗೆ ಕಟ್ಟಿ ವೈದ್ಯರ ತೀರ್ಮಾನಕ್ಕೆ ಕಾದು ಕುಳಿತಳು. ವೈದ್ಯರು ಪರೀಕ್ಷೆ ಮಾಡಿ ಹೇಳಿದರು. ಪಟ್ಟದ ಮಹಾರಾಣಿ ಸಾಹೇಬರು ಇಲಿ ತಿಂದದ್ದರಿಂದ ಅನಾರೋಗ್ಯಕ್ಕೆ ಒಳಗಾಗಿದ್ದಾರೆ. ಇದಕ್ಕೆ ಔಷಧ ಅನಗತ್ಯ. ಎರಡು ದಿನದೊಳಗೆ ಸರಿಹೋಗುತ್ತಾರೆ ಎಂದು ಹೇಳಿ ಹೊರಟರು. ಈಗಲೂ ನಮ್ಮಲ್ಲಿ ಎಂತಹ ವೈದ್ಯಕೀಯ ತಜ್ಞರಿದ್ದಾರೆ. ಯುವಕರೇ ದೇಶಕ್ಕೆ ಆದರ್ಶ, ದೇಶದ ಉದ್ಧಾರ ಮಾಡಬೇಕಾದ ಉದಾತ್ತ ಶಕ್ತಿ ನಿಮ್ಮಲ್ಲಿದೆ. ನೀವು ಆದರ್ಶವಂತರಾಗುವ ಮೂಲಕ ದೇಶದ ಜನತೆಗೆ ಸಂತಸ ನೀಡಬೇಕು. ನೀವು ದೈವೀ ಗುಣಗಳನ್ನು, ನಾಯಕತ್ವ ಗುಣಗಳನ್ನು ಗಳಿಸಿಕೊಳ್ಳಬೇಕು. ಇದಕ್ಕೆ ಮೂಲಭೂತವಾಗಿ ಬೇಕಾಗಿರುವ ಅಂತಃಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. 'ದೇಶವು ಪ್ರಾಣಕ್ಕಿಂತ ಮಿಗಿಲು' ಎಂಬುದನ್ನು ನೆನಪಿಟ್ಟುಕೊಳ್ಳಬೇಕು.

* * *

# ಸಿನಿಮಾ

## ಆಶಯ :

ಈ ಶತಮಾನದ ಅತ್ಯದ್ಭುತವಾದ ಕೊಡುಗೆ ಚಲನಚಿತ್ರ/ಸಿನಿಮಾ ಚಲಿಸುವ ಚಿತ್ರಗಳ ಈ ಕೊಡುಗೆ ಜನಪ್ರಿಯ ಮನರಂಜನೆಯ ಮಾಧ್ಯಮವಾಯಿತು. ಒಂದುನೂರು ವರ್ಷಗಳನ್ನೂ ತುಂಬದ ಚಲನಚಿತ್ರ ಹೊಸ ಹೊಸ ತಂತ್ರಜ್ಞಾನಗಳೊಂದಿಗೆ ದಾಪುಗಾಲು ಹಾಕಿ ಮುನ್ನುಗ್ಗುತ್ತಿದೆ. ಗಂಡು–ಹೆಣ್ಣು ಮಾನವ ಸೃಷ್ಟಿಯ ಮೊದಲ ಕವಲು. ಜೀವನದ ಪ್ರತಿಕೃತಿ ಎನಿಸುವ ಕಲೆಯ ಪ್ರಕಾರಗಳೆಲ್ಲದರಲ್ಲಿಯೂ ಗಂಡು ಹೆಣ್ಣುಗಳ ಕ್ರಿಯೆ–ಪ್ರಕ್ರಿಯೆಗಳ ಪ್ರತ್ಯಕ್ಷ–ಪರೋಕ್ಷ ಸ್ಥಾಪನೆ ಇದ್ದೇ ಇದೆ. ರಂಗಭೂಮಿಯ ನಂತರ ಅದನ್ನೇ ಆಧರಿಸಿ, ವೈಜ್ಞಾನಿಕ ಸಾಧನಗಳನ್ನು ಬಳಸಿಕೊಂಡು ಜನಪ್ರಿಯ ದೃಶ್ಯಮಾಧ್ಯಮವಾದ ಸಿನಿಮಾ ಅತ್ಯಂತ ಪ್ರಬಲವಾಗಿ ಪ್ರಪಂಚದಾದ್ಯಂತ ಪಸರಿಸಿದೆ. ಸಿನಿಮಾದ ವಸ್ತು ಅದೇನೇ ಇರಲಿ ಹೆಣ್ಣು–ಗಂಡುಗಳ ಸಂಯುಕ್ತ ಪ್ರಕ್ರಿಯೆಯ ಮೂಲಕವೇ ಅದನ್ನು ಪ್ರತಿಪಾದಿಸಬೇಕಾಗಿರುವುದು ಅನಿವಾರ್ಯ. ಇದಕ್ಕೆ ಅಪವಾದವಾಗ ಬಹುದಾದ ನಿದರ್ಶನಗಳು ಇರಬಹುದೇನೋ. ಇದ್ದರೂ ಅವುಗಳ ಸಂಖ್ಯೆ ತೀರ ಕಡಿಮೆ ಎಂದರೆ ತಪ್ಪಾಗಲಾರದು.

ಜಗತ್ತಿನ ಎಲ್ಲಾ ಭಾಷೆಗಳಲ್ಲೂ ಚಲನಚಿತ್ರದ ವಸ್ತು ಹೆಣ್ಣು ಗಂಡನ್ನು ಆಧರಿಸಿದೆ. ಇನ್ನು ನಮ್ಮ ಕನ್ನಡ ಚಿತ್ರಗಳಲ್ಲೂ ತಾಯಿ, ತಂದೆ, ಅವಿಭಕ್ತ ಕುಟುಂಬ, ಪ್ರೇಮ, ದ್ವೇಷ, ಸಂದೇಹ, ಅಸೂಯೆ, ಅನುಸರಣೆ ಇವುಗಳ ಸುತ್ತಲೆ ಹೆಣೆದು ಸಾಗಿಬಂದವುಗಳೇ ಆಗಿರುತ್ತವೆ. ಸಿನಿಮಾಗಳು ಪೌರಾಣಿಕವಿರಬಹುದು ಅಥವಾ ಚಾರಿತ್ರಿಕವಾಗಿರಬಹುದು. ಅವುಗಳಲ್ಲಿ ಅತೀಂದ್ರಿಯ ಶಕ್ತಿ, ಸಾಹಸಗಳು ಬೆರೆಯುತ್ತಿದ್ದವಾದರೂ ಮೂಲಭೂತವಾಗಿ, ಪ್ರೇಮ, ಸಂಸಾರ ಸಂಬಂಧಗಳು ಇದ್ದೇ ಇರುತ್ತಿದ್ದವು. ಆಧ್ಯಾತ್ಮಿಕ ವಸ್ತುಗಳಲ್ಲೂ ಇವು ಅನಿವಾರ್ಯವೇ ಆಗಿದ್ದವು.

ಒಂದು ವಸ್ತುವನ್ನು ಕಥೆಯಾಗಿಸಿ, ಚಿತ್ರಕಥೆಯಾಗಿಸಿ ಅದಕ್ಕೆ ಜನ ಮೆಚ್ಚುವ ಸಂಭಾಷಣೆ ರಚಿಸಿ, ಅದನ್ನು ನೂರಾರು ದೃಶ್ಯಗಳಾಗಿ ವಿಭಜಿಸಿ, ಆಕರ್ಷಕವಾಗಿ, ವೇಗವಾಗಿ ಚಲಿಸುವಂತೆ ವಿನೂತನತೆಯನ್ನು ಹೆಣೆದು ಪ್ರೇಕ್ಷಕನಿಗೆ ತೋರಿಸುವ, ಅತ್ಯಂತ ವಿಸ್ತಾರವಾದ ಸಾಧ್ಯತೆಗಳಿವೆ. ವಿಶೇಷವಾದ ಆರಂಭ ಮತ್ತು ಅಂತ್ಯವನ್ನು ಸೃಜಿಸಿ ನೋಟಕನ ಹೃದಯದ ಸಹಸ್ಪಂದನವನ್ನು ಸಾಧಿಸಿಕೊಳ್ಳಲಾಗುತ್ತದೆ. ಅಭಿನಯ, ಸಾಹಿತ್ಯ, ಸಂಗೀತಗಳೇ ಮೊದಲಾಗಿ ಅನೇಕ ಕಲೆಗಳು ಮಿಳಿತಗೊಂಡು ಅದ್ಭುತವಾದ ಸನ್ನಿವೇಶವನ್ನು ನಿರ್ಮಿಸುತ್ತವೆ. ಆರಂಭದಲ್ಲಿ ನಾಟಕದಂತೆ ಚಿತ್ರದೃಶ್ಯಗಳನ್ನು ಅಳವಡಿಸಿಕೊಂಡು ಚಿತ್ರೀಕರಿಸುತ್ತಿದ್ದರು. ನಂತರದಲ್ಲಿ ಚಿತ್ರಮಾಧ್ಯಮಕ್ಕೆಂದೇ ಕಥಾ ನಿರೂಪಣೆ ಮಾಡುವ ರೂಢಿ ಆರಂಭವಾಯಿತು. ೧೮೯೫ರಲ್ಲಿ ಲೂಮಿಯರ್ ಸೋದರರು ಚಲಿಸುವ ಚಿತ್ರಗಳ ಪ್ರಥಮ ಪ್ರದರ್ಶನ ನೀಡಿದ ಮೇಲೆ ಭಾರತಕ್ಕೆ ಕಾಲಿಟ್ಟ ಚಲನಚಿತ್ರ ಉದ್ಯಮ ಮೂಕಿ ಚಿತ್ರಗಳನ್ನು ನಿರ್ಮಿಸಿ ೧೯೩೧ರಲ್ಲಿ ಟಾಕಿ ಚಿತ್ರಗಳ ನಿರ್ಮಾಣವನ್ನು ಪ್ರಾರಂಭಿಸಿದರು. ಈ ಪರಂಪರೆ ಕರ್ನಾಟಕಕ್ಕೂ ಕಾಲಿಟ್ಟಿತು. ಇಲ್ಲಿ ನಾಟಕರತ್ನ ಗುಬ್ಬಿ ವೀರಣ್ಣ, ಕೈಲಾಸಂ ಮೊದಲಾದವರು ಮೂಕಿಚಿತ್ರಗಳಲ್ಲಿ ಸಕ್ರಿಯವಾಗಿ ಕೆಲಸ ಮಾಡಿದರು. ಕರ್ನಾಟಕದಲ್ಲಿ ಮೂಕಿಯಿಂದ ಟಾಕಿಯಾದ ಮೊದಲ ಚಿತ್ರ ೧೯೩೪ರಲ್ಲಿ ಸಿದ್ಧವಾದ 'ಸತಿ ಸುಲೋಚನಾ' ಇಲ್ಲಿಂದ ಮೊದಲಾದ ಕನ್ನಡ ವಾಕ್ಚಿತ್ರ ತನ್ನ ಕ್ಷೇತ್ರದ ಮಿತಿಯಲ್ಲೂ ಕ್ರಿಯಾಶೀಲವಾಗಿ ಬೆಳೆದುನಿಂತಿದೆ.

ಈ ಆಶಯಕ್ಕೆ ಪೂರಕವಾಗಿ ಜಯಂತ ಕಾಯ್ಕಿಣಿಯವರ 'ಒಂದು ರಾಜಯೋಗ', ಪಿ. ಲಂಕೇಶರ 'ನಾನೂ ಸಿನಿಮಾ ಮಾಡಿದೆ', ಬರಗೂರು ರಾಮಚಂದ್ರಪ್ಪನವರ ಸಿನಿಮಾ 'ಒಂದು ಕಲೋದ್ಯಮ' ಮತ್ತು ವಿಕಾಸ್ ನೇಗಿಲೋಣಿಯವರ 'ಸೃಜನಶೀಲ ಕಲಾವಿದೆ ವೈಶಾಲಿ ಕಾಸರವಳ್ಳಿ' ಮತ್ತು ಪಠ್ಯಗಳನ್ನು ಅಭ್ಯಾಸ ಮಾಡಬಹುದು.

* * *

# "ನಾನೂ ಸಿನಿಮಾ ಮಾಡಿದೆ"

–ಪಿ. ಲಂಕೇಶ್

ಸಿನಿಮಾ! ಚಿಕ್ಕಂದಿನಲ್ಲೇ ಹುಚ್ಚು ಹಿಡಿಸುವ ಸಿನಿಮಾ! ನಾನಾಗ ಕೇವಲ ಆರು–ಏಳು ವರ್ಷದವನಿರಬೇಕು. ಮೂರು ಮೈಲಿ ದೂರದ ಚಿಕ್ಕ ಪಟ್ಟಣಕ್ಕೆ ಟೆಂಟ್ ಸಿನಿಮಾ ನೋಡಲು ಅಪ್ಪ ಕರೆದೊಯ್ಯುತ್ತಿದ್ದ. ಅವನ ಭುಜದ ಮೇಲೆ ಕುಳಿತುಕೊಂಡು ನಾಲ್ವಡಿ ಕೃಷ್ಣರಾಜರ ಕೊನೇ ಸವಾರಿಯನ್ನು ನೋಡಿದಂತೆಯೇ ಅದೇ ಭುಜದ ಮೇಲೆ ಸಾಗಿ ಸದಾರಮೆ, ಭಕ್ತ ಕುಂಬಾರ, ಚಿರಂಜೀವಿ ಅಥವಾ ಮಾರ್ಕಂಡೇಯ ಮುಂತಾದ ಚಿತ್ರಗಳನ್ನು ನೋಡಿದ್ದು ಈಗಲೂ ಮನಸ್ಸಿನಲ್ಲಿ ಹಚ್ಚ ಹಸಿರಾಗಿದೆ. ಹಾಗೆಯೇ ಮಿಡ್ಲ್‌ಸ್ಕೂಲಿಗೆ ಹೋಗುವಾಗ. ರಾತ್ರಿ 'ಆಟ' ಮುಗಿದ ಮೇಲೆ ತೆರೆ ಸುತ್ತುತ್ತಿದ್ದುದನ್ನು ನೋಡಿ ನಿಬ್ಬೆರಗಾಗಿದ್ದೆ. 'ಸಂಸಾರ ನೌಕ'ದ ಪಂತುಲು, ಢಿಕ್ಕಿ ಮಾಧವರಾವ್‌ಗಳೆಲ್ಲ ತೆರೆಯ ಹಿಂದೆ ಕೂಡ ಇಲ್ಲದಿದ್ದುದನ್ನು ನೋಡಿ ಅಚ್ಚರಿಯಾಗಿತ್ತು. ಅದೆಲ್ಲ ಕೇವಲ ನೆಳಲು ಬೆಳಕಿನ ವಿಚಾರವೆನ್ನಿಸಿ, ಬರೀ ಚಲಿಸುವ ಫೋಟೋ ಅನ್ನಿಸಿ ನಿರಾಶೆ ಕೂಡ ಆಗಿತ್ತು. ಆಮೇಲೆ ಆ ಬಗ್ಗೆ ಯೋಚಿಸಿದ್ದೆ–ಸಿನಿಮಾ ಕೇವಲ ಕತೆ ಹೇಳುವ, ರಂಜಿಸುವ 'ಆಟ'ವೆಂದು ತಿಳಿದಿದ್ದವನಿಗೆ ಅದೊಂದು ಕಲೆ ಅನ್ನಿಸಿತ್ತು. ಹದಿಹರೆಯದಲ್ಲಿ ಇಂಗ್ಲಿಷ್ ಚಿತ್ರಗಳನ್ನು ನೋಡಿದಾಗ ಮೈ ಕುದಿಯತೊಡಗಿ ಸ್ಫೋಟವಾಗಿತ್ತು. ಅನೇಕ ಚಿತ್ರಗಳ ನಡುವೆ ಬರ್ಗ್‌ಮನ್‌ನ 'ವೈಲ್ಡ್ ಸ್ಟ್ರಾಬೆರ್ರೀಸ್' ನನ್ನ ಅಚ್ಚುಮೆಚ್ಚಿನ ಚಿತ್ರವಾಗಿತ್ತು. ಅಲ್ಲದೆ ಚಿತ್ರ–ಕತ್ತಲ ಮೇಲೆ ಬೆಳಕು ಚೆಲ್ಲಿ ಮನಸ್ಸು ತಲುಪುವ ಸಿನಿಮಾ ಮನುಷ್ಯನ, ಕಲ್ಪನೆ, ಕನಸುಗಳೊಂದಿಗೇ ಬೆರೆತುಹೋಗುತ್ತದೆಂಬ ಸತ್ಯ ತಿಳಿಯತೊಡಗಿತು. ಅಲ್ಲದೆ ಸಿನಿಮಾ ನಟನಾಗುವ ಆಶೆ... ನಿಮಗೆ ಗೊತ್ತಿಲ್ಲವೆಂದು ಕಾಣುತ್ತದೆ. ಪ್ರತಿಯೊಬ್ಬ ಮನುಷ್ಯನಲ್ಲೂ ಒಂದಲ್ಲ ಒಂದು ಸಲ ಈ ಆಶೆ ಒಳಗಿನ ಒತ್ತಡವಾಗುತ್ತದೆ. ನಾನು ಬಲ್ಲ ಅತ್ಯಂತ ಸೌಮ್ಯ, ನಿಃಸ್ವಾರ್ಥ, ಖಾಸಗಿಯಾದ, ಯಶಸ್ವಿಯಾದ

ಮನುಷ್ಯನಲ್ಲೂ ಈ ಕ್ಯಾಮರಾ ಎದುರು ನಿಲ್ಲುವ ಆಶೆ ಇರುತ್ತದೆ. ಅಂಥವರೂ ಹಾಗೆ ನನ್ನೆದುರು ಹೇಳಿದ್ದಾರೆ, 'ಛಾನ್ಸ್'ಗಾಗಿ ಒತ್ತಾಯ ಮಾಡಿದ್ದಾರೆ. ಒಮ್ಮೆ ಒಂದು ಕತೆ ಬರೆಯಬೇಕೆಂದಿದ್ದೆ. ಜಗದ್ಗುರುವಿನ ಮಠವೊಂದರಲ್ಲಿ ಶೂಟಿಂಗ್ ನಡೆಯುತ್ತಿದ್ದಾಗ 'ಸ್ವಾಮಿ'ಯ ಪಾರ್ಟು ಮಾಡುವವ ನಾಪತ್ತೆಯಾಗಿದ್ದಾನೆ. ನಿರ್ದೇಶಕ ಯಥಾಪ್ರಕಾರ ಅಸಹಾಯಕನಾಗಿ ಒದ್ದಾಡುತ್ತಿದ್ದರೆ ಜಗದ್ಗುರು ಖದೀಮ, ನೀಚ ಸ್ವಾಮಿಯ ಪಾರ್ಟು ಮಾಡಲು ನಯವಾಗಿ ಪ್ರಭಾವ ಬೀರತೊಡಗುತ್ತಾನೆ. ತಾನು ಒಳ್ಳೆಯ ನಟನೆಂದು ನಂಬುವ, ಭಟ್ಟಂಗಿಗಳಿಂದ ಹೊಗಳಿಸಿಕೊಳ್ಳುವ ಜಗದ್ಗುರು ಮಠದ ತನ್ನ ಕೆಲಸಗಳನ್ನೆಲ್ಲ ಮರೆತು ಎರಡನೆ ಚಿತ್ರದಲ್ಲಿ ನಟಿಸಲು ಕೇಳಿಕೊಳ್ಳತೊಡಗುತ್ತಾನೆ... 'ಬ್ಲೂ ಏಂಜಲ್' ಕತೆಯನ್ನು ನೀವು ಕೇಳಿರಲಿಕ್ಕಿಲ್ಲ. ಅದು ನನ್ನ ಇನ್ನೊಂದು ಮೆಚ್ಚಿನ ಚಿತ್ರ.

ದೊಡ್ಡದಾಗಿ ನಕ್ಕೆ. ಟಿವಿಯಲ್ಲಿ ಪ್ರಸಾರವಾದ ನನ್ನ ಚಿತ್ರ ನೋಡಿದ ಅನೇಕರು ಚಿತ್ರ ಮೆಚ್ಚುತ್ತಲೇ ನನ್ನ ಅಭಿನಯವನ್ನು ಕೂಡ ಮೆಚ್ಚಿ ಕಾಗದ ಬರೆದಿದ್ದರು. ಕೈಗೂಡದ ನನ್ನ ಅನೇಕ ಆಶೆಗಳಲ್ಲಿ ಒಂದು ಅಭಿನಯ ಎಂಬುದು ಅವರಿಗೆ ಗೊತ್ತಿರಲಿಲ್ಲ. 'ಭಗ್ನನಟ'ನಾದ ನಾನು ಎಲ್ಲ ವಾಂಛಲ್ಯಗಳಿಂದ ದೂರವಾಗುತ್ತಿರುವಾಗ ನಕ್ಕು ನನ್ನ ಬಗ್ಗೆ ನಾನು ತಮಾಷೆ ಮಾಡಿಕೊಳ್ಳುವುದು ಸಾಧ್ಯವಾಗಿತ್ತು. ನೃತ್ಯ ಮತ್ತು ಗಾಯನ ಕೂಡ ಹೀಗೆಯೇ ನನಗೆ ಕೈಕೊಟ್ಟಿದ್ದವು.

ಅದೆಲ್ಲ ಸದ್ಯಕ್ಕೆ ಇರಲಿ.

ಮೊನ್ನೆ ದೂರದರ್ಶನದಲ್ಲಿ ಬಂದ ನನ್ನ 'ಪಲ್ಲವಿ' ಚಿತ್ರವನ್ನು ಕೆಲವರಾದರೂ ನೋಡಿರಬಹುದು. ದೂರದರ್ಶನದ ವೇಳೆಗಾಗಿ ಹೊಂದಿಸಲು ಉದಾರವಾಗಿ ಕತ್ತರಿ ಹಾಕಿಸಿಕೊಂಡ, ಹಲವಾರು ಸಹಾಯಕ ದೃಶ್ಯಗಳನ್ನೇ ಕಳೆದುಕೊಂಡು ಅಲ್ಲಲ್ಲಿ ವಿರೂಪಗೊಂಡ ಚಿತ್ರ ಪ್ರಸಾರಗೊಂಡಿತೆಂದು ನೋಡಿದವರು ನನಗೆ ಹೇಳಿದರು. ಪ್ರೇಮದಂತೆಯೇ ವಿಶ್ವಾಸಕ್ಕೆ ದೃಷ್ಟಿ ಮಂದ. ಹಲವಾರು ಊರುಗಳ ಜನ ಇದನ್ನೇ ನೋಡಿ ಪ್ರೀತಿಯ ಮಾತುಗಳನ್ನು ನನಗೆ ಬರೆದರು.

ಈ ಚಿತ್ರವನ್ನು ಹೊಗಳುವವರ ಪಕ್ಷದಲ್ಲಿ ಆರ್.ಕೆ. ನಾರಾಯಣ್, ಬ್ರಿಟಿಷ್ ಚಿತ್ರ ವಿಮರ್ಶಕರು, ಕನ್ನಡದ ಬುದ್ಧಿಜೀವಿಗಳಲ್ಲನೇಕರು ಇದ್ದಾರೆ. ಟೀಕಿಸುವವರಿಗೆ ಈ ಚಿತ್ರ ಬೇರೆ ಕಥಾಚಿತ್ರಗಳಂತಲ್ಲದೆ ಹರಿದು ಹಂಚಿಹೋದಂತೆ ಕಂಡಿದೆ. ಇಲ್ಲಿ ಕತೆ ನಿರೂಪಿಸುವ ಕ್ರಮ, ದೃಶ್ಯ ಜೋಡಣೆ, ಪಾತ್ರಪೋಷಣೆ ಮುಂತಾದ ಎಲ್ಲವೂ ಸಂಪ್ರದಾಯಕ್ಕೆ ತಕ್ಕಂತೆ ಇರದೆ ವಿಚಿತ್ರವಾಗಿವೆ. ಇದಕ್ಕೆ ಕಾರಣಗಳನ್ನು ಯಾವುದೇ ವ್ಯಾಮೋಹ, ಭ್ರಮೆ ಇಲ್ಲದೆ ಆಮೇಲೆ ಹೇಳುತ್ತೇನೆ.

ಅದಕ್ಕಿಂತ ಮುಂಚೆ, ಒಂದೆರಡು ಮಾತು ಹೇಳಬೇಕು. ಒಂಭತ್ತು ವರ್ಷದ ಹಿಂದೆ ಕೇರಳದ ಕಮ್ಯುನಿಸ್ಟ್ ಮಿತ್ರರು ಕೆಲವರು ಒಂದು ಚಿತ್ರ ಸಂಸ್ಥೆ ಮಾಡಿಕೊಂಡು ಹೊಸ ಅಲೆಯ ಚಿತ್ರವನ್ನು ಕೊಂಡುಕೊಳ್ಳುತ್ತಿದ್ದರು. ನನ್ನ 'ಪಲ್ಲವಿ'ಗಾಗಿ ಕೇಳಿದರು. ಹಣದ ತೊಂದರೆಯಲ್ಲಿದ್ದ ನಾನು ಅದನ್ನು ಸುಮಾರು ರೂ.೨೫,೦೦೦ಕ್ಕೆ ಮಾರಿದೆ. ಅಷ್ಟರಲ್ಲಿ ಆ ಚಿತ್ರಕ್ಕೆ ಹಲವಾರು ಪ್ರಶಸ್ತಿಗಳು ಬಂದಿದ್ದವು; ಬಹುಮಾನದ ರೂಪದಲ್ಲಿಯೇ ಒಂದೂಕಾಲು ಲಕ್ಷ ಬಂದಿತ್ತು. ಚಿತ್ರ ಮುಗಿಸಲು ಮಾಡಿದ್ದ ಸಾಲವನ್ನೆಲ್ಲ ತೀರಿಸಿದ್ದೆ. ಆದ್ದರಿಂದ ಈ ಚಿತ್ರ ಮುಂದೆ ಉಪಯೋಗಕ್ಕೆ ಬರಬಹುದೆಂಬ ನಿರೀಕ್ಷೆ ಇರಲಿಲ್ಲ. ಭವಿಷ್ಯದ ಬಗ್ಗೆ ಅಷ್ಟೊಂದು ಚಿಂತಿಸುವ ಮನುಷ್ಯ ಕೂಡ ನಾನಲ್ಲ. ಬರೀ ಹಣದ ವಿಚಾರವನ್ನೇ ಮುಂದುವರೆಸಿದರೆ, ಆಮೇಲೆ ದೂರದರ್ಶನ ಜನಪ್ರಿಯವಾಯಿತು. ನನ್ನ ಚಿತ್ರ ಕೊಂಡುಕೊಂಡಿದ್ದ ಕೇರಳದ ಮಿತ್ರರು ನಮ್ಮೆಲ್ಲರ ಚಿತ್ರಗಳಿಂದ ಹಣವನ್ನೇನೂ ಮಾಡಿರಲಿಲ್ಲ; ಅದಕ್ಕೆ ಬದಲು ಅವರು ಪಡೆದಿದ್ದ ಎಲ್ಲ ಚಿತ್ರಗಳಿಂದ ಏಳೆಂಟು ಲಕ್ಷ ಸಾಲ ಮಾಡಿ ಅದರ ಬಡ್ಡಿಯ ನರಕದಲ್ಲಿ ಸಿಕ್ಕಿಹಾಕಿಕೊಂಡಿದ್ದರು. ನಾಲ್ಕೈದು ತಿಂಗಳ ಹಿಂದೆ ಸಿಕ್ಕ ಮಿತ್ರರು 'ಪಲ್ಲವಿ'ಗೆ ದೂರದರ್ಶನದ ಜಾಕ್‌ಪಾಟ್ ಹೊಡೆಯಬಹುದೆಂದು ಹೇಳಿದರು. ಮೂರು–ನಾಲ್ಕು ಲಕ್ಷದಷ್ಟು ಹಣವನ್ನು ಟಿವಿ ಕೊಡಬಹುದೆಂದೂ ಬೇಕಾದರೆ ನಾನು 'ಪಲ್ಲವಿ'ಯನ್ನು ಸ್ವಲ್ಪ ಹೆಚ್ಚು ಹಣ ಕೊಟ್ಟು ಹಿಂದಕ್ಕೆ ಪಡೆಯಬಹುದೆಂದೂ ಸೂಚಿಸಿದರು.

ಅವರಿಗೆ ಹಣ ಹಿಂದಿರುಗಿಸಿ ಚಿತ್ರ ಪಡೆದು ಟಿವಿಯಿಂದ ದುಡ್ಡು

ಮಾಡುವುದು ಹೆಚ್ಚಲ್ಲ. ಆದರೆ ಕೆಲವು ತೊಂದರೆಗಳಿದ್ದವು. ಟಿವಿ ಸರ್ಕಾರಿ ಮಾಧ್ಯಮ. ಸರ್ಕಾರಕ್ಕೆ ಅರ್ಜಿಯೊಂದಿಗೆ ಪ್ರಶಸ್ತಿಗಳ ಫೋಟೋಗಳನ್ನೆಲ್ಲ ಕಳಿಸಿ ಬೇಡಿಕೊಳ್ಳುವುದು ನನ್ನಿಂದ ಆಗದ ಕೆಲಸ. ಅಲ್ಲದೆ ಕೇರಳದ ಮಿತ್ರರಿಗೆ ಹಣದ ಅವಶ್ಯಕತೆ ಇತ್ತು. ಅವರಿಗೆ ಹೇಳಿದೆ, "ನನಗೆ ಕಷ್ಟವಿದ್ದಾಗ ನನ್ನ ಚಿತ್ರ ಕೊಂಡಿದ್ದೀರಿ; ಆ ಬಗ್ಗೆ ನಾನು ಯೋಚಿಸಲು ಕೂಡ ಆಗುವುದಿಲ್ಲ. ಈ ಚಿತ್ರದಿಂದ ನಿಮಗೆ ಎರಡು ಲಕ್ಷವೇ ಬರಲಿ, ಹತ್ತು ಲಕ್ಷವೇ ಬರಲಿ, ಅದು ನಿಮ್ಮ ಹಣ. ನೀವೇ ಪಡೆದುಕೊಳ್ಳಿ" ಎಂದು ಹೇಳಿ ಕಳಿಸಿದೆ.

ಇದು ಔದಾರ್ಯಕ್ಕಿಂತ ಹೆಚ್ಚಾಗಿ ಮುಜುಗರಗಳಿಂದ ತಪ್ಪಿಸಿಕೊಳ್ಳುವ ಹುನ್ನಾರವಾಗಿತ್ತು. ಮಿತ್ರರು ನಾನು ಹೇಳಿದಂತೆ ಮಾಡಿದರು. ಚಿತ್ರ ಪ್ರಸಾರವಾಗುವ ಹಿಂದಿನ ದಿನವೇ ನನಗೆ ಗೊತ್ತಾದದ್ದು. ನನ್ನ ಮಗ (ಅದು ಚಿತ್ರೀಕರಣವಾದಾಗ ಆರು ವರ್ಷದವನು) "ನಾಳೆ ಮಧ್ಯಾಹ್ನ ಪಲ್ಲವಿ ಬರುತ್ತೆ" ಅಂದ. "ನಾಳೆ ಮಧ್ಯಾಹ್ನ" ನಾನು ಅದನ್ನು ನೋಡಲು ಮನೆಯಲ್ಲಿರಲಿಲ್ಲ.

ನನಗೆ ಇನ್ನೂ ನೆನಪಿದೆ. ಸರಿಯಾಗಿ ಹನ್ನೆರಡು ವರ್ಷದ ಹಿಂದೆ, ಭಾರತಕ್ಕೆ ತುರ್ತು ಪರಿಸ್ಥಿತಿ ಬಂದ ದಿನವೇ ಅದರ ಚಿತ್ರೀಕರಣ ಶುರುವಾಯಿತು. ಅಷ್ಟರಲ್ಲಿ ಚಿತ್ರಕತೆ ತಯಾರಿಸಿದ್ದೆ. ಹಣ ಸ್ವಲ್ಪವೇ ಇತ್ತು. ಈ ಚಿತ್ರದ ಬಜೆಟ್, ಶೂಟಿಂಗ್ ಮುಂತಾದ್ದನ್ನು ಕೇಳಿದ ವಿದೇಶೀಯರು ನಗುತ್ತಾರೆ. ನನ್ನ ಸಾಹಿತ್ಯ ಪ್ರೇಮಿಗಳಾದ ಹುಡುಗರು, ನನ್ನ ವಿದ್ಯಾರ್ಥಿಗಳಾಗಿದ್ದವರು ನನ್ನೊಂದಿಗಿದ್ದರು. ಸುಮಾರು ಒಂದು ತಿಂಗಳ ಕಾಲ ಹುಡುಕಿ ನಮ್ಮ ಚಿತ್ರದ ನಾಯಕಿಯನ್ನು ಆರಿಸಿದ್ದೆವು. ಈಕೆ ಕಣ್ಣಿಗೆ ಕಾಣಿಸದಷ್ಟು ಸಣ್ಣ ಇದ್ದ ಹುಡುಗಿ, ವಿಮಲಾ. ಸೀರೆ ಉಟ್ಟರೆ ಹೆಂಗಸಿನ ಭ್ರಮೆ ಹುಟ್ಟಿಸುತ್ತಿದ್ದ, ಬೇರೆ ಡ್ರೆಸ್‌ನಲ್ಲಿದ್ದರೆ ಹೈಸ್ಕೂಲಿನ ಹುಡುಗಿಯಂತೆ ಕಾಣುತ್ತಿದ್ದ ಹೆಣ್ಣುಮಗಳು, ಮಲ್ಲೇಶ್ವರದ ರಂಗನಾಥ ಬಡಾವಣೆಯ ಚಿಕ್ಕ ಮನಯೆಲ್ಲಿದ್ದ ಈಕೆ ಜಾಣೆ; ಕಂಡದ್ದು ಕೇಳಿದ್ದು ಮರೆಯದಂಥ ಜ್ಞಾಪಕ ಈಕೆಗೆ.

ನಾನು ಚಿತ್ರರಂಗಕ್ಕೆ ಹೊಸಬ. ಅನೇಕ ಚಿತ್ರಗಳನ್ನು ನೋಡಿದ್ದರೂ,

ಚಿತ್ರಗಳ ಮೂಲತಂತ್ರ ಗೊತ್ತಿದ್ದರೂ ಒಂದು ವಿಚಿತ್ರವಾಗುತ್ತದೆ. ವಾಸ್ತವ ಜಗತ್ತು ಕಲೆಯ ಲೋಕ ಸೇರುವಾಗ ಕೆಲವು ಒತ್ತಡ ಹೇರುತ್ತದೆ. ಚಿತ್ರದ ಪೂರ್ಣ ಅಂತಿಮ ಪರಿಣಾಮ ಗೊತ್ತಿರುವುದು ನಿರ್ದೇಶಕನಿಗೆ ಮಾತ್ರ. ಹೀಗಾಗಿ ನನ್ನ ಹಳೆಯ ಕಾದಂಬರಿಯೊಂದನ್ನು ಚಿತ್ರಕಥೆ ಮಾಡಿದ್ದ ನಾನು ಅದಕ್ಕೆ ಹೊಸತನ ತರಲು ಅನುಭವ ನೋಡುವ ವ್ಯಕ್ತಿಯನ್ನು ಬದಲಿಸಿದೆ. ಒಮ್ಮೆ ಸಿಟ್ಟಿನ ಆಧುನಿಕ ಹುಡುಗನ ಕತೆಯಾಗಿದ್ದ ಅದು ಈಗ ಹುಡುಗಿಯ ಮೂಲಕ ಅನುಭವ ನೋಡುವ ಕತೆಯಾಯಿತು. ಅದನ್ನು ಹೇಳುವಾಗ ಕೂಡ ಎಲ್ಲ ಕತೆಗಳಂತೆ ಒಂದು ಪ್ರಸಂಗದಿಂದ ಇನ್ನೊಂದಕ್ಕೆ ಸಾಗದೆ ಒಂದು ಪರಿಸರದ ಎಲ್ಲ ಚಿತ್ರಗಳನ್ನೂ ತೆಗೆದುಕೊಂಡೆವು.

ಅಷ್ಟರಲ್ಲಿ ನಮ್ಮ ಚಿತ್ರೀಕರಣದ ವೇಳೆಯಲ್ಲಿ ಅಶಿಸ್ತಿನಿಂದ ವರ್ತಿಸಿದ್ದವರನ್ನು ದೂರ ಮಾಡಿದ್ದೆ. ಚಿತ್ರದ ಸಂಕಲನಕ್ಕೆ ಹಣ ಇರಲಿಲ್ಲ. ರಶಸ್‌ಗಳನ್ನು ಮಾತ್ರ ನೋಡಿದ್ದ ನಾನು ಅದನ್ನು ಮತ್ತೊಮ್ಮೆ ಸಂಕಲನದ ಮೂಲಕ ನಿರ್ದೇಶಿಸುವ ತೀರ್ಮಾನ ತೆಗೆದುಕೊಂಡಿದ್ದೆ. ನಾವು ಶೂಟ್ ಮಾಡಲು ಸಾಧ್ಯವಾದದ್ದು ೨೬ ರೋಲ್‌ಗಳನ್ನು ಮಾತ್ರ. ಅವುಗಳಲ್ಲಿದ್ದ ಚಿತ್ರಗಳನ್ನು ಹೊಂದಿಸಿ ನನ್ನ ಅನುಭವದ ಹತ್ತಿರವಾಗುವುದು ಅನಿವಾರ್ಯವಾಗಿತ್ತು. ಅಷ್ಟರಲ್ಲಿ ಬಿ.ವಿ. ಕಾರಂತರನ್ನು ಕುರಿತ ನನ್ನ ಲೇಖನವೊಂದು ಪ್ರಕಟವಾಯಿತು. ಇವತ್ತು ಪ್ರೀತಿಯ, ಲವಲವಿಕೆಯ ವ್ಯಕ್ತಿಚಿತ್ರವಾಗಿ ಕಾಣುವ ಅದನ್ನು ನೋಡಿದ ಕಾರಂತರ ಚೇಲರುಗಳು ನನ್ನ ಮೇಲೆ ದ್ವೇಷ ಸಾಧಿಸತೊಡಗಿದರು; ಅವರಲ್ಲಿ ನಮ್ಮ ಛಾಯಾಗ್ರಾಹಕ ಕೂಡ ಒಬ್ಬ. ಈತ ಚಿತ್ರದ ಹತ್ತಿರ ಬರಲಿಲ್ಲ; ಮನಸ್ಸಿಗೆ ಬಂದ ಹಾಗೆ ಮಾತಾಡುತ್ತ ಓಡಾಡತೊಡಗಿದ.

ಸವಾಲುಗಳು ಎದುರಾದಾಗಲೆಲ್ಲ ರೋಷದಿಂದ ಎದ್ದೇಳುವುದು ನನ್ನ ಗುಣ. ನನ್ನೆಲ್ಲ ಛಾತಿ, ಶಕ್ತಿಯನ್ನೆಲ್ಲ ಬಳಸಿಕೊಂಡು ಈ ಚಿತ್ರ ಒಳ್ಳೆಯದಾಗಬಹುದೆಂದು ಮಿತ್ರರ ಮನವೊಲಿಸಿ ಚಿತ್ರದ ವಿತರಣೆ ಮಾಡುವವರನ್ನು ದೊರಕಿಸಿಕೊಂಡೆ. ಹೊಸ ಬಗೆಯ ಚಿತ್ರಗಳ ಅನುಭವ ಇರುವ ಒಬ್ಬರನ್ನು ಸಂಕಲನಕ್ಕೆ ನೇಮಿಸಿಕೊಂಡೆ. ಹೊಸ ಬಗೆಯ

ಚಿತ್ರಗಳ ಅನುಭವ ಇರುವ ಒಬ್ಬರನ್ನು ಸಂಕಲನಕ್ಕೆ ನೇಮಿಸಿಕೊಂಡೆ. ನಾವು ತೆಗೆದುಕೊಂಡಿದ್ದ ಶಾಟ್‌ಗಳು, ದೃಶ್ಯಗಳು ನನಗನ್ನಿಸಿದ್ದಕ್ಕೆ ಹತ್ತಿರವಾಗುವಂತೆ ಜೋಡಿಸತೊಡಗಿದೆ. ಇಲ್ಲಿ ನಾನು ಏಕಾಂಗಿಯಾಗಿದ್ದೆ. ಮತ್ತೆ ಚಿತ್ರೀಕರಿಸುವುದು ಸಾಧ್ಯವಿರಲಿಲ್ಲ. ಚಿತ್ರದ ಮುಖ್ಯ ಪಾತ್ರಧಾರಿಗಳು ಕೂಡ ಹೊರಟುಹೋಗಿದ್ದರು. ನನ್ನೆದುರಿದ್ದವು ಬದುಕಿನ ಅಸಂಖ್ಯಾತ ತುಣುಕುಗಳು, ಅವನ್ನು ಒಂದುಗೂಡಿಸಲು ಬೇಕಾದದ್ದು ಒಂದು ಧ್ವನಿ ಮತ್ತು ಸಂಗೀತ. ನಾಯಕಿಗಾಗಿ ಕೆಲವು ಸಾಲುಗಳನ್ನು ಬರೆದು ಚಿತ್ರವನ್ನು ಸಿದ್ಧಗೊಳಿಸತೊಡಗಿದೆ. ಇದು ನಿರ್ದೇಶಿತವಾಗಬೇಕಾದ್ದು ಚಿತ್ರೀಕರಣ ಸಮಯದಲ್ಲಿ, ಸಂಕಲನದ ಕೊಠಡಿಯಲ್ಲಿ ಮತ್ತು ಸಂಗೀತ ನೀಡುವಾಗ, ಹೀಗಾಗಿ ಈ ಚಿತ್ರ ಸಾಹಿತಿಯ ಚಿತ್ರ ಕೂಡ ಆಗಬೇಕಾಯಿತು.

ಮತ್ತೆ ಈ ಚಿತ್ರ ಸಾಹಿತಿಯ ಚಿತ್ರ ಕೂಡ ಆಗಬೇಕಾಯಿತು.

ಮತ್ತೆ ಈ ಬಗ್ಗೆ ಯೋಚಿಸುವಾಗ ಅನ್ನಿಸುತ್ತದೆ. ಇದರಲ್ಲಿನ ಬಟ್ಟೆ, ಸೆಟ್, ಮೇಕಪ್ ಇತ್ಯಾದಿಗಳೊಂದಿಗೆ ಚಿತ್ರೀಕರಣದಲ್ಲಿ ಕೂಡ ಕೆಲವು ಅಮೆಚ್ಯೂರಿಶ್, ಹವ್ಯಾಸಿ ಅಂಶಗಳಿವೆ. ಒಂದು ಚಿತ್ರ ಶೂಟ್ ಮಾಡುವುದಕ್ಕೆ ಸಾಮಾನ್ಯವಾಗಿ ನಲವತ್ತು ರೋಲ್ ಫಿಲಂ ಬಳಸುತ್ತಾರೆ; ನಾವು ಇಪ್ಪತ್ತಾರು ರೋಲ್ ಬಳಸಿದ್ದೆವು. ಇಂಥ ಚಿತ್ರ ಶೂಟ್ ಮಾಡುವುದಕ್ಕೆ ಒಂದು ತಿಂಗಳಾದರೂ ಬೇಕು; ನಾವು ಇಪ್ಪತ್ತು ದಿನದಲ್ಲಿ ಮುಗಿಸಿದೆವು. ಆದರೆ ಚಿತ್ರೀಕರಣದ ಬಡತನ ಮತ್ತು ವಸ್ತುವಿನಲ್ಲಿ ವರ್ಣಿತವಾದ ಬಡತನ, ದ್ವಂದ್ವ, ಸಿಟ್ಟು ಎಲ್ಲವೂ ಹೇಗೋ ಮುದ್ರಿತವಾಗಿ ಹೊರಬಂದವು. ಹುಡುಗ ಪ್ರತಿಭಟಿಸುತ್ತಾನೆ; ತನ್ನ ಹುಡುಗಿಗೊಂದು ನೆಲೆ, ನೆಮ್ಮದಿ ಕೊಡಲಾರದ ಈತ ಅನೇಕ ಸ್ಥಳಗಳಲ್ಲಿ ತನ್ನ ರೋಷ ಕಾರಿ ಆ ರೋಷ ಎದುರಿಸಲಾರದೆ ಓಡುತ್ತಾನೆ. ಹುಡುಗಿ ತನ್ನ ಹುಡುಗನನ್ನು ಪಡೆಯಲಾರದೆ ತನ್ನ ಪ್ರತಿಭಟನೆಯೊಂದಿಗೇ ಕಮರಿಹೋಗುತ್ತಾಳೆ. ಹೆಣ್ಣು ನಮ್ಮಿಬ್ಬರ ದುರಂತವನ್ನೂ ಗ್ರಹಿಸುತ್ತಾ, ಕೇಳುತ್ತಾ ಹೋಗುತ್ತಾಳೆ.

ಇದೆಲ್ಲ ಎಂದೋ ನಡೆದಂತೆ, ಕನಸಿನಂತೆ ಈಗ ನನಗೆ ಕಾಣಿಸುತ್ತಿದೆ. ಈ ಚಿತ್ರ ದೋಷಯುಕ್ತವಾಗಿರಬಹುದಾದರೂ ಭಿನ್ನವಾಗಿರಬಹುದು

ಎಂಬ ಆಸೆ ಮಾತ್ರ ನನ್ನದು. ಅಲ್ಲಿ ಅಭಿನಯಿಸಲು ಕೂಡ ಯತ್ನಿಸಿ 'ಛೆ' ಎಂದುಕೊಂಡು ಚಿತ್ರದಿಂದಲೇ ದೂರವಿರುವ ಸಂಕೋಚ ನನ್ನದು.

...ಅದ್ದೂರಿಯ ಚಿತ್ರವಾಗಿದ್ದರೂ ಕೆಟ್ಟ ಚಿತ್ರವಾಗಿರಲು ಸಾಧ್ಯ. ಸರಳ ಚಿತ್ರವಾಗಿದ್ದರೂ ಮನ ಕರಗಿಸುವ ಮೋಹಕ ಚಿತ್ರವಾಗಿರಲು ಸಾಧ್ಯ. ಹಾಗಾದರೆ ನಿಜವಾದ ವ್ಯತ್ಯಾಸವೇನು? ವ್ಯಾಪಾರಿ ಚಿತ್ರ ಉತ್ತಮ ಚಿತ್ರದಿಂದ ಹೇಗೆ ಭಿನ್ನ? ನನ್ನ ಪ್ರಕಾರ ಅಪ್ಪಟ ವ್ಯಾಪಾರಿ ಚಿತ್ರಗಳಿಲ್ಲ; ಹಣಕ್ಕಾಗಿ ವಂಚಿಸುವ ಚಿತ್ರಗಳು ಮಾತ್ರ ಇವೆ. ವಂಚಿಸುವ ಚಿತ್ರಗಳಿಂದ ಪ್ರಾಮಾಣಿಕ ಚಿತ್ರ ಒಂದು ವಿಷಯದಲ್ಲಿ ಬೇರೆ ತರಹ ಇರುತ್ತದೆ. ಪ್ರಾಮಾಣಿಕ ನಿರ್ದೇಶಕನಿಗೆ ನಟರನ್ನ ಬಳಸುವುದರಲ್ಲಿ, ಕತೆ ಹೇಳುವುದರಲ್ಲಿ ಸಂಕಲಿಸುವುದರಲ್ಲಿ ಅಭಿರುಚಿ ಇರುತ್ತದೆ, ಸೂಕ್ಷ್ಮಜ್ಞತೆ ಇರುತ್ತದೆ. ಮನುಷ್ಯ ಅಭಿನಯಿಸುವುದರ ಮೂಲಕ, ಕೃತಕವಾಗಿ ಸಂಘರ್ಷಿಸುವ ಮೂಲಕ ಮಾತ್ರ ಬದುಕುವುದಿಲ್ಲ. ಅವನ ಮೌನ, ಆಳದ ನೋವು. ಏಕಾಂತತೆಯಲ್ಲಿ ಕೂಡ ಅವನ ಬದುಕಿರುತ್ತದೆ. ವಿಕೃತವಾಗಿ ಜೋಡಿಸಿದ ನೃತ್ಯ, ಬದುಕಿನಲ್ಲಿ ಎಲ್ಲೂ ಕೇಳದ ಹಾಡು, ನಿರ್ಲಜ್ಜ ಮಾತುಕತೆಯನ್ನು ಮೀರಿದ ದುರಂತ, ಸುಖಾಂತ ಮನುಷ್ಯನ ಜೀವನ. ಇದನ್ನು ತೋರುವುದಕ್ಕಾಗಿಯೇ ಚಲನಚಿತ್ರದಲ್ಲಿ ವಿಸ್ತಾರ ತೋರುವ ಅವಕಾಶ, ತೀರಾ ಹತ್ತಿರವಾದದ್ದು ತೋರುವ ಕ್ಲೋಸಪ್‌ಗಳಿವೆ. ಮನುಷ್ಯನ ದೇಹ, ಅದರಲ್ಲೂ ಮುಖ, ವಿಸ್ತಾರ ಅದರಲ್ಲೂ ಕಣ್ಣು ಆತನ ಅಂತರಾಳವನ್ನು ಬಿಂಬಿಸುತ್ತವೆ. ಸಿನಿಮಾ ಕಾವ್ಯಮಯವಾಗುವುದು ಹೀಗೆ.

ಇದನ್ನೆಲ್ಲ ನನ್ನ ಚಿತ್ರವನ್ನು ಹೊಗಳಿಕೊಳ್ಳಲು ಹೇಳುತ್ತಿಲ್ಲ. ದಶಕದ ಹಿಂದೆ ಮಾಡಿದ ಚಿತ್ರ (ನಾನೀಗ ನೋಡದಿದ್ದರೂ) ನನ್ನಲ್ಲಿ ಸ್ಫುರಿಸಿದ ನೆನಪುಗಳನ್ನು, ಚಿಂತನೆಯನ್ನು ಮಾತ್ರ ಇಲ್ಲಿ ಕಾಣಿಸಿದ್ದೇನೆ.

.... ಹೀಗೆನ್ನುವಾಗ ಈಕೆಯ ಮುಖ ಕ್ಲೋಸಪ್‌ನಲ್ಲಿ ಎದುರಾಗುತ್ತಿದೆ. ಜೀವನದ ಹೊಸ್ತಿಲ ಬಳಿ ನಿಂತ ಹುಡುಗಿ. ಆತಂಕ, ಕುತೂಹಲವನ್ನು ಮುಖದಲ್ಲಿ ತುಂಬಿಕೊಂಡ ಚೆಲುವೆ. ಸೂಕ್ಷ್ಮ ದಾಖಲೆಗಳ ಪುಟ ಆ ಮುಖ. ಅಲ್ಲಿ ಬಂಡಾಯವಿದೆ. ಅಲ್ಲದೆ ಬಂಡಾಯದ ಕಷ್ಟವನ್ನರಿತ

ವಾಸ್ತವವಿದೆ. ಇವೆರಡಕ್ಕೂ ತಕ್ಕ ಕಾರಣವಿಲ್ಲದ ನಿರಾಶೆ ಇದೆ.... ಈಕೆಯ ಮುಖ ನನ್ನಲ್ಲಿ ಚಿತ್ರೀಕರಿಸುವ ಹುಚ್ಚು ಹುಮ್ಮಸ್ಸನ್ನು ಕೆಣಕುವ ಮುನ್ನ ಲೇಖನಿಯನ್ನು ಕೆಳಗಿಟ್ಟು ನಗುತ್ತೇನೆ.

ಗಾಯನ, ನೃತ್ಯ, ಅಭಿನಯದ ಜನರನ್ನು ಕಂಡು ಅಸೂಯೆಯಿಂದ, ಮೆಚ್ಚುಗೆಯಿಂದ, ಭಗ್ನಪ್ರೇಮಿಯ ಔದಾರ್ಯದಿಂದ ನಗುವುದು ನಿಸೂರು ಕೆಲಸವೆನ್ನಿಸುತ್ತದೆ.

* * *

# ಸಿನಿಮಾ – ಒಂದು 'ಕಲೋದ್ಯಮ'

–ಬರಗೂರು ರಾಮಚಂದ್ರಪ್ಪ

ಸಿನಿಮಾವನ್ನು ಕುರಿತಂತೆ ಮುಖ್ಯ ವಿಭಾಗೀಕರಣವೊಂದು ಇಂದು ಕಂಡುಬರುತ್ತಿದೆ. ವ್ಯಾಪಾರಿ ಚಿತ್ರ ಮತ್ತು ಕಲಾತ್ಮಕ ಚಿತ್ರ ಎಂಬುದೇ ಈ ವಿಭಾಗೀಕರಣ. ಇದು ಆಯಾ ವಿಭಾಗಕ್ಕೆ ಹೊಂದುವ ಚಿತ್ರಗಳ ಪ್ರಧಾನ ಲಕ್ಷಣಗಳನ್ನು ಗುರುತಿಸುವ ಮಟ್ಟಿಗೆ ಸರಿಯಾಗಿದೆ. ಆದರೆ ಈ ವಿಭಾಗೀಕರಣದ ಅತಿರೇಕ ಎಲ್ಲಿಯವರೆಗೆ ಹೋಗಿಯೆಂದರೆ ಸಿನಿಮಾದ ಸೃಜನಶೀಲ ಪ್ರಕ್ರಿಯೆಯ ಒಳ ಸೂಕ್ಷ್ಮಗಳನ್ನು ಮರೆಸುತ್ತಿದೆ. ಕಲೆಯೇ ಮುಖ್ಯವೆಂದು 'ವಾದಿಸುವ ಕೆಲವರು' ವೈಯಕ್ತಿಕ ಸಿನಿಮಾ(Personal Cinema)ದಂಥ ಪರಿಕಲ್ಪನೆಗಳನ್ನು ಮುಂದಿಡುವವರಿಗೂ ಮುಂದುವರೆದರೆ, ವ್ಯಾಪಾರವೇ ಮುಖ್ಯವೆನ್ನುವವರು ಲಾಭ–ನಷ್ಟವೆಂಬ ಅಂಕಿ ಸಂಖ್ಯೆಗಳ ಲೆಕ್ಕಾಚಾರದಲ್ಲೇ ವಿಜೃಂಭಿಸುತ್ತಿದ್ದಾರೆ. ಪರಸ್ಪರ ಅಣಕು–ಕೆಣಕುಗಳಲ್ಲಿ ಪ್ರಭಾವಶಾಲಿ ಮಾಧ್ಯಮವಾದ ಸಿನಿಮಾದ ಸೃಷ್ಟಿ ಸಂದರ್ಭದ ವಾಸ್ತವಿಕತೆ ಮೂಲೆ ಸೇರುತ್ತಿದೆ.

ಸಿನಿಮಾ–ವಿವಿಧ ಕಲಾರೂಪಗಳ ಒಕ್ಕೂಟ. ಇದೊಂದು ಸಮೂಹ ಮಾಧ್ಯಮವಷ್ಟೇ ಅಲ್ಲ, ಸಮೂಹ ದುಡಿಮೆಯಿಂದ ಮಾತ್ರವೇ ಸಾಧ್ಯವಾಗುವ ಸೃಷ್ಟಿ. ಈ ಸಮೂಹ ದುಡಿಮೆಯನ್ನು ನಿರ್ದಿಷ್ಟ ದಿಕ್ಕಿನಲ್ಲಿ ತೊಡಗಿಸುವ ಬುದ್ಧಿ–ಭಾವಗಳ ಕೇಂದ್ರವೇ ನಿರ್ದೇಶಕ. ಈ ಕೇಂದ್ರ ಶಕ್ತಿಯ ದಿಗ್ದರ್ಶನದಲ್ಲಿ ಸಾಹಿತ್ಯ, ಸಂಗೀತ, ನೃತ್ಯ, ನಾಟಕ ಮುಂತಾದ ಕಲೆಗಳ ಅಗತ್ಯ ರೂಪಗಳು ಸಿನಿಮಾದಲ್ಲಿ ಕ್ರೋಢೀಕರಣಗೊಳ್ಳುತ್ತವೆ. ಈ ಕ್ರೋಢೀಕರಣ, ಯಂತ್ರವಿಧಾನದಲ್ಲಿ ಉಂಟಾಗುತ್ತದೆಯೆಂಬುದು ಒಂದು ವಿಶೇಷ. ಹಾಗೆ ನೋಡಿದೆ ಸಿನಿಮಾ ಎಂಬುದೇ ಆಧುನಿಕ ಯಂತ್ರಶಕ್ತಿಯ ಕೊಡುಗೆ. ನಿರ್ದೇಶಕನ ನೇತೃತ್ವದಲ್ಲಿ ವಿವಿಧ ವ್ಯಕ್ತಿಗಳ

ಸೃಜನಶೀಲತೆ, ವಿವಿಧ ಯಂತ್ರೋಪಕರಣಗಳ ಕ್ರಿಯೆ–ಪ್ರಕ್ರಿಯೆಗಳಲ್ಲಿ ರೂಪುದಾಳುವ ಸಿನಿಮಾದಲ್ಲಿ ಯಂತ್ರ ನಾಗರೀಕತೆ ಮತ್ತು ಸೃಜನಶೀಲತೆಗಳು ಒಟ್ಟಿಗೆ ಸೇರಿರುತ್ತವೆ. ಮನುಷ್ಯ ತಂತಾನೆ ಸೃಜನಶೀಲನಾಗಿರುವಂತೆ, ಯಂತ್ರ ತಂತಾನೆ ಸೃಜನಶೀಲವಲ್ಲದ ಯಂತ್ರಶಕ್ತಿ ಮತ್ತು ಸೃಜನಶೀಲ ಮನುಷ್ಯ ಶಕ್ತಿಗಳು ಒಗ್ಗೂಡುವುದೇ ಒಂದು ವೈರುಧ್ಯ. ಈ ವೈರುಧ್ಯ, ಸಿನಿಮಾ ಸೃಷ್ಟಿಕ್ರಿಯೆಯ ಒಂದು ಅನಿವಾರ್ಯ. ಇಲ್ಲಿ ನಮ್ಮ ಅನುಭವ ಮತ್ತು ಅಭಿವ್ಯಕ್ತಿ ಪ್ರತಿಭೆ, ಯಂತ್ರಶಕ್ತಿಯ ಪ್ರಕ್ರಿಯೆಯ ಮೂಲಕವೇ ಪ್ರಕಟವಾಗುತ್ತದೆ.

ಈ ಮೇಲಿನ ಕಾರಣಗಳಿಂದಾಗಿ ಸಿನಿಮಾ ಎಂಬುದು ನೂರಕ್ಕೆ ನೂರು ಕಲಾಸೃಷ್ಟಿಯೂ ಆಗಿಲ್ಲ, ಉದ್ಯಮದ ಸರಕೂ ಆಗಿಲ್ಲ. ಈ ಎರಡೂ ನೆಲೆಗಳ ಸೂಕ್ಷ್ಮಗಳು ಸೇರುತ್ತಲೇ ಸೃಷ್ಟಿಯಾಗುವ "ಕಲೋದ್ಯಮ" ಈ ನಮ್ಮ ಸಿನಿಮಾ ಎಂಬುದು ನನ್ನ ವಿಚಾರ. 'ಕಲೋದ್ಯಮ' ಎಂಬ ಪರಿಕಲ್ಪನೆ ಸಿನಿಮಾ ಸೃಷ್ಟಿಯ ವಿಧಾನವನ್ನು ಸರಿಯಾಗಿ ವಿವರಿಸಬಲ್ಲುದೆಂದು ನಾನು ಭಾವಿಸಿದ್ದೇನೆ.

ಸಿನಿಮಾವನ್ನು ಕೇವಲ ಕಲೆಯೆಂದಾಗಲಿ, ಅಥವಾ ಉದ್ಯಮವೆಂದಾಗಲಿ ಕರೆಯುವುದು ವಸ್ತುಸ್ಥಿತಿಯ ವಂಚನೆ. ಈಗಾಗಲೇ ವಿವರಿಸಿರುವಂತೆ ವಾಸ್ತವವಾಗಿ ಅದು ಕಲೆಯೂ ಹೌದು, ಉದ್ಯಮವೂ ಹೌದು. ಅದು, ಕಲಾತ್ಮಕ ದೃಷ್ಟಿ ಮತ್ತು ಪ್ರತಿಭೆಗಳ ಮೂಲಕ ಸೃಷ್ಟಿಯಾಗುವುದರಿಂದ ಕಲೆ ಎನ್ನಿಸಿಕೊಂಡಿದೆ. ಸಿನಿಮಾದ ಇತರ ಸಾಧ್ಯತೆ ಮತ್ತು ನಿರೀಕ್ಷೆಗಳು ಅನಿವಾರ್ಯವಾಗಿ ಅದನ್ನು ಉದ್ಯಮವಾಗಿಸಿವೆ. (ಸಮೂಹ ದುಡಿಮೆಯೇ ಉದ್ಯಮದ ಲಕ್ಷಣವೆಂಬುದೂ ಇಲ್ಲಿ ಉಲ್ಲೇಖನೀಯ). ಕಲೆ ಮತ್ತು ಉದ್ಯಮಗಳೆರಡೂ ಏಕಕಾಲದಲ್ಲಿ ಅಸ್ತಿತ್ವ ಪಡೆಯುವ ಅಪರೂಪದ ನೆಲೆಯಾದ ಸಿನಿಮಾ, ಸೃಜನಶೀಲ ಸಮಸ್ಯೆಯನ್ನು ತಂದೊಡ್ಡುತ್ತದೆ. ನಿಜವಾದ ಸಮಸ್ಯೆಯೆಂದರೆ ಕಲೆ ಮತ್ತು ಉದ್ಯಮದ ಲಕ್ಷಣಗಳು ಒಟ್ಟಿಗೇ ಇರುವುದರಿಂದ ಉಂಟಾಗುವ ದ್ವಂದ್ವ. ಕೆಲವರು ಕಲೆ ಮಾತ್ರ ಶ್ರೇಷ್ಠವೆಂದೂ, ಇನ್ನು ಅನೇಕರು ಉದ್ಯಮ ಮಾತ್ರವೇ ಮುಖ್ಯವೆಂದು ವಾದ ಹೂಡುವುದರಿಂದ ಸಿನಿಮಾದ

ಸೃಜನಶೀಲ ಸಮಸ್ಯೆಯನ್ನು ಶೋಧಿಸಿದಂತಾಗುವುದಿಲ್ಲ. ಈ ರೀತಿಯ ವಾದ ಹೂಡುವವರಿಗೆ ದ್ವಂದ್ವವೇ ಎದುರಾಗುವುದಿಲ್ಲ. ಆಗ ಸಿನಿಮಾದ ಸೃಷ್ಟಿಸೂಕ್ಷ್ಮವೇ ಅವರಿಗೆ ಅರಿವಾಗಿಲ್ಲ ಎನ್ನಬೇಕಾಗುತ್ತದೆ.

ಸೃಜನಶೀಲ ನಿರ್ದೇಶಕನೊಬ್ಬ ಸಿನಿಮಾ ಸೃಷ್ಟಿಯಲ್ಲಿ ಮೇಲೆ ಹೇಳಿದ ದ್ವಂದ್ವವನ್ನು ಎದುರಿಸುತ್ತ ಕಲೆ ಮತ್ತು ಉದ್ಯಮಗಳ ಒಳ ಸಂಘರ್ಷವನ್ನು ಒಳಗೊಳ್ಳುತ್ತ ಅಭಿವ್ಯಕ್ತಿ ವಿನ್ಯಾಸವನ್ನು ರೂಪಿಸುತ್ತಾನೆ. ಈ ಸಂಘರ್ಷವೇ ನಿಜವಾದ ನಿರ್ದೇಶಕನ ನೆಲೆ. ಇದು ನಿರ್ದೇಶಕನ ಸೃಜನಶೀಲತೆಗೆ ಖಚಿತ ರೂಪ ಕೊಡುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ನಿಜವಾದ ನಿರ್ದೇಶಕನಲ್ಲಿ ಉಂಟಾಗುವ ಈ ಸಂಘರ್ಷ, ಖಚಿತರೂಪ ಕೊಡುವ ಹೊತ್ತಿಗೆ ಸಾಮರಸ್ಯದ ಹಂತ ಮುಟ್ಟುತ್ತದೆ; ಸಾವಯವತೆಯನ್ನು ಸಾಧಿಸುತ್ತದೆ. ಅಂದರೆ ಸಂಘರ್ಷದಿಂದಲೇ ಹೊಸ ಶೋಧನೆಗೆ ದಾರಿಯಾಗಿ ಸಿನಿಮಾ ಬಂಧವೊಂದು ಖಚಿತವಾಗುತ್ತ ಹೊಸ ರೂಪದ ಉದಯಕ್ಕೆ ಕಾರಣವಾಗುತ್ತದೆ. ಇಂಥ ಶೋಧನಾತ್ಮಕತೆ "ಸಿನಿಮಾ" ಒಂದು ಕಲೋದ್ಯಮವೆಂಬ ವಾಸ್ತವಿಕತೆಯ ಒತ್ತಡದಲ್ಲಿ ಮಾತ್ರ ಹುಟ್ಟಲು ಸಾಧ್ಯ. ಇದು 'ಕಲಾತ್ಮಕ' ಮತ್ತು 'ವ್ಯಾಪಾರಿ' ಚಿತ್ರಗಳ ಉತ್ತಮಾಂಶಗಳ ತೇಪೆ ಕೆಲಸವಲ್ಲ; ಸೃಜನಶೀಲ ಸಮಸ್ಯೆಯ ಸವಾಲನ್ನು ಎದುರಿಸುವ ಶೋಧನಾತ್ಮಕತೆಯಲ್ಲಿ ಸೃಷ್ಟಿಯಾಗುವ ಸಿನಿಮಾರೂಪ.

ಇದಕ್ಕೆ ಹಿನ್ನೆಲೆಯಾಗಿಯೇ ಒಂದು ವಿವರಣೆ ಕೊಡಬಹುದು. ಸಿನಿಮಾದಲ್ಲಿ ಮಾನಸಿಕ ಲೋಕ ಮತ್ತು ಆರ್ಥಿಕ ಲೋಕ–ಎರಡೂ ಇವೆ. ಮಾನಸಿಕ ಲೋಕದ ಮಹತ್ವವನ್ನು ಕಂಡುಕೊಂಡವರು 'ಕಲೆ'ಯನ್ನೂ ಆರ್ಥಿಕ ಲೋಕದ ಮಹತ್ವವನ್ನು ಕಂಡುಕೊಂಡವರು. 'ಕಲೆ'ಯನ್ನೂ ಆರ್ಥಿಕ ಲೋಕದ ಮಹತ್ವವನ್ನು ಬೆನ್ನತ್ತಿದವರು 'ಉದ್ಯಮ'ವನ್ನು ಪ್ರಧಾನವೆಂದು ಪರಿಗಣಿಸುತ್ತಾರೆ. ಮಾನಸಿಕ ಲೋಕದವರು ಸಾಹಿತ್ಯಾದಿ ಕಲೆಗಳಲ್ಲಿ ಬಯಸುವ ವೈಯಕ್ತಿಕತೆಯ ವೈಪರೀತ್ಯವನ್ನು ವಾದಕ್ಕೆ ತಿರುಗಿಸಿದರೆ, ಆರ್ಥಿಕ ಲೋಕದವರು ಮಾರಾಟದ ಮಹಿಮೆಯನ್ನು ಬಿತ್ತರಿಸುತ್ತಾರೆ. ಮಾನಸಿಕ ಲೋಕದವರಿಗೆ ಸೃಜನಶೀಲ ಸ್ವಾತಂತ್ರ್ಯದ ತುಟ್ಟ ತುದಿಯಲ್ಲಿ ಕೂತ ಆದರ್ಶ

ಮುಖ್ಯವಾದರೆ ಆರ್ಥಿಕ ಲೋಕದವರಿಗೆ ಲಾಭಕೋರತನವೇ ಆದರ್ಶವಾಗಿರುತ್ತದೆ. ವಾಸ್ತವವಾಗಿ ಮಾನಸಿಕ ಲೋಕ ಮತ್ತು ಆರ್ಥಿಕ ಲೋಕಗಳ ಆಂತರಿಕ ತಿಕ್ಕಾಟ–ತಳಮಳಗಳಿಂದಲೇ ದ್ವಂದ್ವವನ್ನು ಮೀರಿ "ಸಿನಿಮಾ ಸೃಷ್ಟಿ" ನಡೆಯಬೇಕಾಗಿದೆ. ಇಲ್ಲದಿದ್ದರೆ ಆರ್ಥಿಕ ಲೋಕದವರು ಜನರ ಭಾವುಕತೆಯ ವೈಭವೀಕರಣದಲ್ಲಿ ಫಲ ಕಾಣತೊಡಗಿದರೆ, ಮಾನಸಿಕ ಲೋಕದವರು ಬೌದ್ಧಿಕ ವಾಸ್ತವತೆಯ ವೈಭವೀಕರಣದಲ್ಲಿ ಕಲಾತ್ಮಕ ಕೃತಕೃತ್ಯತೆ ಪಡೆಯುತ್ತಾರೆ. ಬುದ್ಧಿ–ಭಾವಗಳು ಒಗ್ಗೂಡುವ ಒಳತೋಟಿಯಿಂದಲೇ ಬದುಕಿನ ಕಟುವಾಸ್ತವತೆಯ ಹುಡುಕಾಟ ಸಾಧ್ಯವೆಂಬುದನ್ನು ಇಬ್ಬರೂ ಮರೆಯುತ್ತಾರೆ. ಆರ್ಥಿಕ ಲೋಕದವರು ಮರೆಯುತ್ತಾರೆಂದರೆ ಅದು ಸ್ವಾಭಾವಿಕ. ಯಾಕೆಂದರೆ ಅವರಿಗೆ ಹಣದ ಹುಡುಕಾಟವೇ ಬದುಕು. ಆದರೆ ಮಾನಸಿಕ ಲೋಕದವರು ಆರ್ಥಿಕ ಲೋಕದವರಿಗೆ ಕೇವಲ ಪ್ರತಿಕ್ರಿಯೆಯಾಗುತ್ತ ಹೋಗುವುದರಿಂದ ಉಂಟಾಗುವ ವಂಚನೆಯನ್ನು ಅರ್ಥ ಮಾಡಿಕೊಳ್ಳಬೇಕು. ಸಾಚಾ ಸಿನಿಮಾ ಸೃಷ್ಟಿ ಸಾಧ್ಯವಾಗಬೇಕಾದರೆ ಉದ್ಯಮದ ವೈಪರೀತ್ಯಗಳಲ್ಲಿ ಉಡುಗಿಹೋಗದೆ ವ್ಯಕ್ತಿ ವೈಪರೀತ್ಯಗಳ ವೈಭವೀಕರಣವೇ ಕಲೆಯೆಂದು ಭಾವಿಸದೆ, ಸದಾ ಒಳ ಹೋರಾಟವನ್ನು ಉಳಿಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಉದ್ಯಮದ ಅತಿರೇಕ, ಭಾವುಕತೆಯ ವೈಭವೀಕರಣದಲ್ಲಿ ಭಾವಕೋಶದ ಬೆಳವಣಿಗೆಯನ್ನೇ ನಾಶ ಮಾಡಿದರೆ, ಕಲೆಯ ಹೆಸರಿನ ಅತಿರೇಕ, ಬುದ್ಧಿಯ ವೈಭವೀಕರಣದಲ್ಲಿ ಬುದ್ಧಿಕೋಶದ ಬೆಳವಣಿಗೆಯನ್ನೇ ನಾಶ ಮಾಡುತ್ತದೆ. ಆದ್ದರಿಂದ ಭಾವ–ಬುದ್ಧಿಗಳ ಮುಖಾ–ಮುಖಿಯ ಮಥನದಲ್ಲಿ ಹುಟ್ಟುವ ಅಮೃತವಾಗಬೇಕು, ನಮ್ಮ ಸಿನಿಮಾ–ಕಲೋದ್ಯಮ.

* * *

# ಒಂದು ರಾಜಯೋಗ

**–ಜಯಂತ ಕಾಯ್ಕಿಣಿ**

ಶಿವರಾಮ ಕಾರಂತರ ಕಾದಂಬರಿಯನ್ನು ಆಧರಿಸಿದ 'ಚಿಗುರಿದ ಕನಸು' ಚಿತ್ರಕ್ಕೆ ಚಿತ್ರಕಥೆ–ಸಂಭಾಷಣೆ ಬರೆಯಬೇಕೆಂದು ಕೋರಿ ನಾಗಾಭರಣ ನನ್ನ ಬಳಿ ಬಂದಾಗ, ನಾನು ಒಪ್ಪಿಕೊಳ್ಳಲು ಮುಖ್ಯ ಕಾರಣ–ಅದು ರಾಜ್‌ಕುಮಾರ್ ಮನೆಯ ಚಿತ್ರವಾದ್ದರಿಂದ. ನನ್ನ ಎಂದಿನ ಆರಾಧ್ಯಜೀವ ರಾಜಕುಮಾರ್ ಜೊತೆ ತುಸುವಾದರೂ ಸಂಪರ್ಕ, ಸನಿಹದ ಒಡನಾಟ ಸಿಗಬಹುದು–ಎಂಬುದೇ ಆಗಿತ್ತು. ನನ್ನ ಕನಸು ಚಿಗುರಿಯೇಬಿಟ್ಟಿತು.

ಸುಮಾರು ಎರಡು ತಿಂಗಳ ಕಾಲ ಸದಾಶಿವನಗರದ ಅವರ ಆಪ್ತ ಮನೆಯಲ್ಲಿ ನಡೆದ ಚಿತ್ರದ 'ಕಥಾ ಸತ್ಸಂಗ' ನನ್ನ ಬಾಳಿನ ಅನುಪಮ ಅನುಭವಗಳಲ್ಲೊಂದಾಗಿದೆ. ರಾಜಕುಮಾರ್ ಅವರ ಸೋದರ ವರದಪ್ಪನವರೇ ಈ ಸತ್ಸಂಗದ ಸೂತ್ರಧಾರ. ಕಥೆಯ ದೃಶ್ಯಗಳನ್ನು ನಾನು, ನಾಗಾಭರಣ ಮತ್ತು ವರದಪ್ಪ ಚರ್ಚಿಸುತ್ತ ಹೆಣೆಯುತ್ತ ಹೋದಂತೆ, ರಾಜಕುಮಾರ್ ತನ್ಮಯರಾಗಿ ಆಲಿಸುತ್ತ ಥಕ್ಕನೆ ಯಾವುದೋ ಒಂದು ದೃಶ್ಯದಲ್ಲಿ ಮುಳುಗಿಬಿಡುತ್ತಿದ್ದರು. ಮತ್ತು ತಾವೇ ಒಂದು ಪಾತ್ರದೊಳಗೆ ಹೊಕ್ಕು ಆ ಪಾತ್ರದ ಮಾತುಗಳನ್ನು ಆಡಿ ಅಭಿನಯಿಸಲು ತೊಡಗುತ್ತಿದ್ದರು. ತಂದೆ, ಮಗ, ಅಜ್ಜಿ, ನಾಯಕಿ, ಹೀಗೆ ಯಾವುದೋ ಒಂದು ಪಾತ್ರದ ಅವರ ಪರಕಾಯ ಪ್ರವೇಶ ಆ ಸನ್ನಿವೇಶವನ್ನು ಬೇರೆಯದೇ ನೆಲೆಗೆ ಏರಿಸಿಬಿಡುತ್ತಿತ್ತು. ಅದರಲ್ಲಿ, ಬಾಲ್ಯದಲ್ಲೇ ಊರು ತೊರೆದು ಮುಂಬಯಿ–ದಿಲ್ಲಿ ಅಂತ ಹೋರಾಟದ ಬದುಕು ನಡೆಸಿದ ತಂದೆ, ಒಂದು ದಿನ ತರುಣ ಮಗನ ಬಾಯಲ್ಲಿ ಹೊಸತಾಗಿ ಕಲಿತ ಕನ್ನಡ ಭಾಷೆಯನ್ನು ಕೇಳಿ, ತನ್ನ ಬೇರುಗಳ ಕುರಿತ ಉಮ್ಮಳವನ್ನು ಮಗನ ಜತೆ ಹಂಚಿಕೊಳ್ಳುವ ದೃಶ್ಯ ಇದೆ. 'ಮಾತಾಡು ಕಂದಾ...

ನಿನ್ನ ಬಾಯಲ್ಲಿ ಈವತ್ತು ಕನ್ನಡ ಕೇಳಿ ಮುಚ್ಚಿಹೋದ ಪ್ರಪಂಚವೊಂದರ ಬಾಗಿಲು ತೆಗೆದಂತಾಯ್ತು... ಮೈ ಜುಮ್ಮಂತು...' ಎನ್ನುವ ಮಾತು ಬಂದಿದ್ದೇ, ರಾಜಕುಮಾರ್ ಅದನ್ನು ಇನ್ನೂ ಭಾವಪರವಶವಾಗಿ ತಮ್ಮಷ್ಟಕ್ಕೆ ತಾವೇ ಹೇಳಿ ಕಣ್ಣೀರುಗರೆಯುತ್ತಿದ್ದರು. ಆಮೇಲೆ ಕೆನ್ನೆಯಲ್ಲಿ ಕಂಬನಿ ಇದ್ದಾಗಲೇ ಹೊಸ ಆಟಿಗೆ ಹಿಡಿದು ನಗುವ ಮಗುವಿನಂತೆ ನಮ್ಮನ್ನೆಲ್ಲಾ ಮುಗುಳು ನಗುತ್ತ ಸುಮ್ಮನೆ ನೋಡುತ್ತಿದ್ದರು. 'ಬಡ್ಡೀ ಮಗಂದು..... ಮನಸ್ಸು ನೋಡಿ.... ಒಳ್ಳೊಳ್ಳೇ ಭಾವಪೂರ್ಣ ಸನ್ನಿವೇಶಗಳಲ್ಲಿ ನುಗ್ಗಿಯೇಬಿಡುತ್ತೆ' ಎನ್ನುತ್ತ 'ತಿನ್ನಿ.... ತಿನ್ನಿ' ಎಂದು ಎದುರಿನ ಟೀಪಾಯ್ ಮೇಲಿನ ಕುರುಕಲು ತಿಂಡಿಯನ್ನು ತಿನ್ನಲು ಎಲ್ಲರಿಗೂ ಪುಸಲಾಯಿಸುತ್ತಿದ್ದರು. 'ಡ್ರಿಂಕ್ ತೊಗೋವಾಗ ಕುರುಕಲು ತಿಂಡಿ ತಗೋಂತಾರಲ್ಲಾ. ಹಾಗೇ ಇದು ಕಥೆಗೆ ಚಾಕಣ, ತಿಂದಷ್ಟೂ ಕಥೆಗೆ ನಶೆ...' ಎನ್ನುತ್ತಿದ್ದರು.

ನಾನಂತೂ ಈ ಕಥಾ ಸತ್ಸಂಗದುದ್ದಕ್ಕೂ ಅಯಾಚಿತವಾಗಿ ಪ್ರತ್ಯಕ್ಷನಾದ ದೇವರನ್ನು ನೋಡುವ ಭಕ್ತನಂತೆ ಅವರನ್ನೇ ನೋಡುತ್ತ ಕೂತಿರುತ್ತಿದ್ದೆ. ಅವರ ಶರ್ಟಿನ ಮಡಿಸಿದ ಸಡಿಲು ತೋಳು, ಮೈಕಾಂತಿ, ಕೂರುವ ಭಂಗಿ, ಮಂಡಿಯ ನೋವನ್ನೂ ಮಧುರ ಯಾತನೆಯಂತೆ 'ಆಹಾ' ಎಂದು ಭರಿಸುವ ಬಗೆ, ದೃಶ್ಯದ ಕುರಿತ ತಮ್ಮ ಅಸಮ್ಮತಿಯನ್ನೂ ಅವರು ನಯವಾಗಿಯೇ ಮಂಡಿಸುವ ರೀತಿ, ಮಂತ್ರಮುಗ್ಧರಾಗಿ ಎಲ್ಲರನ್ನೂ ಆಲಿಸುವ ಮೌನ... ಅವರ ಮನಸ್ಸು ಅವರ ಹೊರಗೇ ಇದ್ದಂತೆ ಭಾಸವಾಗುತ್ತಿತ್ತು. ಆಗಾಗ ಕುಶಲೋಪರಿ, ಉಪಚಾರ ಕೇಳು ಪಾರ್ವತಮ್ಮನವರು ಬಂದಾಗ–'ಕೇಳು ಈ ಸನ್ನಿವೇಶ... ಎಷ್ಟು ಚೆನ್ನಾಗಿದೆ' ಎಂದು ವರ್ಣಿಸಬೇಕು. ನಮ್ಮ ಸಂವಾದ ನಡೆಯುತ್ತಿದ್ದಾಗ ಯಾವುದೇ ಅತಿಥಿಗಳು ಬಂದರೂ ಎದ್ದು ಅವರನ್ನು ಅಕ್ಕರೆಯಿಂದ ಮಾತನಾಡಿಸಬೇಕು. ಅವರಿಗೆ ನಮ್ಮೆಲ್ಲರನ್ನು ಪರಿಚಯಿಸಬೇಕು.

ವರದಪ್ಪ ಜತೆಗಿದ್ದರೇ ಅವರಿಗೆ ಸ್ಥೈರ್ಯ, ಸಮಾಧಾನ, ತುಸುವೇ ಅವರು ಕಾಣದಾದರೂ 'ಎಲ್ಲಿ ವರದಪ್ಪಾ...' ಎಂದು, 'ತುಸು ತಾಳಿ... ಅವರು ಬಂದ ಮೇಲೆ ಮುಂದುವರೆಸೋಣ' ಎನ್ನುವರು. ಕಥೆಯ

ನೆಪದಲ್ಲಿ ಎಷ್ಟೋ ಸಂಗತಿಗಳ ಮೆಲುಕು. ಕನ್ನಡ ಮಾತ್ರವಲ್ಲ ಇಡೀ ಭಾರತೀಯ ಚಿತ್ರರಂಗದ ಇತಿಹಾಸದ ಅಪರೂಪದ ಕ್ಷಣಗಳೆಲ್ಲ ಈ ಸೋದರರ ಮೂಲಕ ಇಲ್ಲಿ ಮಿಂಚಿ ಮರೆಯಾಗುತ್ತಿದ್ದವು. ದಿಲೀಪಕುಮಾರ, ರಾಜ್‌ಕಪೂರರಿಂದ ಹಿಡಿದು ಇತ್ತೀಚಿನ ಚಿತ್ರಗಳ ತನಕ ಭಾರತೀಯ ಸಿನಿಮಾದ ಅಷ್ಟೂ ರಸಗಳನ್ನು ಅರೆದು ಕುಡಿದು ಮಾಗಿದ ಈ ಸೋದರರ ನಡುವಿನ ಕಣ್ಮಿಂಚಿನ ನೋಟದ ವಿನಿಮಯ ಅಪರೂಪದ್ದಾಗಿರುತ್ತಿತ್ತು. ಹೇಳುವ ಮೊದಲೇ ಅವರಿಬ್ಬರಿಗೆ ಪರಸ್ಪರ ಎಲ್ಲ ತಿಳಿದುಹೋಗುತ್ತಿತ್ತು.

ನಾನು ಸಿನಿಮಾಕ್ಕೆ ಹಾಡು ಬರೆದಿಲ್ಲ ಎಂದು ಎಷ್ಟೇ ಗೋಗರೆದರೂ, ಇಬ್ಬರೂ 'ಇಲ್ಲ ಇಲ್ಲ ನೀವು ಎರಡಾದ್ರೂ ಬರೀಲೇಬೇಕು' ಎಂದು ಹಟ ಹಿಡಿದರು. ಒಂದು, ಚಿತ್ರದ ಆಶಯ ಗೀತೆ. ಅದನ್ನು ರಾಜಕುಮಾರ್ ಅವರೇ ಹಾಡುವವರಿದ್ದರಿಂದ ನನಗೂ ಉಮೇದು ಬಂತು. ಅದನ್ನೊಂದು ಗಂಗಾ ತೀರದ ದೋಣಿಗಾರನ ಹಾಡು ಮಾಡಿದರೆ ಹೇಗೆ ಎಂದು ನಾನು ಸೂಚಿಸಿದ್ದೇ ತಡ. ಒಮ್ಮೆಗೇ ಎಸ್.ಡಿ. ಬರ್ಮನ್ ಅವರನ್ನು ಆವಾಹಿಸಿಕೊಂಡು ರಾಜಕುಮಾರ್ 'ಸುನೋ ಮೇರೆ ಬಂಧೂರೇ... ಸುನೋ ಮೇರೆ ಮಿತವಾ... ಸುನೋ ಮೇರೆ ಸಾರೇ...' ಎಂಬ ಬರ್ಮನ್ ಹಾಡನ್ನು ಉತ್ಕಂಠಿತರಾಗಿ ಹಾಡಿಬಿಟ್ಟರು. ಬರ್ಮನ್ ದನಿ 'ಪಹಾಡಿ' ರಾಗಕ್ಕೆ ಹೇಗೆ ತಕ್ಕುದಾಗಿದೆ ಮತ್ತು ಈ ರಾಗ ಕೇಳಿದ ತಕ್ಷಣ ಪರ್ವತಶ್ರೇಣಿಗಳೇ ಹೇಗೆ ಕಣ್ಣಿಗೆ ಕಟ್ಟುತ್ತವೆ. –ಹೀಗೆ 'ಹಾಡು–ಹರಟೆ' ಶುರುವಾಗಿ ರಾಗ ಮತ್ತು ಭಾವಗಳ ಕುರಿತು ಆ ಇಡೀ ದಿನ ಸತ್ಸಂಗ ನಡೆಯಿತು.

ಕಾಡಿನ ಮೌನ ಗಾಳಿಯಲಿ
ನಾಡಿನ ಮಾತು ಧೂಳಿಯಲಿ
ಸಂತೆಯ ವೇಷಕೆ ಉಂಟೆ ಕೊನೆ
ಸಂಜೆಗೆ ಮರಳಲು ಎಲ್ಲಿ ಮನೆ

–ನನ್ನ ಥೀಮ್‌ಸಾಂಗ್‌ನ ಈ ಸೊಲ್ಲುಗಳನ್ನು ತುಂಬಾ ಇಷ್ಟದಿಂದ ಗುನುಗುನುಗುತ್ತಿದ್ದರು. ಇದರ ರೆಕಾರ್ಡಿಂಗ್ ವೇಳೆ ನಾನು

ಗೋಕರ್ಣದಲ್ಲಿದ್ದೆ. ಕವಿಗಳೆಲ್ಲಿ? ಕವಿಗಳಿದ್ರೇನೇ ಸ್ಫೂರ್ತಿ' ಎಂದು ನಾಗಾಭರಣವನ್ನು ಕೇಳಿದರಂತೆ.

ನಮ್ಮ ಸಂಗೀತ ಮನೋಹರ್ ಹೊಸ ಹೊಸ ಟ್ಯೂನ್‌ಗಳನ್ನು ಆಡಿಸಿ ತೋರಿಸಿದಾಗೆಲ್ಲ ಅದಕ್ಕೆ ಸೂಕ್ಷ್ಮ ತಿರುವುಗಳನ್ನು ಇಬ್ಬರೂ ಸೂಚಿಸೋದು, ನಂತರ ರಾಜಕುಮಾರ್ ಆ ರಾಗದ ಆಲಾಪಕ್ಕೂ ಹೋಗಿ, ವಿಸ್ತರಿಸಿ ಥಟ್ಟನೆ ನಿಲ್ಲಿಸಿ ವರದಪ್ಪನವರೆಡೆ 'ನೋಡಿದೆಯಾ ಇನ್ನೂ ಹೇಗೆ ಹಾಡ್ತಿದೀನಿ' ಎನ್ನೋ ರೀತಿ ನೋಡೋದು, ವರದಪ್ಪ ಶಾಭಾಷ್ ಅನ್ನೋದು... ಇಬ್ಬರೂ ತೀರ ತನ್ಮಯರಾಗಿ ಅಷ್ಟೇ ಕುಶಲತೆಯಿಂದ ವೀಳ್ಯದ ಎಲೆಗಳನ್ನು ತೊಡೆಗೆ ಒರೆಸಿ ತಟ್ಟಿ ಸುಣ್ಣ ಸವರಿ ಬಾಯಿಗಿಟ್ಟುಕೊಳ್ಳೋದು. ರಾಜಕಪೂರ್‌ನ 'ತೀಸ್ರೀ ಕಸಂ'ದಲ್ಲಿ (ಶಂಕರ–ಜೈಕಿಶನ್) 'ಆ ಆ ಅಭೀ ಜಾ... ರಾತ್ ಢಲ್‌ನೇ ಲಗೀ, ಚಾಂದ ಛುಪನೇ ಚಲಾ' ಅಂತೊಂದು ಹಾಡಿದೆಯಲ್ಲ. ಅದನ್ನು ನೆನೆಸಿಕೊಂಡು ಅಣ್ಣ ತಮ್ಮ ಇಬ್ಬರೂ– 'ಇಂಥ ಕೆಲ ಹಾಡು ನೋಡಿ. ಭಲೇ ಕಿಲಾಡಿ, ಪಲ್ಲವಿಯಲ್ಲೇ ಎಂಥ ಮೋಡಿ ಮಾಡಿಬಿಡ್ತವೆ ಅಂದ್ರೆ, ಪಲ್ಲವಿ ಬಿಟ್ಟು ಮುಂದೆ ಹೋಗೋಕೇ ಬಿಡೋಲ್ಲ... ಅಲ್ಲೇ ಗಿರಕಿ ಹೊಡೀತಾ ಇರ್ತೀವಿ' ಎಂದು ನಗುತ್ತಿದ್ದರು. 'ಬೈ ಚಾನ್ಸ್ ಸಾಹಸ ಮಾಡಿ ಚರಣಕ್ಕೆ ಹೋದರೂ... ಅದನ್ನು ಬೇಗ ಒಂದೇ ಸಲ ಮುಗಿಸಿ ಧಬಾರನೆ ಮತ್ತೆ ಪಲ್ಲವೀಗೆ ಬಂದು ಬೀಳ್ತೀವಿ' ಎಂದು ಉದಾಹರಣೆ ಅಂತ : 'ಲವ್ ಇನ್ ಟೋಕಿಯೋ'ದ 'ಮುಝೆ ತುಂ ಮಿಲ್‌ಗಯೆ ಹಂದಂ...'ದ ಇಡೀ ಹಾಡಿನ ಧಾಟಿಯನ್ನು 'ಲಲಾಲಲಾ'ದಲ್ಲೇ ವರದಪ್ಪ ಹಾಡಿ ತೋರಿಸಿದರು.

'ಚಿಗುರಿದ ಕನಸು' ಕಾದಂಬರಿಯಲ್ಲಿ ಒಬ್ಬನಿಗೆ ಪುಟ್ಟ ಕುರುಡಿಯೊಬ್ಬಳನ್ನು ಗಂಟುಹಾಕುವ ಹುನ್ನಾರ ನಡೆದು ಅದರಿಂದ ತಪ್ಪಿಸಿಕೊಳ್ಳಲು ಅವನು ಊರು ಬಿಡುತ್ತಾನೆ. ಅದನ್ನು ಚಿತ್ರದಲ್ಲಿ ಹಾಗೇ ಇಟ್ಟುಕೊಳ್ಳಲು ಮನಸ್ಸಾಗದೇ ಅವಳನ್ನು ಕುರುಡಿ ಮಾಡದೆ ಬರೇ ವಯಸ್ಸಿನಲ್ಲಿ ಪುಟ್ಟವಳು ಎಂಬ ಕಾರಣ ಇಟ್ಟುಕೊಂಡೆವು. ಇದರಿಂದ 'ಬಾಲವಿವಾಹ ವಿರೋಧಿ' ಅಂಶವೂ ಸೇರಿಸಿದಂತಾಗಿತ್ತು. ಇದಕ್ಕೆ

ರಾಜಕುಮಾರ್ ತುಂಬಾ ಸಮಾಧಾನ ಪಟ್ಟುಕೊಂಡು – 'ಅಬ್ಬ, ಅವಳ ಕುರುಡು ಕಳೆದು ಪುಣ್ಯ ಕಟ್ಟಿಕೊಂಡಿರಿ. ಇಲ್ದಿದ್ರೆ ಇಡೀ ಬಾಳನ್ನು ಕಥೆಯಾಚೆಗೆ ಅವರು ಯೋಚಿಸಿದ್ದರು. ಎಲ್ಲವೂ ಅವರಿಗೆ ನಿಜವಾಗುವ ರೀತಿ ಮೈಜುಮ್ಮೆನಿಸುವಂತಿತ್ತು.

ನಾನಿದ್ದಾಗಲೆಲ್ಲ ಊಟದಲ್ಲಿ ಮೀನು ಇರುವಂತೆ ಎಚ್ಚರ ವಹಿಸುತ್ತಿದ್ದರು. 'ನಾವು ಕರಾವಳಿಯವರು ಮೀನ್ ಮೈಂಡೆಡ್' ಎಂದ ನನ್ನ ಮಾತನ್ನು ಮತ್ತೆ ಮತ್ತೆ ಚಪ್ಪರಿಸಿ ನೆನಪಿಸಿಕೊಂಡು 'ಅದೇನದು ಹೇಳಿ' ಎಂದು ಹೊಸಬರೆದುರು ಹೇಳಿಸಿ ಆನಂದ ಪಡುತ್ತಿದ್ದರು – ಮಕ್ಕಳಿಂದ ಹಾಡು ಹೇಳಿಸಿದಂತೆ. ಅವರು ಊಟಕ್ಕೆ ಕೂತಾಗ, ಅದಾಗಲೇ ತಮ್ಮ ಊಟ ಮುಗಿಸಿ ಓಡಾಡುತ್ತಿದ್ದ ಮನೆ ಮಕ್ಕಳನ್ನು, ಮೊಮ್ಮಕ್ಕಳನ್ನು 'ಅಪ್ಪಾ ಬಾ' 'ಅಮ್ಮಾ ಬಾ' ಎಂದು ಬಳಿ ಕರೆದು ತುತ್ತು ಉಣಿಸುತ್ತಿದ್ದರು.

ಗಾಜನೂರಿನ ತಮ್ಮ ಬಾಲ್ಯವನ್ನು ನೆನೆಯುತ್ತ, ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಿದ್ದರು: 'ಹೀಗೆ... ಹೀಗೆ ಮನೆಯೊಳಗೆ ಕಾಲಿಟ್ರೆ... ಇಲ್ಲೇ ಎಡಬದಿಗೆ ಒರೆಯೋ ಕಲ್ಲು... ಅಮ್ಮ ಯಾವಾಗ್ಲೂ ಅಲ್ಲಿ ಮಸಾಲೆ ಅರೀತಾನೇ ಇರೋಳು ಪಾಪ. ಸಣ್ಣ ಅಟ್ಟ ಇತ್ತು. ಕೂತುಕೊಳ್ಳೋಕೂ ಆಗದಷ್ಟು ಇಕ್ಕಟ್ಟಾದ ಅಟ್ಟ. ಅಲ್ಲಿ ಉಪ್ಪು ಇಟ್ಟಿರೋರು. ಸಣ್ಣ ಏಣಿ ಹತ್ತಿ ಉಪ್ಪು ತರೋಕೆ ಅಲ್ಲಿ ಅಮ್ಮ ಬಗ್ಗಿ ಒಳ್ಳೇ ಹಾವು ಹರಿದುಹೋದ ಹಾಗೆ ಹೋಗೋಳು...' ಎಂದು ಬಾಗಿ ಈಜುವವರಂತೆ ಕೈ ಮುಂದೆ ಮಾಡಿ ತೋರಿಸುತ್ತಿದ್ದರು. ದೀಪವನ್ನು ತೂಗಿ ಹಾರಿಸುವ ದೊಡ್ಡ ಗಾಳಿಪಟ ಮಾಡೋದು ಹೇಗೆ, ಅದನ್ನು ಹಾರಿಸೋದು ಹೇಗೆ ರಾತ್ರಿ ಆಕಾಶದಲ್ಲಿ ಅದು ಹೇಗೆ ಉಜ್ವಲವಾಗಿ ಕಾಣುತ್ತದೆ. ಅದಕ್ಕೂ ಗಾಳಿಯಿಂದ ಒಂದು ವಿಶಿಷ್ಟ ಸದ್ದು ಹೇಗೆ ಬರುತ್ತದೆ.... ಎಂದೆಲ್ಲ ಹೇಳುತ್ತ ಅಣ್ಣ–ತಮ್ಮ ಇಬ್ಬರೂ ಆ ಕಾಲದಲ್ಲಿ ಮುಳುಗಿ ಮರೆಯಾಗುವರು.

ಕಥೆಯ ಚರ್ಚೆ ನಡೆಯುತ್ತಿದ್ದಾಗ ರಾಜಕುಮಾರ್ ನಡು ನಡುವೆ ಸುಮ್ಮನೆ ಮುಖ ಮುಚ್ಚಿ ಕೂರುತ್ತಿದ್ದರು. ವಿಶ್ರಾಂತಿ ತಗೋತಿದ್ದಾರೆ

ಎಂದು ನಾವು ಅಂದುಕೊಳ್ಳುವಷ್ಟರಲ್ಲಿ ಥಟ್ಟನೆ 'ಹೀಗೆ ಮಾಡಿದರೆ ಹೇಗೆ' ಎಂದು ಕಥೆಗೆ ಹೊಸದೊಂದು ಸನ್ನಿವೇಶವನ್ನು ಸೃಷ್ಟಿಸುತ್ತಿದ್ದರು. 'ಸುಮ್ಮನೆ ಅಂದುಕೊಂಡು ಬಿಡಬೇಡಿ. ಹೇಳಿ... ಹೇಳಿ... ಹೇಳಿ... ಕಥೆ ಇನ್ನೊಬ್ಬರಿಗೆ ಹೇಳುವಾಗಲೇ ಅದರ ಸತ್ವ ಗೊತ್ತಾಗೋದು. ಕಥೆ ಇರೋದೇ ಹೇಳೋಕೆ' ಎನ್ನುತ್ತಿದ್ದರು!

ಕಥೆಯಲ್ಲಿ ಕಗ್ಗಂಟು ಬಂದು ನಾವೆಲ್ಲ ತಬ್ಬಿಬ್ಬಾಗಿ ಬಗೆಹರಿಯದೆ ಮಂಕಾಗಿ ಕೂತಾಗ ಸೋದರರಿಬ್ಬರೂ 'ಈವತ್ತು ಇದನ್ನು ಇಲ್ಲಿಗೇ ಬಿಡೋಣ. ಎಳೆದರೆ ಹಾಳಾಗತ್ತೆ. ಅದರ ಪಾಡಿಗೆ ಅದನ್ನು ಬಿಡಿ. ಆಮೇಲೆ ಅದೇ ಮಾಡ್ಸಕೊಳುತ್ತೆ' ಎಂದು ನಮ್ಮನ್ನು ಹಗುರ ಗೊಳಿಸುತ್ತಿದ್ದರು. ಹೀಗೆ ಕಥೆಯ ಕುರಿತು ಘನ ಮೀಮಾಂಸಕರಿಂದಲೂ ಸಿಗದ ಸರಳ ವಿವೇಕದ ಮಾತುಗಳನ್ನು ನಾನು ಇಲ್ಲಿ ಕಲಿತೆ.

ಯಾವ ಸಮಯದಲ್ಲೂ ರಾಜಕುಮಾರ್ ಮುಖದಲ್ಲೊಂದು ತುಂಟ ತೇಜ ಇತ್ತು. ಎಲ್ಲವನ್ನೂ ಮೀರಿ ನಗುವ ಚಾಪ್ಲಿನ್ ಥರದ ದೃಷ್ಟಿಕೋನದ ಮುಗುಳು ಅದು. 'ಶಂಕರ್ ಗುರು' ಶೂಟಿಂಗ್‌ಗೆ ಸಿಮ್ಲಾಕ್ಕೆ ಹೋಗಿದ್ದಾಗ, ಚಿ। ಉದಯಶಂಕರ್ ಮತ್ತು ಇತರ ಸ್ನೇಹಿತರು ಯಾವುದೋ ಖ್ಯಾತ 'ಸೂರ್ಯಾಸ್ತದ ಪಾಯಿಂಟ್' ನೋಡಲು ಇವರನ್ನು ಕರೆದೊಯ್ದರಂತೆ. 'ಎಲ್ರೂ ತದೇಕಚಿತ್ತರಾಗಿ ಗುಡ್ಡಗಳಾಚೆಗೆ ಸೂರ್ಯಾಸ್ತಕ್ಕಾಗೇ ದೃಷ್ಟಿ ನೆಟ್ಟು ಕೂತಿದ್ದರೆ ನನ್ನ ಲಕ್ಷ್ಯ ಮಾತ್ರ ಅಲ್ಲೇ ಪಕ್ಕ ಕೆಂಡಗಳ ಮೇಲೆ ಕೋಳಿಯನ್ನು ಸುಡ್ತಾ ಇದ್ದ ಹುಡುಗನ ಮೇಲಿತ್ತು. ಅಬ್ಬಾ ಅದೆಷ್ಟು ಚೆನ್ನಾಗಿ ಮಸಾಲೆ ಹಚ್ಚಿ, ಉರಿವ ಕೆಂಡಗಳ ಮೇಲೆ ಹದವಾಗಿ ಸುಡ್ತಿದ್ದಾ ಅಂತೀರಿ... ನಾನಂತೂ ಅದ್ಯಾವಾಗ ರೆಡಿ ಆಗತ್ತೋ ಅಂತ ಅದನ್ನೇ ನೋಡ್ತಾ ಇದ್ದೆ. ಸೂರ್ಯಾಸ್ತ ಆಗಿದ್ದೇ ಗೊತ್ತಾಗಲಿಲ್ಲ ಬಡ್ಡೀ ಮಗಂದು!" ಎನ್ನುತ್ತ ಹಾಯಾಗಿ ನಕ್ಕರು.

'ಜಾಗ' ಎನ್ನುವ ಶಬ್ದವನ್ನು ಕಥೆಯ ಚರ್ಚೆಯಲ್ಲಿ ರಾಜಕುಮಾರ್ ತುಂಬಾ ಚೆನ್ನಾಗಿ ಬಳಸುತ್ತಿದ್ದರು. 'ಈ ಜಾಗ ಅಭಿನಯಕ್ಕೆ ಚೆನ್ನಾಗಿದೆ', 'ಹಾಡಿಗೆ ಇದೊಳ್ಳೇ ಜಾಗ', 'ಈ ಜಾಗದಲ್ಲೇ ಅಜ್ಜಿ ಪ್ರವೇಶ ಆಗಬೇಕು' – ಹೀಗೆ, ಕಾರಂತರ ಕಾದಂಬರಿಯನ್ನು ಇಂದಿನ ಮನಸ್ಸುಗಳಿಗೆ

ಕೊಡುವಾಗ ಮಾಡಿಕೊಳ್ಳಲೇಬೇಕಾದ ಕೆಲವು ಅನಿವಾರ್ಯ ಬದಲಾವಣೆಗಳನ್ನು ಸೂಚಿಸುತ್ತ, ವರದಪ್ಪನವರು ನನ್ನನ್ನು ಮತ್ತೆ ಮತ್ತೆ 'ಮೂಲಕ್ಕೆ ಅಪಚಾರ ಆಗಿಲ್ಲ ತಾನೆ?' ಎಂದು ಕೇಳುತ್ತಿದ್ದರು. ಆಗೊಮ್ಮೆ ರಾಜಕುಮಾರ್ 'ಕಾರಂತರು ಖಂಡಿತ ಅರ್ಥ ಮಾಡ್ಕೋತಾರೆ. ಇದನ್ನೆಲ್ಲಾ ಮೀರಿದ ಜಾಗದಲ್ಲಿದ್ದಾರೆ ಅವರು. ಅವರಲ್ಲದೆ ಇನ್ಯಾರು ಅರ್ಥ ಮಾಡ್ಕೋಬೇಕು ಇದನ್ನು' ಎಂದರು.

'ಚಿಗುರಿದ ಕನಸು' ಚಿತ್ರದ ಕೊನೆಯಲ್ಲಿ, ಹತ್ತಿರದವರ ಸಾವನ್ನು ಕಂಡು ಬದುಕಿಗೆ ವಿಮುಖನಾಗಿ ಹೊರಟ ನಾಯಕನನ್ನು ತಡೆದು ನಿಲ್ಲಿಸುವ ವೃದ್ಧನೊಬ್ಬನ ಬಾಯಲ್ಲಿ ಒಂದು ಮಾತು ಇರಿಸಿದ್ದೆ– 'ನಾವು ಬದ್ಕಿದೀವಿ ಅನ್ನೋ ಒಂದೇ ಕಾರಣ ಸಾಕು ಮಗಾ... ಇನ್ನೂ ಚೆನ್ನಾಗಿ ಬದುಕೋಕೆ!' ಈ ಮಾತು ಅವರಿಗೆ ತುಂಬ ಹಿಡಿಸಿತ್ತು. 'ಹೌದಲ್ಲ... ಇದಕ್ಕೂ ಬೇರೆ ಕಾರಣ ಯಾಕೆ ಬೇಕು? ವಾಹ್...' ಎಂದು ಕಣ್ಮುಚ್ಚಿ ಆಸ್ವಾದಿಸಿದರು. ಈ ಸಾಲು ಕಾರಂತರದಲ್ಲ, ನನ್ನದು ಎಂದು ಅವರಿಗೆ ಹೇಳಬೇಕೆನಿಸಿತು. ಮೆಳ್ಳನಂತೆ ಹೇಳಿಯೂ ಬಿಟ್ಟೆ. ಸುಂದರವಾಗಿ ನಕ್ಕರು.

ಬಾಲ್ಯದಿಂದಲೂ ನನ್ನ ಮನದಲ್ಲಿ ಒಂದು ಅಭಯದ ಶಕ್ತಿಯಾಗಿ ಬೆಳೆದು ಬಂದ ಅವರ ಬಗ್ಗೆ ನಾನು 'ಬೊಗಸೆಯಲ್ಲಿ ಮಳೆ' ಎಂಬ ನನ್ನ ಅಂಕಣದಲಿ ಬರೆದದ್ದನ್ನು, ಒಂದು ದಿನ ಈ ಸತ್ಸಂಗದ ಸಂದರ್ಭದಲ್ಲೇ ಸಮಯ ಸಾಧಿಸಿ, ಇನ್ಯಾರೋ ಇಲ್ಲದಾಗ ಅವರಿಗೆ ಓದಿ ತೋರಿಸಿಯೂ ಬಿಟ್ಟೆ. ಅವರು ನನ್ನ ಕೈಯನ್ನು ತಮ್ಮೆದೆಗೆ ಒತ್ತಿ 'ನೋಡಿ... ನೋಡಿ... ನನ್ನ ಚಿತ್ರಗಳಿಂದ ನಿಮಗೆ ಏನೆಲ್ಲಾ ಸಿಗ್ತು.... ನನಗದೆಲ್ಲಾ ಸಿಗಲೇ ಇಲ್ಲ... ಸುಮ್ನೆ ಕೆಲಸ ಮಾಡ್ತಾ ಬಂದೆ ಅಷ್ಟೆ...' ಎಂದು ಬೆಚ್ಚಗೆ ತಬ್ಬಿ ಹೆಗಲಿಗೆ ಮುತ್ತಿಟ್ಟರು.

ಮುಕ್ಕೋಟಿ ಹೃದಯಗಳ ಕಪ್ಪು ಆಕಾಶದಲ್ಲೀಗ ಸೋದರ ಗಾಳಿಪಟಗಳ ಉಜ್ವಲ ದೀಪ.

* * *

ಓದು ಪತ್ಯ

# ಸೃಜನಶೀಲ ಕಲಾವಿದೆ ವೈಶಾಲಿ ಕಾಸರವಳ್ಳಿ

**–ವಿಕಾಸ್ ನೇಗಿಲೋಣಿ**

ರಂಗಭೂಮಿ, ಚಿತ್ರರಂಗ, ಕಿರುತೆರೆ ಈ ಮೂರು ಕ್ಷೇತ್ರಗಳಲ್ಲಿ ಸೃಜನಶೀಲ ಪ್ರತಿಭೆಯ ಮೂಲಕ ತಮ್ಮದೇ ಆದ ಕೊಡುಗೆ ನೀಡಿದವರು ವೈಶಾಲಿ ಕಾಸರವಳ್ಳಿ ನಟಿಯಾಗಿ, ನಿರ್ದೇಶಕಿಯಾಗಿ, ಅನುವಾದಕಿಯಾಗಿ, ವಸ್ತ್ರ ವಿನ್ಯಾಸಕಿಯಾಗಿ ಈ ಎಲ್ಲಾ ಕ್ಷೇತ್ರಗಳಲ್ಲೂ ಸಕ್ರಿಯರಾಗಿದ್ದ ವೈಶಾಲಿ ಅವರದು ಅನುಪಮ ಸಾಧನೆ.

ವೈಶಾಲಿ ಡಾ॥ ವೆಂಕಟರಾವ್ ಚಿಟಗೋಪಿ ಅವರ ಮಗಳು. ಚಿಟಗೋಪಿ ವೃತ್ತಿಯಿಂದ ವೈದ್ಯರು. ನಾಟಕ, ಸಿನಿಮಾ ಎಂದರೆ ಅವರಿಗೆ ಅಪಾರ ಪ್ರೀತಿ. ಅಂದಿನ ಹೈದರಾಬಾದ್ ಸಂಸ್ಥಾನದಲ್ಲಿ ಇದ್ದ ಅಧಿಕಾರಿಯೊಬ್ಬರ ಮಗನಾಗಿದ್ದ ಚಿಟಗೋಪಿ, ಸಿನಿಮಾ ಗೀಳು ಹಿಡಿದು ಕೊಲ್ಲಾಪುರಕ್ಕೆ ಹೋಗಿ ಅಲ್ಲಿ ವಿ. ಶಾಂತಾರಾಂ ಅವರ ಚಲನಚಿತ್ರವೊಂದರಲ್ಲಿ ಸಹಾಯಕರಾಗಿ ಕೆಲಸ ಮಾಡಿ, ನಂತರ ಗುಬ್ಬಿ ಕಂಪನಿಯ ಸಂಪರ್ಕ ಬಂದು ಅದರ ರೆಸಿಡೆಂಟ್ ಡಾಕ್ಟರ್ ಆಗುತ್ತಾರೆ. ಆಗ ಕುಂದಾಪುರದ ನಿರ್ಮಲಾರ ಪರಿಚಯವಾಗಿ, ಅವರೊಂದಿಗೆ ವಿವಾಹ. ಈ ಜೋಡಿಯ ಏಕೈಕ ಪುತ್ರಿಯೇ ವೈಶಾಲಿ. ವೈಶಾಲಿ ಜನಿಸಿದ್ದು ಗುಲ್ಬರ್ಗಾದಲ್ಲಿ ೧೯೫೨ರ ಏಪ್ರಿಲ್ ೧೨ರಂದು. ಗುಬ್ಬಿ ಕಂಪನಿಯಲ್ಲಿದ್ದ ಬಾಬುಕೋಡಿ ವೆಂಕಟರಮಣ ಕಾರಂತರು ಚಿಟಗೋಪಿಯವರ ಆತ್ಮೀಯರು. ಇವರ ಮನೆಗೆ ಆಗಾಗ ಬರುತ್ತಿದ್ದರು. ಬಾಲಕಿ ವೈಶಾಲಿಗೆ ಅಕ್ಷರಾಭ್ಯಾಸ ಮಾಡಿಸಿದ ಗುರು. ಆಕೆಗೆ ಕನ್ನಡ ಕಲಿಸಿದರು. ತಮ್ಮ ಮಗಳಿಗಿಂತ ಹೆಚ್ಚಾಗಿ ಆಕೆಯನ್ನು ನೋಡಿಕೊಂಡರು. ಕನ್ನಡ ಭಾಷೆಯ ಮೊತ್ತಮೊದಲ ಪಾಠ ಪ್ರಾರಂಭವಾದದ್ದು ಕಾರಂತರಂಥ ರಂಗ ದಿಗ್ಗಜರಿಂದ.

ಚಿಕ್ಕವಳಾಗಿದ್ದಾಗಲೇ ಗುಬ್ಬಿ ಕಂಪನಿಯಲ್ಲಿ ಚಿಕ್ಕ–ಪುಟ್ಟ ಪಾತ್ರಗಳನ್ನು ಮಾಡುತ್ತಿದ್ದ ವೈಶಾಲಿ ಕುರುಕ್ಷೇತ್ರ ನಾಟಕದಲ್ಲಿ ಗುಬ್ಬಿ ವೀರಣ್ಣನವರ ಮೊಮ್ಮಗಳು ಬಿ. ಜಯಶ್ರೀ ಮತ್ತು ವೈಶಾಲಿ ವಟುಗಳ ಪಾತ್ರ ಮಾಡುತ್ತಿದ್ದರು. ಆಕೆ ಪುಟ್ಟ ಹುಡುಗಿಯಾಗಿದ್ದಾಗಲೇ ರಂಗಭೂಮಿಯ ಸಂಪರ್ಕದ ನಿಮಿತ್ತ ಓದಿನ ಕಡೆ ಹೆಚ್ಚು ಗಮನ ಕೊಡಲಾಗುತ್ತಿರಲಿಲ್ಲ. ಎಂಟು ವರ್ಷದ ವೈಶಾಲಿಗೆ ಓದಿನತ್ತ ಗಮನ ಕೊಡಲು, ತಿರುಗಾಟ ನಿಲ್ಲಿಸಿ ಎಲ್ಲಾದರೂ ಮನೆ ಮಾಡಿ ಎಂದು ನಿರ್ಮಲಾ ಗಂಡನನ್ನು ಒತ್ತಾಯಿಸಿದ ಕಾರಣ ಚಿಟಗೋಪಿ ತಮ್ಮ ಹುಟ್ಟೂರಾದ ಚಿಟಗೋಪ ಬಳಿಯ ಗುಲ್ಬರ್ಗಾವನ್ನು ಆರಿಸಿಕೊಂಡರು. ವೈಶಾಲಿ ಶಿಕ್ಷಣ ಅಲ್ಲೇ ಆಯಿತು. ಶರಣ ಬಸಪ್ಪಾ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣದ ನಂತರ ನೂತನ ಮಹಿಳಾ ವಿದ್ಯಾಲಯದಲ್ಲಿ ಪದವಿ ಪಡೆದರು. ಶಾಲಾ ದಿನಗಳಲ್ಲೇ ನಾಟಕ, ಏಕಪಾತ್ರಾಭಿನಯಗಳಲ್ಲಿ ಆಸಕ್ತಿ ಹೊಂದಿದ್ದ ವೈಶಾಲಿ ಅನೇಕ ಪಾರಿತೋಷಕ ಪಡೆದಿದ್ದರು. ಆಕೆ ಅಭಿನಯಿಸಿದರೆ ಬೇರಾರಿಗೂ ಪಾರಿತೋಷಕ ಬಿಟ್ಟು ಕೊಡುವುದಿಲ್ಲ ಎನ್ನುವ ಮಾತು ಶಾಲಾ ದಿನಗಳಲ್ಲಿ ಚಾಲ್ತಿಯಲ್ಲಿತ್ತು.

೧೯೬೭ರಲ್ಲಿ ಡಾ॥ ಚಿಟಗೋಪಿಯವರು ಸಂಸಾರ ಸಮೇತ ಬೆಂಗಳೂರಿಗೆ ಬಂದರು. ಆಗ ಚಿತ್ರರಂಗದ ಜೊತೆಗೂ ನಿಕಟ ಸಂಬಂಧ ಅವರಿಗಿತ್ತು. ಕನ್ನಡದ ಖ್ಯಾತ ನಿರ್ಮಾಪಕ ಕೆ.ಸಿ.ಎನ್. ಗೌಡರು, ಮೆ॥ ಈಶ್ವರಿ ಪಿಕ್ಚರ್ಸ್‌ನ ವೀರಾಸ್ವಾಮಿ ಮುಂತಾದವರ ಕೆಲವು ಚಿತ್ರಗಳಲ್ಲಿ ದುಡಿದರು. ಕನ್ನಡದಲ್ಲಿ ತಯಾರಿಸಲು ಮರಾಠಿ ಚಿತ್ರಗಳ ಹಕ್ಕನ್ನು ಪಡೆಯಲು ಮರಾಠಿ ಭಾಷೆ ತಿಳಿದಿದ್ದ ಚಿಟಗೋಪಿಯವರು ನೆರವಾಗುತ್ತಿದ್ದರು. ತಂದೆಯ ಈ ಸಿನಿಮಾ ಸಂಪರ್ಕ ಮಗಳಿಗೆ ಬೆಳ್ಳಿತೆರೆಯ ಪ್ರವೇಶಕ್ಕೆ ರಹದಾರಿಯಾಯಿತು.

ವೈಶಾಲಿಯನ್ನು ಚಿತ್ರರಂಗಕ್ಕೆ ಪರಿಚಯಿಸಬೇಕೆಂಬುದು ವಿಧಿ ಲಿಖಿತವೇ ಆಗಿತ್ತೋ ಏನೋ? ಯಾಕೆಂದರೆ ಗೌಡರ ಪ್ರೊಡಕ್ಷನ್ ನೋಡಿಕೊಳ್ಳುವುದಕ್ಕೆ ಚಿಟಗೋಪಿ ಬಂದರು. ಈ ಹಂತದಲ್ಲಿ ಅನೇಕ ಚಿತ್ರಗಳನ್ನು ನಿರ್ಮಿಸುವಾಗ ವೈಶಾಲಿ ಅವರನ್ನು ಚಿತ್ರರಂಗಕ್ಕೆ

ಪರಿಚಯಿಸುವ ಘಳಿಗೆ ಕೂಡಿಬಂತು. ಆಗ ವೈಶಾಲಿಗೆ ಹದಿನೈದೋ ಹದಿನಾರೋ ವರ್ಷ ವಯಸ್ಸು. ತಂದೆಯೇ ಗೌಡರ ಚಿತ್ರ ನಿರ್ಮಾಣವನ್ನು ನೋಡಿಕೊಳ್ಳುತ್ತಿದ್ದ ಕಾರಣ ಅವರ ಕಂಪನಿಯಲ್ಲಿ ಬಿಡುಗಡೆಯಾಗಿದ್ದ ಚಿತ್ರವೊಂದಕ್ಕೆ ವೈಶಾಲಿ ಕಂಠದಾನ ಮಾಡುವ ಅವಕಾಶ ಪಡೆದುಕೊಂಡರು. ಹೀಗೆ ೬೮-೬೯ರ ಸುಮಾರಿಗೆ ಚಿತ್ರವೊಂದಕ್ಕೆ ಡಬ್ ಮಾಡುವ ಮೂಲಕ ವೈಶಾಲಿ ಚಿತ್ರರಂಗಕ್ಕೆ ಪ್ರವೇಶಿಸಿದರು.

ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರೂ ಮತ್ತೆ ವೈಶಾಲಿಯವರನ್ನು ರಂಗಭೂಮಿ ಕೈಬೀಸಿ ಕರೆಯಿತು. ಗುಬ್ಬಿ ಕಂಪನಿಯ ಮೂಲಕ ರಂಗಭೂಮಿಗೆ ಕಾಲಿಟ್ಟ ವೈಶಾಲಿ ಅವರ ಗುರು ಬಿ.ವಿ. ಕಾರಂತರು ಅದಾಗಲೇ ರಾಷ್ಟ್ರ ಮಟ್ಟದಲ್ಲಿ ಹೆಸರಾಗಿದ್ದರು. ದೆಹಲಿಯಲ್ಲಿದ್ದ ಅವರು ಬೆಂಗಳೂರಿಗೆ ಬಂದಾಗ ಮತ್ತೆ ಹಳೆಯ ನಂಟು ಬೆಳೆಯಿತು. ಚಿಟಗೋಪಿ ದಂಪತಿಯನ್ನು ಬಾಬಿ, ಭಾಯಿ ಎಂದೇ ಕರೆಯುತ್ತಿದ್ದ ಕಾರಂತರು ವೈಶಾಲಿಯವರನ್ನು ರಂಗಭೂಮಿಗೆ ಬರುವಂತೆ ಒತ್ತಾಯಿಸಿದರು. ಬೆಂಗಳೂರಿನಲ್ಲಿ ಹವ್ಯಾಸಿ ರಂಗಭೂಮಿ ಪಾದಾರ್ಪಣೆ ಮಾಡಿದರು ವೈಶಾಲಿ.

ಮತ್ತೆ ವೈಶಾಲಿ ಹಿಂತಿರುಗಿ ನೋಡದಷ್ಟು ರಂಗಭೂಮಿಯಲ್ಲಿ ಪ್ರಸಿದ್ಧಿ ಪಡೆಯತೊಡಗಿದರು. ಅವರು ಮೊತ್ತಮೊದಲು ಅಭಿನಯಿಸಿದ ನಾಟಕ ಪಿರಾಂಡೆಲೋನ ಅತ್ಯಂತ ಸುಪ್ರಸಿದ್ಧ 'ನಾಟಕಕಾರನ ಶೋಧದಲ್ಲಿ ಆರು ಪಾತ್ರಗಳು' (six characters in search of an author). ಆ ನಾಟಕದ ಪಾತ್ರ ನಿರ್ವಹಿಸುತ್ತಲೇ ರಂಗಭೂಮಿಯಲ್ಲಿ ಹೆಸರಾದರು. ಮುಂದೆ ಗಿರೀಶ್ ಕಾರ್ನಾಡ್ ಅವರ ಗಮನಾರ್ಹ ಕೃತಿ 'ಹಯವದನ' ರಂಗ ಪ್ರಯೋಗವಾಯಿತು. ಬಿ.ವಿ. ಕಾರಂತ ನಿರ್ದೇಶನದಲ್ಲಿ ವೈಶಾಲಿಯ ಅಭಿನಯದಿಂದಲೂ ಯಶಸ್ವಿಯಾಯಿತು. ಆ ನಾಟಕದ ಕೇಂದ್ರ ಪಾತ್ರ ಪದ್ಮಿನಿಯಾಗಿ ರಂಗಕ್ಕೆ ಬಂದ ವೈಶಾಲಿ, ಅದರ ಪ್ರಯೋಗಗಳಿಂದಾಗಿಯೇ ಸಾಕಷ್ಟು ಜನಪ್ರಿಯತೆ ಪಡೆದುಕೊಂಡರು. ಅಷ್ಟೇ ಅಲ್ಲ, ಕಂಬಾರರ 'ಜೋಕುಮಾರ ಸ್ವಾಮಿ'ಯ ಗೌಡತಿ ಮೊದಲಾದ ಪಾತ್ರಗಳಲ್ಲಿ ಸಾಕಷ್ಟು

ಹೆಸರು ಮಾಡಿದರು. ಕಾರಂತರ ರಂಗಪ್ರಯೋಗಗಳಲ್ಲೆಲ್ಲಾ ಪ್ರಮುಖ ಪಾತ್ರಗಳನ್ನು ಪಡೆದುಕೊಂಡ ವೈಶಾಲಿ ಪ್ರಯೋಗಗಳಲ್ಲಷ್ಟೇ ಅಲ್ಲದೆ ಆರ್. ನಾಗೇಶ್, ಪ್ರಸನ್ನ ಮೊದಲಾದವರ ನಿರ್ದೇಶನದಲ್ಲೂ ಹೆಸರು ಗಳಿಸಿದರು. ನರಸಿಂಹನ್ ಅವರ 'ಕತ್ತಲೆಗೆ ದಾರಿ ದೂರ' (ಮೂಲ: ಆಂಟನ್ ಚೆಕಾಫ್ ಕಥೆ 'ವಾರ್ಡ್ ನಂಬರ್–೬')ದಲ್ಲೂ ಪ್ರಮುಖ ಪಾತ್ರವೇ ವೈಶಾಲಿ ಪಾಲಾಯಿತು. ಅದೇ ರೀತಿ ಮುಂದೆ 'ದಂಗೆಯ ಮುಂಚಿನ ದಿನಗಳು', 'ಎಲ್ಲರೂ ನಮ್ಮವರೇ', 'ಕುದುರೆ ಬಂತು ಕುದುರೆ' ಮೊದಲಾದ ನಾಟಕಗಳಲ್ಲಿ ಅತ್ಯುತ್ತಮ ಪಾತ್ರಗಳನ್ನು ನಿರ್ವಹಿಸಿ ಈ ನಡುವೆ 'ಹಯವದನ' ನಾಟಕದ ನಟನೆಗಾಗಿ ಅಖಿಲ ಭಾರತ ವಿಮರ್ಶಕರ ಸಂಸ್ಥೆ(ಕೊಲ್ಕತ್ತಾ)ಯಿಂದ ರಾಷ್ಟ್ರ ಮಟ್ಟದ ಪ್ರಶಸ್ತಿಯನ್ನೂ ತಮ್ಮದಾಗಿಸಿಕೊಂಡರು. ಫ್ರಿಟ್ಜ್ ಬೆನೆವಿಟ್ಸ್, ಪ್ರಸನ್ನ, ಸಿ.ಆರ್. ಸಿಂಹ, ನಾಗೇಶ್, ಲೋಕನಾಥ್, ರಣಜಿತ್ ಕಪೂರ್, ಶ್ರೀನಿವಾಸ ಪ್ರಭು ಮೊದಲಾದವರ ನಿರ್ದೇಶನದಲ್ಲಿ ನಟಿಸಿ ಗಮನ ಸೆಳೆದರು.

ರಂಗಭೂಮಿಯಲ್ಲಿ ಹೆಸರು ಮಾಡುತ್ತಿರುವಾಗಲೇ ಆಕೆಗೆ ಚಿತ್ರರಂಗದ ಪರಿಚಯವೂ ಆಯಿತು. ತಂದೆ ಚಿಟಗೋಪಿ ಅವರ ಚಿತ್ರರಂಗದ ಒಡನಾಟವೇ ಇದಕ್ಕೆ ಕಾರಣ. ವೈಶಾಲಿ ಅಭಿನಯಿಸಿದ ಮೊತ್ತಮೊದಲ ಚಿತ್ರ 'ಯಾವ ಜನ್ಮದ ಮೈತ್ರಿ'. ೧೯೭೨ರಲ್ಲಿ ಬಿಡುಗಡೆಯಾದ ಈ ಚಿತ್ರವನ್ನು ಗೀತಪ್ರಿಯ ನಿರ್ದೇಶಿಸಿದ್ದರು. ಗಂಗಾಧರ್, ಕಲ್ಪನಾ ಮುಖ್ಯ ಭೂಮಿಕೆಯಲ್ಲಿದ್ದ ಈ ಚಿತ್ರದಲ್ಲಿ ವೈಶಾಲಿ ಖ್ಯಾತ ಹಾಸ್ಯಚಕ್ರವರ್ತಿ ನರಸಿಂಹರಾಜು ಜೋಡಿಯಾಗಿ ಕಾಣಿಸಿಕೊಂಡರು. ಅಲ್ಲಿಂದ ಮುಂದೆ 'ಪ್ರೊ॥ ಹುಚ್ಚೂರಾಯ' ಚಿತ್ರದಲ್ಲೂ ವೈಶಾಲಿ, ನಟಿಸಿದರು. ಒಟ್ಟಾರೆ ಹಾಸ್ಯ ಲೇಪದ ಚಿತ್ರಗಳಲ್ಲಿ ವೈಶಾಲಿ ಕಾಣಿಸಿಕೊಂಡು, ೧೯೭೭ರಲ್ಲಿ ಬಿಡುಗಡೆಯಾದ 'ಕಿಟ್ಟು ಪುಟ್ಟು' ಚಿತ್ರದಲ್ಲೂ ಅಭಿನಯಿಸಿದರು. ದ್ವಾರಕೀಶ್ ಜೋಡಿಯಾಗಿ ನಟಿಸಿದ ಈ ಚಿತ್ರದಲ್ಲಿ ತುಳು ಮಾತನಾಡುವ, ಮೀನುಗಾರರ ಹುಡುಗಿಯಾಗಿ ತಮ್ಮ ಅಭಿನಯದಿಂದ ಗಮನ ಸೆಳೆದಿದ್ದ ವೈಶಾಲಿ 'ಮಾತೊಂದ ಹೇಳುವೆ ಹತ್ತಿರ ಹತ್ತಿರ ಬಾ...' ಎಂಬ ಹಾಡಲ್ಲಿ ಮಾಡಿದ ಮೋಡಿ ಮರೆಯಲಾಗದ ನೆನಪು.

ಪ್ರಾರಂಭದಿಂದ ಹಾಸ್ಯ ಪಾತ್ರಗಳಲ್ಲೇ ಕಾಣಿಸಿಕೊಳ್ಳುತ್ತಿದ್ದ ವೈಶಾಲಿಗೆ ಚಿತ್ರರಂಗದಿಂದ ಕೆಲವು ಗಮನಾರ್ಹ ಗಂಭೀರ ಪಾತ್ರಗಳೂ ಸಿಕ್ಕವು. ಅವುಗಳಲ್ಲಿ ೧೯೭೪ರಲ್ಲಿ ಬಿಡುಗಡೆಯಾದ 'ಭೂತಯ್ಯನ ಮಗ ಅಯ್ಯು' ಚಿತ್ರದಲ್ಲಿ ನಟ ದಿನೇಶ್ ಅವರ ಪತ್ನಿಯಾಗಿ ಕಾಣಿಸಿಕೊಂಡ ವೈಶಾಲಿ; ೧೯೭೬ರಲ್ಲಿ ಬಿಡುಗಡೆಯಾದ ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಫಲಿತಾಂಶ' ಚಿತ್ರದಲ್ಲೂ ಒಂದು ಪಾತ್ರ ನಿರ್ವಹಿಸಿದರು. ೧೯೭೮ರಲ್ಲಿ ಬಿಡುಗಡೆಯಾದ ರಾಜಕುಮಾರ್ ತ್ರಿಪಾತ್ರದಲ್ಲಿ ಅಭಿನಯಿಸಿದ್ದ ವಿ. ಸೋಮಶೇಖರ್ ನಿರ್ದೇಶನದ 'ಶಂಕರ್ ಗುರು' ಚಿತ್ರದಲ್ಲೂ ಪ್ರಮುಖ ಪಾತ್ರವೊಂದನ್ನು ನಿರ್ವಹಿಸಿದರು. ಆ ಮೂಲಕ ಮೊತ್ತಮೊದಲ ಬಾರಿಗೆ ರಾಜಕುಮಾರ್ ಚಿತ್ರದಲ್ಲಿ ಅಭಿನಯಿಸುವ ಅವಕಾಶವನ್ನು ವೈಶಾಲಿ ಪಡೆದುಕೊಂಡರು. ೧೯೭೮ರಲ್ಲಿ ತೆರೆ ಕಂಡ 'ಹೊಂಬಿಸಿಲು' ಚಿತ್ರವೂ ಒಂದು. ಗೀತಪ್ರಿಯ ನಿರ್ದೇಶನದಲ್ಲಿ ಉಷಾ ನವರತ್ನರಾಂ ಅವರ ಕಾದಂಬರಿಯನ್ನಾಧರಿಸಿದ್ದ ಈ ಚಿತ್ರದಲ್ಲಿ ವಿಷ್ಣುವರ್ಧನ್ ಮತ್ತು ಆರತಿ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಆದರೆ ಆ ಚಿತ್ರದಲ್ಲಿ ವಿಷ್ಣುವರ್ಧನ್ ಅವರ ಜೀವನದಲ್ಲಿ ಬಂದು, ಸಂಸಾರದಲ್ಲಿ ಸಾಕಷ್ಟು ಅಲ್ಲೋಲ–ಕಲ್ಲೋಲಕ್ಕೆ ಕಾರಣವಾಗುವ ವೈದ್ಯೆ ಹೆಣ್ಣೊಬ್ಬಳ ಪಾತ್ರವನ್ನು ವೈಶಾಲಿ ಸಮರ್ಥವಾಗಿ ನಿರ್ವಹಿಸಿದ್ದರು. ಸ್ವಲ್ಪ 'ನೆಗೆಟಿವ್ ಶೇಡ್' ಇದ್ದ ಈ ಪಾತ್ರವನ್ನು ಕಂಡು ಜನ ನಿಜಕ್ಕೂ ಹುಬ್ಬೇರಿಸಿದರು. ಅದರಲ್ಲೂ ವಿಷ್ಣುವರ್ಧನ್ ಜೊತೆ 'ಮಾಗಿಯ ಚಳಿಯಲ್ಲಿ ಮೈ ಬಿಸಿಯೇಕೋ?...' ಎಂಬ ಹಾಡಿನಲ್ಲೂ ಕಾಣಿಸಿಕೊಂಡು ತಾವು ಎಂಥ ಪಾತ್ರವನ್ನೂ ಮಾಡಬಲ್ಲೆ ಎಂದು ನಿರೂಪಿಸಿಕೊಟ್ಟರು.

ಹಾಸ್ಯ ಪಾತ್ರಗಳ ಎಡೆಯಲ್ಲಿ ಒಂದಿಷ್ಟು ಒಳ್ಳೆಯ ಪಾತ್ರಗಳಿರುವ ಚಿತ್ರಗಳು ವೈಶಾಲಿಗೆ ಸಿಗುತ್ತಾ ಹೋದವು. ಅವುಗಳಿಗೆ ನಾಂದಿ ಹಾಡಿದ್ದೇ ನಾಟಕಕಾರ, ಪತ್ರಕರ್ತ ಬಿ.ವಿ. ವೈಕುಂಠರಾಜು ಅವರ ಕಾದಂಬರಿಯನ್ನಾಧರಿಸಿ ೧೯೭೯ರಲ್ಲಿ ತಯಾರಾದ 'ಆಕ್ರಮಣ.' ಈ ಚಿತ್ರ ಹೆಣ್ಣಿನ ಮನಸ್ಸು ವಾಲುವ ಅಂಶವನ್ನು ಇಟ್ಟುಕೊಂಡು ಸೂಕ್ಷ್ಮವಾಗಿ ನಿರೂಪಿಸಿದ ಸಿನಿಮಾ. ಇಬ್ಬರು ವಯಸ್ಸಿನಲ್ಲಿ ತುಂಬ ವ್ಯತ್ಯಾಸವಿರುವವರ

ನಡುವೆ ಪ್ರೇಮಾಂಕುರ ಅಥವಾ ಮನಸ್ಸು ವಾಲುವ ಕ್ರಿಯೆ ನಡೆಯುತ್ತದೋ 'ಆಕ್ರಮಣ'ದಲ್ಲೂ ಅದೇ ಆಗುತ್ತದೆ. ಹೆಣ್ಣಿನ ತುಮುಲಗಳನ್ನು ಸಮರ್ಥವಾಗಿ ಕಟ್ಟಿಕೊಡುವುದರಲ್ಲಿ ಖ್ಯಾತರಾದ ಗಿರೀಶ್ ಕಾಸರವಳ್ಳಿ 'ಆಕ್ರಮಣ'ದ ನಿರ್ದೇಶಕರು. ಹೀಗೆ ಗಿರೀಶ್ ಕಟ್ಟಿಕೊಟ್ಟ ಪಾತ್ರವನ್ನು ವೈಶಾಲಿ ಅಷ್ಟೇ ಸಮರ್ಥವಾಗಿ ನಿರ್ವಹಿಸಿದರು. ಆ ಪಾತ್ರದ ಅತ್ಯುತ್ತಮ ಅಭಿನಯಕ್ಕಾಗಿ ವೈಶಾಲಿ ಅವರಿಗೆ ಆ ಸಾಲಿನ "ರಾಜ್ಯ ಪ್ರಶಸ್ತಿ" ದೊರೆಯಿತು.

'ಆಕ್ರಮಣ' ಚಿತ್ರದ ಬಿಡುಗಡೆಯ ವೇಳೆಗೆ ವೈಶಾಲಿ ಮತ್ತು ಗಿರೀಶ್ ಅವರ ವಿವಾಹ ನಡೆದಿತ್ತು. ಅವರ ಸಾಕು ತಂದೆಯಂತೆಯೇ ಇದ್ದ ಬಿ.ವಿ. ಕಾರಂತರು ಇವರಿಬ್ಬರ ಮದುವೆಯ ವಿಷಯದಲ್ಲಿ ಆಸಕ್ತರಾಗಿದ್ದರು. ಕಾರಂತರು 'ಚೋಮನ ದುಡಿ' ಚಿತ್ರ ನಿರ್ದೇಶಿಸುವಾಗ ಗಿರೀಶ್ ಕಾಸರವಳ್ಳಿ ಅದೇ ತಾನೇ ಪೂನಾದಲ್ಲಿ ತಮ್ಮ ಚಲನಚಿತ್ರ ನಿರ್ದೇಶನ ತರಬೇತಿ ಮುಗಿಸಿ ಬಂದಿದ್ದರು. ಚಿತ್ರಕ್ಕೆ ಸಹಾಯಕ ನಿರ್ದೇಶಕರಾಗಿದ್ದರು ಕೂಡಾ. ವೈಶಾಲಿಗೆ ತಕ್ಕ ಗಂಡು ಇವನೇ ಎಂದು ಲೆಕ್ಕ ಹಾಕಿದ್ದ ಕಾರಂತರು, ಗಿರೀಶ್ ಅವರ ಮನೆಗೆ ಹೋಗಿ ಅವರ ಪ್ರವರಗಳನ್ನು ಪಡೆದಿದ್ದರಂತೆ.

'ಆಕ್ರಮಣ' ಚಿತ್ರ ವೈಶಾಲಿಗೆ ಜೀವನ ಸಂಗಾತಿಯನ್ನೂ ನೀಡಿತು. ೧೯೭೮ರಲ್ಲಿ ಅವರಿಬ್ಬರೂ ವಿವಾಹ ಬಂಧನಕ್ಕೊಳಗಾದರು. ಈ ಚಿತ್ರದ ಬಿಡುಗಡೆ ಹೊತ್ತಿಗೆ ವಿವಾಹ ಮಹೋತ್ಸವ ನಡೆದಿತ್ತು. 'ನಾನು ಗಿರೀಶ್ ಅವರಲ್ಲಿ ಅಪಾರ ಬುದ್ಧಿವಂತಿಕೆಯನ್ನು ಕಂಡೆ. ಅದೇ ನನ್ನನ್ನು ಅವರ ಕಡೆಗೆ ಸೆಳೆಯುವಂತೆ ಮಾಡಿತು. ಅಷ್ಟೇ ಅಲ್ಲ, ನನ್ನಿಂದ ಅಂಥ ಅಭಿನಯವನ್ನು ಆ ಚಿತ್ರದಲ್ಲಿ ತೆಗೆಸಿದ್ದರು' ಎಂದು ಸಂದರ್ಶನವೊಂದರಲ್ಲಿ ವೈಶಾಲಿ ನೆನಪಿಸಿಕೊಂಡಿದ್ದಾರೆ. ಅದರ ನಂತರ ವೈಶಾಲಿ ಕೆಲವು ವರ್ಷಗಳ ಕಾಲ ಗೃಹಿಣಿಯಾಗಿಯೇ ಉಳಿದಿದ್ದರು. ನಾಲ್ಕೈದು ವರ್ಷಗಳ ನಂತರ ಮತ್ತೆ ಅಭಿನಯಕ್ಕೆ ಮರಳಿದರು. ಇಂದು ವೈಶಾಲಿ ಪುತ್ರ ಅಪೂರ್ವ ಸಣ್ಣ ವಯಸ್ಸಿನಲ್ಲೇ ನಿರ್ದೇಶನದ ಹೊಣೆ ಹೊತ್ತು ಯಶಸ್ವಿ ನಿರ್ದೇಶಕರಾಗಿದ್ದಾರೆ. ಪುತ್ರಿ ಅನನ್ಯ ಜನಪ್ರಿಯ ಧಾರಾವಾಹಿಗಳ

ನಾಯಕಿಯೂ ಹಾಗೂ ಹಲವಾರು ಕಲಾತ್ಮಕ ಚಿತ್ರಗಳಲ್ಲೂ ಪ್ರಧಾನ ನಟಿಯಾಗಿ, ನಾಯಕಿಯಾಗಿ ಅಭಿನಯಿಸುತ್ತಿದ್ದಾರೆ. ಹೀಗೆ ಇಡೀ ಕುಟುಂಬವೇ ಚಿತ್ರರಂಗ, ಕಿರುತೆರೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದೆ.

ಮದುವೆಯ ನಂತರ ವೈಶಾಲಿ ಕಾಸರವಳ್ಳಿ ಕಾಣಿಸಿಕೊಂಡಿದ್ದು ಒಂದಿಷ್ಟು ಗಮನಾರ್ಹ ಪಾತ್ರಗಳಲ್ಲಿ. ಬಹಳ ದಿನಗಳ ತರುವಾಯ ಕಣಗಾಲ್ ಅವರ ನಿರ್ದೇಶನದಲ್ಲಿ ಸಿನಿಮಾ ಮಾಡುವ ಅವಕಾಶ ಬಂದಿದ್ದು ೧೯೮೨ ಬಿಡುಗಡೆಯಾದ 'ಮಾನಸ ಸರೋವರ'ದಲ್ಲಿ. ನಿರಂತರವಾಗಿ ಪಾತ್ರಗಳನ್ನು ಮಾಡಿಕೊಳ್ಳುತ್ತಲೇ ಬಂದ ವೈಶಾಲಿ ಅವರ ವೃತ್ತಿಗೆ ಮತ್ತೊಂದು ಗರಿ ಸೇರ್ಪಡೆಯಾಗಿದ್ದು ೧೯೮೬ರಲ್ಲಿ ಬಿಡುಗಡೆಯಾದ 'ಮಮತೆಯ ಮಡಿಲು' ಚಿತ್ರದ ಮೂಲಕ. ಈರಂಕಿ ಶರ್ಮ ನಿರ್ದೇಶನದಲ್ಲಿ ಮೂಡಿಬಂದ ಈ ಚಿತ್ರದಲ್ಲಿ ಅಂಬರೀಷ್ ಮತ್ತು ಗೀತಾ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಇದರಲ್ಲಿ ವೈಶಾಲಿ ಕಾಸರವಳ್ಳಿ ನರ್ಸ್ ಪಾತ್ರವೊಂದರಲ್ಲಿ ಮನೋಜ್ಞ ಅಭಿನಯವನ್ನೂ ನೀಡಿದ್ದರು.

ಪೋಷಕ ಪಾತ್ರಗಳು ನಿರಂತರವಾಗಿ ವೈಶಾಲಿ ಕಾಸರವಳ್ಳಿ ಅವರನ್ನು ಅರಸಿ ಬರುತ್ತಲೇ ಇದ್ದವು. 'ಅನುಕೂಲಕ್ಕೊಬ್ಬ ಗಂಡ', 'ಆಸೆಗೊಬ್ಬ ಮೀಸೆಗೊಬ್ಬ', 'ಕ್ಷೀರಸಾಗರ', 'ಅಂಗೈಯಲ್ಲೇ ಅಪ್ಸರೆ', 'ಮಹಾದಾಸೋಹಿ ಶರಣಬಸವ', 'ತವರುಮನೆ ಉಡುಗೊರೆ', 'ನಿಘಾತ', 'ಸ್ಪರ್ಶ', 'ಪರಿವರ್ತನ', 'ಪಂಜರದ ಗಿಳಿ', 'ಹೂವೊಂದು ಬೇಕು ಬಳ್ಳಿಗೆ', 'ಗಣೇಶ ವಾಹನ', 'ಚಂದ್ರಮುಖಿ ಪ್ರಾಣಸಖಿ' ಮೊದಲಾಗಿ ಎಪ್ಪತ್ತಕ್ಕೂ ಹೆಚ್ಚು ಸಾಲು ಸಾಲು ಚಿತ್ರಗಳಲ್ಲಿ ವೈಶಾಲಿ ಪಾತ್ರ ನಿರ್ವಹಿಸುತ್ತಾ ಬಂದರು. 'ಪ್ರೇಮರಾಗ ಹಾಡು ಗೆಳತಿ' ಚಿತ್ರದಲ್ಲಿ ತಮ್ಮ ತಾಯಿಭಾಷೆಯಾದ ಕುಂದಾಪುರ ಕನ್ನಡದಲ್ಲಿ ವೈಶಾಲಿ ಪಾತ್ರ ನಿರ್ವಹಿಸಿ ಸೈ ಎನಿಸಿಕೊಂಡಿದ್ದರು.

ವೈಶಾಲಿ ಚಿತ್ರರಂಗದಲ್ಲಿ ಮೊದಲು ಗುರುತಿಸಿಕೊಂಡಿದ್ದು ಹಾಸ್ಯ ಪಾತ್ರದ ಮೂಲಕ. ಹಾಗೆ ನೋಡಿದರೆ ಅವರಿಗೆ ಗಮನಾರ್ಹ ಪಾತ್ರಗಳು ಸಿಕ್ಕಿದ್ದು ಹಾಸ್ಯ ವಿಭಾಗದಲ್ಲೇ. ಅಂಥ ಅವಕಾಶವನ್ನು ದೊಡ್ಡ ಮಟ್ಟದಲ್ಲಿ

ವೈಶಾಲಿ ಅವರಿಗೆ ಒದಗಿಸಿಕೊಟ್ಟವರು ನಿರ್ದೇಶಕ ಫಣಿ ರಾಮಚಂದ್ರ 'ಗಣೇಶ' ಸರಣಿಯ ಅವರ ಚಿತ್ರಗಳಲ್ಲಿ 'ಗೌರಿ ಗಣೇಶ' ಇನ್ನೊಂದು 'ಗಣೇಶನ ಮದುವೆ'. 'ಗೌರಿ ಗಣೇಶ' ಚಿತ್ರದಲ್ಲಿ ಗಣೇಶ ಎಂಬ ಅಜ್ಞಾತ ಮೊಮ್ಮಗನನ್ನು ಕಾಯುವ ಅಜ್ಜಿಯ ಪಾತ್ರವನ್ನು ನಿರ್ವಹಿಸಿ ಎಲ್ಲರ ಮನ ಗೆದ್ದರು. 'ನಿಮ್ಮ ಮಗುವು ನಗುತಿರುವ...' ಹಾಡಿನಲ್ಲಿ ಕಾಣಿಸಿಕೊಳ್ಳುವ ಮುಖ್ಯಮಂತ್ರಿ ಚಂದ್ರು–ವೈಶಾಲಿ ಜೋಡಿಯನ್ನಂತೂ ಮರೆಯುವುದಕ್ಕೆ ಸಾಧ್ಯವೇ ಇಲ್ಲ. ಇನ್ನೊಂದು 'ಗಣೇಶನ ಮದುವೆ'ಯಲ್ಲಿ ಕ್ರಿಕೆಟ್ ಪ್ರಿಯೆಯ ಪಾತ್ರ. ಶಿವರಾಂ ಜೊತೆ ಕಾಣಿಸಿಕೊಂಡ ವೈಶಾಲಿ ಕ್ರಿಕೆಟ್ ಪ್ರೇಮಿಯಾಗಿ ಕಾಮೆಂಟರಿ ಕೇಳುತ್ತಾ ಮಾಡಿಕೊಳ್ಳುವ ಅನಾಹುತದಲ್ಲಿ ನಕ್ಕು ನಲಿಸಿದ್ದು ಅಪಾರ. ಈ ಎಲ್ಲಾ ಚಿತ್ರಗಳಲ್ಲೂ ವೈಶಾಲಿ ಉತ್ತಮ ಅಭಿನಯ ನೀಡಿದ್ದರು. ಅಲ್ಲದೆ ಕೋಡ್ಲು ರಾಮಕೃಷ್ಣ ನಿರ್ದೇಶನದ 'ಯಾರಿಗೂ ಹೇಳ್ಬೇಡಿ' ಚಿತ್ರದಲ್ಲಿ ವಠಾರದ ಹೆಂಗಸರ ಜೊತೆ ಕಾಣಿಸಿಕೊಳ್ಳುವ ವೈಶಾಲಿ ಮಧ್ಯಮವರ್ಗದ ಹೆಂಗಸರ ಭಾವನೆಗಳನ್ನು ಬಿಚ್ಚಿಟ್ಟರು.

ಸಿನಿಮಾದಲ್ಲಿ ಹೇಳಿಕೊಳ್ಳುವಂತಹ ಅದ್ಭುತ ಪಾತ್ರಗಳು ಸಿಗುತ್ತಿಲ್ಲ ಎಂಬ ಕೊರಗಿನಲ್ಲೇ ಇದ್ದ ವೈಶಾಲಿ ಆ ಕೊರಗನ್ನು ನೀಗಿಕೊಂಡಿದ್ದು ರಂಗಭೂಮಿಯಲ್ಲಿ. ಆದರೆ ಅದೃಷ್ಟಕ್ಕೇ ಪಾತ್ರಗಳ ಬಗೆಗಿದ್ದ ಅವರ ತಹತಹವನ್ನು ನೀಗಲಿಲ್ಲ. ಆಗ ಅವರ ನೆರವಿಗೆ ಬಂದಿದ್ದು ಕಿರುತೆರೆ. ಸಿನಿಮಾದಲ್ಲಿ ಅಭಿನಯಿಸುವುದು ಕಡಿಮೆಯಾಗುತ್ತಲೇ ಅವರು ಕಿರುತೆರೆಯ ಕಡೆ ವಾಲಿದರು. ಅಲ್ಲಿ 'ಹರಿ ಕಾಮತ್ತನ ಹಿಂದಿ' ಸಾಕಷ್ಟು ಜನಪ್ರಿಯಗೊಳಿಸಿದ ಧಾರಾವಾಹಿ. ಆರ್.ಕೆ. ನಾರಾಯಣ್ ಅವರ ಕಥೆಯನ್ನಾಧರಿಸಿ ಶಂಕರ್‌ನಾಗ್ ನಿರ್ದೇಶಿಸಿದ 'ಮಾಲ್ಗುಡಿ ಡೇಸ್' ಧಾರಾವಾಹಿಯಲ್ಲಿ ಸ್ವಾಮಿಯ ತಾಯಿಯ ಪಾತ್ರ ನಿರ್ವಹಿಸಿದರು ವೈಶಾಲಿ. ಅದೊಂದು ಐತಿಹಾಸಿಕ ಕಿರುತೆರೆ ಮಾಲಿಕೆ.

ಈ ನಡುವೆ ಶ್ರೀನಿವಾಸ್ ಪ್ರಭು ನಿರ್ದೇಶನದಲ್ಲಿ ವೈಶಾಲಿ ನಿರ್ವಹಿಸಿದ 'ಕಸಮುಸುರೆ ಸರೋಜಾ' ಪಾತ್ರವಂತೂ ಅವರನ್ನು ಕಿರುತೆರೆಯಲ್ಲಿ ಎಂದೆಂದಿಗೂ ಜನಪ್ರಿಯವಾಗಿಡುವಂತೆ ಮಾಡಿತು.

ಇದರೊಂದಿಗೆ ಆರತಿ ನಿರ್ದೇಶನದ 'ನಮ್ಮ ನಮ್ಮಲ್ಲಿ', ಸಿ.ಎನ್. ಮುಕ್ತಾ ಕಾದಂಬರಿಯನ್ನಾಧರಿಸಿದ 'ಕ್ಷಮಯಾ ಧರಿತ್ರಿ', 'ಟಿ.ಎನ್. ಸೀತಾರಾಂ ನಿರ್ದೇಶನದ 'ಮಾಯಾಮೃಗ' ಮೊದಲಾದ ಧಾರಾವಾಹಿಗಳಲ್ಲಿ ಮುಖ್ಯಪಾತ್ರಗಳನ್ನು ನಿರ್ವಹಿಸಿ ಯಶಸ್ವಿಯಾಗಿದ್ದಾರೆ. ಖ್ಯಾತ ನಿರ್ದೇಶಕರಾದ ಎನ್.ಎಸ್. ಶಂಕರ್, ಟಿ.ಎನ್. ಸೀತಾರಾಂ, ಬಿ. ಸುರೇಶ್ ಮೊದಲಾದವರ ಧಾರಾವಾಹಿಗಳಲ್ಲಿ ಪಾತ್ರವಾದ ಹೆಗ್ಗಳಿಕೆ ವೈಶಾಲಿ ಅವರದು.

ನಟನೆಯಲ್ಲಿ ತೊಡಗಿಸಿಕೊಂಡಿದ್ದ ವೈಶಾಲಿ, ಕ್ರಮೇಣವಾಗಿ ನಿರ್ದೇಶನಕ್ಕೆ ಮನಸ್ಸು ಮಾಡಿದ್ದು ಒಂದು ಅಚಾನಕ್ ಸಂದರ್ಭದಲ್ಲಿ. ಅವರು ಆರೋಗ್ಯ ಇಲಾಖೆಗಾಗಿ 'ನೆಮ್ಮದಿಯ ಬದುಕು' ಎಂಬ ಕಿರುಚಿತ್ರವೊಂದನ್ನು ನಿರ್ದೇಶಿಸಿಕೊಟ್ಟಿದ್ದರು. ಆಗ ಅವರಲ್ಲಿ ತಾನೂ ನಿರ್ದೇಶಕಿ ಆಗಬಹುದೆಂಬ ಆತ್ಮವಿಶ್ವಾಸವನ್ನು ತುಂಬಿತು. ಇಂಥ ಹೊತ್ತಲ್ಲೇ ಅವರು ಕಿರುತೆರೆಗಾಗಿ ನಿರ್ದೇಶಿಸಿದ್ದು ಎಚ್.ಎಸ್. ಪಾರ್ವತಿ ಅವರ ಕೃತಿಯನ್ನಾಧರಿಸಿದ 'ಗೂಡಿನಿಂದ ಗಗನಕ್ಕೆ' ಧಾರಾವಾಹಿಯನ್ನು ನಿರ್ದೇಶಿಸಿದ್ದು. ಆಮೇಲೆ 'ಮೂಕರಾಗ' ಎಂಬ ಧಾರಾವಾಹಿ ನಿರ್ದೇಶಿಸಿದರು. ಅದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಆ ಉತ್ಸಾಹದಲ್ಲೇ ನಿರ್ದೇಶನವನ್ನು ಗಂಭೀರವಾಗಿ ತೆಗೆದುಕೊಂಡ ವೈಶಾಲಿ, ಮೂಕರಾಗದ ಬೆನ್ನಲ್ಲೇ ಅವರಿಂದ ಮೂಡಿಬಂದ ಅತ್ಯಂತ ಜನಪ್ರಿಯ, ಟ್ರೆಂಡ್ ಸೆಟ್ಟರ್ ಧಾರಾವಾಹಿ 'ಮೂಡಲಮನೆ'.

ಈ ಟಿ.ವಿ. ಕನ್ನಡ ವಾಹಿನಿಯಲ್ಲಿ ಪ್ರಸಾರವಾದ 'ಮೂಡಲ ಮನೆ' ಹೊಸ ಇತಿಹಾಸವನ್ನು ಸೃಷ್ಟಿಸಿತು. ಆವರೆಗೆ ಪಟ್ಟಣ ಅಥವಾ ಹಳ್ಳಿಯಂತೆ ಬಿಂಬಿಸಿ ಒಳಾಂಗಣದಲ್ಲೇ ಚಿತ್ರಿಸುತ್ತಿದ್ದ ಧಾರಾವಾಹಿಗಳು 'ಮೂಡಲಮನೆ' ಮೂಲಕ ಹೊರಾಂಗಣ ಒಳಾಂಗಣ ಎಲ್ಲವನ್ನೂ ಹಳ್ಳಿಯಲ್ಲೇ ಚಿತ್ರಿಸಿ ಉತ್ತರ ಕರ್ನಾಟಕದ ಭಾಷೆ ಮತ್ತು ಪರಿಸರದ ಕತೆಯನ್ನು ಧಾರಾವಾಹಿ ರೂಪಕ್ಕೆ ತಂದು ಯಶಸ್ವಿಯಾದವರು ವೈಶಾಲಿ ಕಾಸರವಳ್ಳಿ. ಹಲವು ಕಂತುಗಳಲ್ಲಿ ಮನೆ ಮಾತಾದ 'ಮೂಡಲ ಮನೆ' ವೈಶಾಲಿ ಅವರ ಕೂಸಷ್ಟೇ ಅಲ್ಲ, ದೊಡ್ಡ ಕನಸು ಕೂಡ ಆಗಿತ್ತು.

ಅಲ್ಲಿಂದ ನಂತರ ಕಿರುತೆರೆಯಲ್ಲಿ ಉತ್ತರ ಕರ್ನಾಟಕದ ಧಾರಾವಾಹಿಗಳ ದೊಡ್ಡ ಇತಿಹಾಸವೇ ಶುರುವಾಯಿತು. ಈ ಮಧ್ಯೆ ಅವರ ಆರೋಗ್ಯ ಆಗಾಗ ಹದಗೆಡುತ್ತಿತ್ತು. ಆದರೂ ಚೇತರಿಸಿಕೊಂಡು ಕೈಗೆತ್ತಿಕೊಂಡಿದ್ದು ಎಂ.ಕೆ. ಇಂದಿರಾ ಅವರ ಕೃತಿಯನ್ನಾಧರಿಸಿದ್ದ 'ನೂರೊಂದು ಬಾಗಿಲು' ಟೆಲಿಚಿತ್ರ. 'ಝೀ' ಕನ್ನಡ ವಾಹಿನಿಗಾಗಿ ನಿರ್ದೇಶಿಸಿದ ಈ ಟೆಲಿಫಿಲ್ಮ್ ಅತ್ಯಂತ ಜನಪ್ರಿಯತೆಯನ್ನು ಮತ್ತೊಮ್ಮೆ ತಂದು ನೀಡಿತು. ವೈಶಾಲಿ ವೃತ್ತಿ ಬದುಕಿನಲ್ಲಿ ಅತ್ಯುನ್ನತ ಕೀರ್ತಿ ತಂದುಕೊಟ್ಟ ಮತ್ತೊಂದು ಧಾರಾವಾಹಿ 'ಮುತ್ತಿನ ತೋರಣ'. ಗ್ರಾಮೀಣ ಮನಸ್ಸುಗಳ, ಮಧ್ಯಮ ವರ್ಗದ ಅಂತರಾಳವನ್ನು ನೈಜ ರೂಪದಲ್ಲಿ ಕಟ್ಟಿಕೊಟ್ಟ ಹೊಸ ರೀತಿಯ ಪ್ರಯತ್ನದ ಧಾರಾವಾಹಿ. ಇದು ಜನಪ್ರಿಯ ಪ್ರಸಾರ ಕಾಣುತ್ತಿರುವ ಮಧ್ಯಕಾಲದಲ್ಲೇ ಅಂದರೆ ಸುಮಾರು ೧೨೦ ಕಂತುಗಳನ್ನು ನಿರ್ದೇಶಿಸುವ ಹೊತ್ತಿಗೆ ವೈಶಾಲಿ ಆರೋಗ್ಯ ಮತ್ತು ಹದಗೆಟ್ಟ ಕಾರಣ, ಅವರ ಪುತ್ರ ಅಪೂರ್ವ ಅದನ್ನು ಮುಂದುವರಿಸಿದರು.

ರಂಗಭೂಮಿಯಲ್ಲೂ ಸಾಕಷ್ಟು ಕೆಲಸ ಮಾಡಬೇಕೆಂಬ ಹಂಬಲ ಇದ್ದರೂ ಸಮಯದ ಅಭಾವದಿಂದಾಗಿ ಈವರೆಗೆ ನಿರ್ದೇಶಿಸಲು ಸಾಧ್ಯವಾಗಿರುವುದು 'ಸೇವಂತಿ ಪ್ರಸಂಗ' ನಾಟಕವೊಂದನ್ನೇ. ಖ್ಯಾತ ನಟಿ ಪೂಜಾ ಲೋಕೇಶ್ ಅಭಿನಯಿಸಿದ 'ಸೇವಂತಿ ಪ್ರಸಂಗ' ಜಯಂತ್ ಕಾಯ್ಕಿಣಿ ಅವರು ಬರೆದ ನಾಟಕ. ಜಾರ್ಜ್ ಬರ್ನಾರ್ಡ್ ಷಾನ 'ಪಿಗ್ಮೇಲಿಯನ್' ಸ್ಫೂರ್ತಿಯಿಂದ ಬರೆದ ನಾಟಕವದು. ತಿಪ್ಪೆ ಕ್ರಾಸ್‌ನ ಹುಡುಗಿಯ ಈ ಕತೆಯನ್ನು ವೈಶಾಲಿ ಅದ್ಭುತವಾಗಿ ನಿರ್ದೇಶಿಸಿದರೆಂದು ಪತ್ರಿಕೆಗಳಲ್ಲಿ ಆ ನಾಟಕ ಕುರಿತಂತೆ ವರದಿಗಳು ಬಂದಿದ್ದವು. ಆಗ ನಮ್ಮೊಂದಿಗಿದ್ದ ಖ್ಯಾತ ಶಿಕ್ಷಣತಜ್ಞ ಎಚ್. ನರಸಿಂಹಯ್ಯ ಅದನ್ನು ನೋಡಿ ಸಂಭ್ರಮಿಸಿ ಕೊಂಡಾಡಿದ್ದರು. ಅನಾರೋಗ್ಯದ ಕಾರಣದಿಂದ ಅವರಿಗೆ ಇನ್ನಷ್ಟು ನಾಟಕಗಳನ್ನು ನಿರ್ದೇಶಿಸುವುದಕ್ಕೆ ಸಾಧ್ಯವಾಗಲಿಲ್ಲ.

ವೈಶಾಲಿ ಅವರ ಆಸಕ್ತಿಯ ವೈವಿಧ್ಯವೇ ಯಾರಿಗಾದರೂ ಒಂದು ಸ್ಫೂರ್ತಿ. ಯಾಕೆಂದರೆ ನಟಿಯಾಗಿ ಪ್ರವೇಶಿಸಿದ ವೈಶಾಲಿ, ನಟನೆಯ

ಅವಕಾಶವನ್ನು ರಂಗಭೂಮಿ, ಚಿತ್ರರಂಗ ಮತ್ತು ಕಿರುತೆರೆಯಲ್ಲಿ ಅರಸಿಕೊಂಡರು. ಆ ನಡುವೆ ನಿರ್ದೇಶನಕ್ಕೆ ಇಳಿದು, ಯಶಸ್ವಿಯಾದರು. ಆ ಹಂತದಲ್ಲೇ ಅವರು ಆರಿಸಿಕೊಂಡ ಇನ್ನೊಂದು ಕ್ಷೇತ್ರ ವಸ್ತ್ರ ವಿನ್ಯಾಸ. ವಸ್ತ್ರ ವಿನ್ಯಾಸಕಿ ಆಗುವುದಕ್ಕೆ ಮುಖ್ಯ ಕಾರಣ ಅವರ ಗುರುಗಳು ಬಿ.ವಿ. ಕಾರಂತರು. ಅವರ ಪತ್ನಿ ಪ್ರೇಮಾ ಕಾರಂತ್ ಒಡನಾಟ ವೈಶಾಲಿಗೆ ತುಂಬ ಇತ್ತು. ಪ್ರೇಮಾ ಕಾರಂತ್ ವಸ್ತ್ರ ವಿನ್ಯಾಸಕಿಯಾಗಿಯೇ ಹೆಸರು ಮಾಡಿದ್ದರಿಂದ ಸಹಜವಾಗಿ ವೈಶಾಲಿಗೂ ಅದರ ಕಡೆಗೆ ಆಕರ್ಷಣೆ ಇತ್ತು. ಅವರು ವಸ್ತ್ರ ವಿನ್ಯಾಸಕಿಯಾಗಿ ಕೆಲಸ ಮಾಡಲು ಆರಂಭಿಸಿದ್ದು ಗಿರೀಶ್ ಕಾಸರವಳ್ಳಿಯವರ 'ಬಣ್ಣದ ವೇಷ' ಚಿತ್ರದಿಂದ. ನಂತರದ 'ಮನೆ', 'ಕುಬಿ ಮತ್ತು ಇಯಾಲ', 'ಕ್ರೌರ್ಯ' ಚಿತ್ರಗಳಿಗೂ ಅವರದೇ ಉಡುಪು ವಿನ್ಯಾಸವಿತ್ತು. ೧೯೯೮ರಲ್ಲಿ ಬಿಡುಗಡೆಯಾದ 'ತಾಯಿ ಸಾಹೇಬ' ಚಿತ್ರ ಅವರಿಗೆ ರಾಷ್ಟ್ರಪ್ರಶಸ್ತಿ ತಂದುಕೊಟ್ಟಿತು. ತಾರೆ ಜಯಮಾಲ ನಿರ್ಮಿಸಿ ಅಭಿನಯಿಸಿದ ಗಿರೀಶ್ ಕಾಸರವಳ್ಳಿ ಅವರ ನಿರ್ದೇಶನದ ಸಿನಿಮಾ ಅದು.

'ತಾಯಿ ಸಾಹೇಬ' ಉತ್ತರ ಕರ್ನಾಟಕದ ಕತೆಯಾದ್ದರಿಂದ ಅವರಿಗೆ ಆ ಚಿತ್ರದ ವಸ್ತ್ರವಿನ್ಯಾಸಕ್ಕೆ ವಿಶೇಷ ಗಮನ ನೀಡಲು ಸಾಧ್ಯವಾಯಿತು. ಯಾಕೆಂದರೆ ವೈಶಾಲಿ ಮೂಲತಃ ಗುಲ್ಬರ್ಗಾದಲ್ಲಿ ಹುಟ್ಟಿ ಬೆಳೆದವರು. ಅವರಿಗೆ ಉತ್ತರ ಕರ್ನಾಟಕದ ಪ್ರದೇಶಗಳ ವಸ್ತ್ರವಿನ್ಯಾಸಗಳ ಬಗ್ಗೆ ತುಂಬ ಹತ್ತಿರದ ಮಾಹಿತಿಗಳಿದ್ದವು. ಹಾಗಾಗಿ 'ಮೂಡಲಮನೆ' ಧಾರಾವಾಹಿಯನ್ನೂ ಅಷ್ಟೊಂದು ಯಶಸ್ವಿಯಾಗಿ ಮಾಡಿ ಆ ಪ್ರದೇಶವನ್ನು ಅಚ್ಚುಕಟ್ಟಾಗಿ ಕಟ್ಟಿಕೊಟ್ಟರು. 'ತಾಯಿ ಸಾಹೇಬ' ಸ್ವಾತಂತ್ರ್ಯಪೂರ್ವ ಉತ್ತರ ಕರ್ನಾಟಕದ ಬ್ರಾಹ್ಮಣದ ಕುಟುಂಬದ ಕತೆಯಾಗಿದ್ದರಿಂದ ಆ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಕಲೆಹಾಕಿ ವಸ್ತ್ರವಿನ್ಯಾಸವನ್ನು ಮಾಡಿದ್ದರು ವೈಶಾಲಿ. ಕೊಲ್ಲಾಪುರ ಮೊದಲಾದ ಕಡೆಗೆಲ್ಲಾ ಹೋಗಿ ಆ ಚಿತ್ರಕ್ಕೆ ಬೇಕಾದ ವಸ್ತ್ರಗಳನ್ನೆಲ್ಲಾ ತೆಗೆದುಕೊಂಡು ಬಂದಳು. 'ಆ ವಿಷಯದಲ್ಲಿ ನಾನು ಯಾವತ್ತೂ ತಲೆ ಕೆಡಿಸಿಕೊಳ್ಳುತ್ತಲೂ ಇರಲಿಲ್ಲ, ಮಧ್ಯಪ್ರವೇಶ ಮಾಡುತ್ತಲೂ ಇರಲಿಲ್ಲ. ಅಷ್ಟೊಂದು

ಅಚ್ಚುಕಟ್ಟಾಗಿ ಎಲ್ಲವನ್ನೂ ನೋಡಿಕೊಂಡಳು. ಆ ಚಿತ್ರದ ಹಂಬು ನನ್ನದು, ಹಂದರ ಆಕೆಯದು' ಎಂದು ಗಿರೀಶ್ ಕಾಸರವಳ್ಳಿ ನೆನಪಿಸಿಕೊಳ್ಳುತ್ತಾರೆ. ಆ ಕೆಲಸದಲ್ಲಿ ಅವರು ತೋರಿದ ಶ್ರದ್ಧೆ ಮತ್ತು ನಿಖರತೆಗಾಗಿ ಆ ಸಾಲಿನ ಅತ್ಯುತ್ತಮ ವಸ್ತ್ರ ವಿನ್ಯಾಸಕಿ ರಾಷ್ಟ್ರಪ್ರಶಸ್ತಿ ಸಂದಿತು. ಅದೇ ವೈಶಾಲಿಯವರಿಗೆ ಸ್ಫೂರ್ತಿಯಾಯಿತು. ಮುಂದೆ ಗಿರೀಶ್ ನಿರ್ದೇಶನದ ರಾಷ್ಟ್ರೀಯ ಪ್ರಶಸ್ತಿ ವಿಜೇತ ಚಿತ್ರ 'ದ್ವೀಪ'ಕ್ಕೆ ವಸ್ತ್ರ ವಿನ್ಯಾಸಕಿಯಾಗಿ ಕೆಲಸ ಮಾಡಿದರು. ೨೦೧೦ರಲ್ಲಿ ರಾಷ್ಟ್ರ ಪ್ರಶಸ್ತಿಗಳನ್ನು ಬಾಚಿಕೊಂಡ ಗಿರೀಶ್ ನಿರ್ದೇಶನದ 'ಕನಸೆಂಬೋ ಕುದುರೆಯನ್ನೇರಿ' ಚಿತ್ರಕ್ಕೂ ವೈಶಾಲಿಯವರೇ ವಸ್ತ್ರ ವಿನ್ಯಾಸಕಿಯಾಗಿದ್ದರು.

ಧಾರಾವಾಹಿಯ ಜನಪ್ರಿಯ ನಿರ್ದೇಶಕಿಯೇ ಆಗಿದ್ದ ವೈಶಾಲಿ, ಚಿತ್ರರಂಗದಲ್ಲಿ ಮಾತ್ರ ಸಹಾಯಕ ನಿರ್ದೇಶಕಿಯಾಗಿಯೇ ಉಳಿದವರು. ಅವರು ಸಹಾಯಕ ನಿರ್ದೇಶಕಿಯಾಗಿ ಕೆಲಸ ಮಾಡಿದ್ದು ಬೇರೆ ಯಾರಿಗೂ ಅಲ್ಲ, ಸ್ವತಃ ಪತಿ ಗಿರೀಶ್ ಕಾಸರವಳ್ಳಿ ಅವರಿಗೆ. ಗಿರೀಶ್ ಅವರ ಚಿತ್ರಗಳನ್ನು ಇಷ್ಟಪಡುತ್ತಿದ್ದ ವೈಶಾಲಿ, ಅವರ ಸಿನಿಮಾಕ್ಕೆ ಮೊದಲು ಸಹಾಯಕ ನಿರ್ದೇಶಕಿಯಾಗಿ ಕೆಲಸ ಮಾಡಿದ್ದು 'ಬಣ್ಣದ ವೇಷ' ಸಿನಿಮಾದ ಮೂಲಕ. ನಂತರ 'ತಾಯಿ ಸಾಹೇಬ'. ಆ ಚಿತ್ರದಲ್ಲಿ ಸಂಭಾಷಣೆ ಕಟ್ಟುವುದರಲ್ಲೂ ವೈಶಾಲಿ ಸಹಾಯ ಇತ್ತು.

ನಿರ್ದೇಶನವನ್ನು ಅಚ್ಚುಕಟ್ಟಾಗಿ, ಪ್ರಬುದ್ಧವಾಗಿ ಮಾಡಲು ಹೇಗೆ ತಾನೇ ಸಾಧ್ಯ? ಎನ್ನುವ ಗಿರೀಶ್ ಕಾಸರವಳ್ಳಿಯವರ ಅನುಮಾನಕ್ಕೆ ಅವರು ನೀಡಿದ್ದ ಉತ್ತರ ಸೃಜನಶೀಲ ಕ್ಷೇತ್ರದ ಎಲ್ಲರಿಗೂ ಮಾದರಿಯದು – 'ನಾನೀಗ ಸಿನಿಮಾ ನೋಡುವಾಗ, ಸಿನಿಮಾ–ಧಾರಾವಾಹಿಗಳಲ್ಲಿ ಅಭಿನಯಿಸುವಾಗ ಅದರ ಕಟ್ಟುವ ಕ್ರಮವನ್ನು ಗಮನಿಸುತ್ತಿದ್ದೇನೆ. ಏಕಲವ್ಯನಂತೆ ಕಲಿತೆ'. ಆಸಕ್ತಿಯೊಂದೇ ಕಾರಣಕ್ಕಾಗಿ ವೈಶಾಲಿ, ಬದುಕಿನಲ್ಲಿ ಅಷ್ಟೆಲ್ಲಾ ಸಾಧಿಸಲು ಸಾಧ್ಯವಾಯಿತು. ನಟನೆಯ ಜೊತೆಜೊತೆಗೆ ಆಗಾಗ ಕಂಠದಾನ ಕಲಾವಿದೆಯಾಗಿ ಕೆಲಸ ಮಾಡಲು ಸಾಧ್ಯವಾಯಿತು. ಡಬ್ ಮಾಡುವ ಮೂಲಕ ಚಿತ್ರರಂಗ ಪ್ರವೇಶಿಸಿದ ಕಾರಣದಿಂದಾಗಿ ಆ ವೃತ್ತಿ ಅವರಿಗೇನೂ ಕಷ್ಟವಾಗಲಿಲ್ಲ. ಅದರ ಜೊತೆಗೆ

ಅನುವಾದಕಿಯಾಗಿಯೂ ವೈಶಾಲಿ ಕೆಲಸ ಮಾಡಿದರು. ಮರಾಠಿ ಭಾಷೆಯ ಸಂಪರ್ಕ ಇದ್ದ ಕಾರಣ ಅಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ 'ಸಂಧ್ಯಾರಾಗ', 'ನಾನೇನೋ ಹೇಳಬೇಕು', 'ಬ್ಯಾರಿಸ್ಟರ್' ನಾಟಕಗಳನ್ನು ಅನುವಾದಿಸಿಕೊಟ್ಟರು. ಅದೇ ರೀತಿ ಹಿಂದಿಯಿಂದ ಕನ್ನಡಕ್ಕೆ 'ಜಸ್ಮಾ ಓಡನ್' ನಾಟಕವನ್ನು ಅನುವಾದಿಸಿದರು.

ಪ್ರಶಸ್ತಿಗಳು ವೈಶಾಲಿಯವರಂಥ ಕಲಾವಿದೆಯನ್ನು ಅರಸಿ ಬರಲಿಲ್ಲ ಎಂದೇನೂ ಇಲ್ಲ. ಹಾಗಂತ ಕೆಲವು ಅವರ ಕೈತಪ್ಪಿ ಹೋದ ಪ್ರಸಂಗಗಳೂ ಇವೆ. ಅವರ ರಂಗಭೂಮಿಯ ಕೊಡುಗೆಯನ್ನು ಗುರುತಿಸಿ, ೨೦೦೨ರಲ್ಲಿ ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ರಂಗಭೂಮಿ, ಚಿತ್ರರಂಗ ಮತ್ತು ಕಿರುತೆರೆಯ ಕೊಡುಗೆಯನ್ನು ಪರಿಗಣಿಸಿ ೨೦೦೫ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಲಾಯಿತು. ಮೂರೂ ಕ್ಷೇತ್ರಗಳಲ್ಲಿ ಪ್ರಶಸ್ತಿ ಪಡೆದ ಏಕೈಕ ಕನ್ನಡತಿ ವೈಶಾಲಿ. 'ಹಯವದನ' ನಾಟಕದ ಅಭಿನಯಕ್ಕಾಗಿ ರಾಷ್ಟ್ರ ಮಟ್ಟದ ಪ್ರಶಸ್ತಿ, 'ತಾಯಿಸಾಹೇಬ' ಚಿತ್ರದ ವಸ್ತ್ರ ವಿನ್ಯಾಸಕ್ಕೆ ರಾಷ್ಟ್ರ ಪ್ರಶಸ್ತಿ, 'ಆಕ್ರಮಣ' ನಟನೆಗೆ ರಾಜ್ಯ ಪ್ರಶಸ್ತಿ ದೊರೆತಿದೆ. ಕಿರುತೆರೆಯಲ್ಲಿನ ನಟನೆಗಾಗಿ ಒನಿಡಾ ಟಿ.ವಿ. ಪ್ರಶಸ್ತಿ ರಾಷ್ಟ್ರಮಟ್ಟದಲ್ಲಿ ಸಂದಿತ್ತು.

ಅಪಾರ ಕನಸು, ಶಕ್ತಿಗಳ ಕೇಂದ್ರ ವೈಶಾಲಿ. ಅವರು ಹೊಸ ಹೊಸ ಸಾಧನೆ, ಸಂವೇದನೆಗಳೊಂದಿಗೆ ಚಿತ್ರರಂಗ, ರಂಗಭೂಮಿ ಮತ್ತು ಕಿರುತೆರೆ ಪ್ರಪಂಚದಲ್ಲೂ ವಿಹರಿಸಿದವರು. ಆದರೆ ಬಹಳ ಹಿಂದಿನಿಂದ ಅವರನ್ನು ಅನಾರೋಗ್ಯ ಕಾಡುತ್ತಲೇ ಹೋಯಿತು. ಕಿಡ್ನಿಗೆ ಸಂಬಂಧಿಸಿದ ಕಾಯಿಲೆಯ ಜೊತೆ ಹೆಣಗಬೇಕಾಗಿ ಬಂದಾಗ ಅವರಿಗೆ ಚಿಕಿತ್ಸೆ ನೀಡುವುದೂ ಕಷ್ಟವಾಗಿತ್ತು. ಇದು ನಿಧಾನವಾಗಿ ಉಲ್ಬಣಿಸುತ್ತಾ, ಮೂತ್ರಜನಕಾಂಗ ವೈಫಲ್ಯದಿಂದಾಗಿ ಶ್ವಾಸಕೋಶ, ಪಿತ್ತಜನಕಾಂಗಗಳೂ ವಿಫಲವಾದವು. ಕೊನೆಗೂ ಅವರ ಆರೋಗ್ಯ ಚೇತರಿಸಿಕೊಳ್ಳದೇ ೨೦೧೦ರ ಸೆಪ್ಟೆಂಬರ್ ೨೭ರಂದು ನಿಧನ ಹೊಂದಿದರು. ಅವರೊಳಗಿನ ಆಸಕ್ತಿ, ಚೈತನ್ಯ ಮಣ್ಣಲ್ಲಿ ಲೀನವಾಯಿತು. ಆದರೆ ಅವರು ತಮ್ಮ ಕಣ್ಣುಗಳನ್ನು ಮಣ್ಣು ಮಾಡದೇ ದಾನ ಮಾಡಿದ್ದಾರೆ. ಆ ಮೂಲಕ

ನಿಧನಾನಂತರವೂ ವೈಶಾಲಿಯವರ ವಿಶಾಲ ಕಣ್ಣುಗಳು, ಅವರ ದೃಷ್ಟಿ ಇನ್ನೊಬ್ಬರಲ್ಲಿ ಜೀವಂತವಾಗಿ ನಮ್ಮನ್ನು ನೋಡುತ್ತಿರುತ್ತದೆ.

ವೈಶಾಲಿಗೆ, ಈ ಯಾತ್ರೆಯುದ್ದಕ್ಕೂ ಇದ್ದ ಇನ್ನೊಂದು ಮುಖ್ಯ ಕೊರಗೆಂದೆ ಚಿತ್ರರಂಗದಲ್ಲಿ ಅವರಿಗೆ ಒಳ್ಳೆಯ ಪಾತ್ರಗಳು ಸಿಗಲಿಲ್ಲ ಎನ್ನುವುದು. ಹಲವು ಚಿತ್ರಗಳಲ್ಲಿ ಹಲವು ಪಾತ್ರಗಳಲ್ಲಿ ವೈಶಾಲಿ ಅವರು ಕಾಣಿಸಿಕೊಂಡರೂ ಅದೆಲ್ಲಾ ಒಂದೇ ಮುಖವಿರುವ, ಆಯಾಮಗಳೇ ಇಲ್ಲದ ಸವಕಲು ಪಾತ್ರಗಳು ಎನ್ನುವ ಕೊರಗು ಅವರನ್ನು ಸದಾ ಕಾಡಿಸುತ್ತಿತ್ತು. ಅದೇ ರಂಗಭೂಮಿಯಲ್ಲಿ ನಿರ್ವಹಿಸಿದ 'ಪದ್ಮಿನಿ'ಯಂಥ ಪಾತ್ರಗಳು ಒಬ್ಬ ಕಲಾವಿದೆಗೆ ಅಭಿನಯದ ನಾನಾ ಮುಖಗಳನ್ನು ಅಭಿವ್ಯಕ್ತಗೊಳಿಸಲು ಸವಾಲಾಗಿರುತ್ತಿತ್ತು.. ಸಿನಿಮಾದಲ್ಲಿ ಹಾಗಾಗಲಿಲ್ಲ ಎನ್ನುವುದೇ ಅವರ ನೋವು. ಕೊನೆಯ ದಿನಗಳಲ್ಲಿ ಅವರು ಖ್ಯಾತ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರ ಕಾದಂಬರಿಯೊಂದನ್ನು ಆಧರಿಸಿ ಸಿನಿಮಾ ಮಾಡುವ ಆಲೋಚನೆಯನ್ನೂ ಮಾಡಿದ್ದರು. ದುರಾದೃಷ್ಟವಶಾತ್ ಅದು ಕೈಗೂಡಲೇ ಇಲ್ಲ.

ನಟಿ, ಸಹಾಯಕ ನಿರ್ದೇಶಕಿ, ಸಂಭಾಷಣೆಕಾರ್ತಿ, ವಸ್ತ್ರ ವಿನ್ಯಾಸಕಿ, ಧಾರಾವಾಹಿ ನಿರ್ದೇಶಕಿ ಹೀಗೆ ವಿವಿಧ ವಲಯಗಳಲ್ಲಿ ವೈಶಾಲಿ ನಿರ್ವಹಿಸಿದ ಪಾತ್ರ ಅವಿಸ್ಮರಣೀಯ. ಅವರ ಅಗಲಿಕೆ ಸೃಜನಶೀಲ ಸದಭಿರುಚಿಯ ಚಿತ್ರಾಸಕ್ತರಿಗೆ ಭರಿಸಲಾಗದ ನಷ್ಟವನ್ನುಂಟುಮಾಡಿದೆ. ಸಾಂಸ್ಕೃತಿಕ ಲೋಕಕ್ಕೆ 'ಅನನ್ಯ', 'ಅಪೂರ್ವ' ಕೊಡುಗೆ ನೀಡಿ ಜನಮನದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ.

* * *

# ಭಕ್ತಿ

## ಆಶಯ:

ಭಕ್ತಿ ಎಂಬ ಸಂಸ್ಕೃತ ಪದವು 'ಭಜ್' ಎಂಬುದರಿಂದ ಬಂದಿದೆ. ಭಜಿಸು ಎಂದರೆ ತ್ಯಜಿಸು ಎಂದರ್ಥ. ಭಕ್ತಿ ಎಂದರೆ 'ಜ್ಞಾನ' ಎಂಬ ಅರ್ಥವೂ ಇದೆ. ಸೇವೆ, ಉಪಾಸನೆ, ಆರಾಧನೆ ಎಂಬುದು ಇದರ ಸಾಮಾನ್ಯಾರ್ಥವಾಗಿದೆ. ಭಗವಂತನ ಅನುಗ್ರಹ ಪಡೆಯಲು ಇರುವ ಸಾಧನವೇ ಭಕ್ತಿ. ಭಗವಂತನಲ್ಲಿ ಭಕ್ತಿಯೆಂಬುದು ಪರಮ ಪ್ರೇಮ, ಅಮೃತ ಸ್ವರೂಪ. ಇದನ್ನು ಪಡೆದಾತ ಮುಕ್ತಿ ಹೊಂದುತ್ತಾನೆ.

"ಸಾ ಪರಾನುರಕ್ತಿಃ ಭಕ್ತಿಃ" ಪರಮನ ಬಗೆಗಿನ ಅನುಪಮ ಪ್ರೀತಿಯೇ ಭಕ್ತಿ. (Supreme love towards God is devotion) ಇದು ಅಂತರಂಗದ ದ್ರವ್ಯವಾಗಿದೆ. ದೇವರನ್ನು ಪ್ರೀತಿಸುತ್ತಾ, ಜೀವನದ ಸಕಲ ಕೆಲಸ ಕಾರ್ಯಗಳನ್ನು ದೇವರ ಸೇವೆ ಎಂದು ನಡೆಸಿ ಕೊನೆಗೆ ಪ್ರೀತಿಯ ಮೂಲಕವೇ ಭಗವಂತನನ್ನು ಸೇರಲು ಇರುವ ಸಾಧನಾ ಮಾರ್ಗವೇ ಭಕ್ತಿಯೋಗ. ಭಕ್ತಿ ಎಂದರೆ ಶ್ರದ್ಧೆ, ನಂಬಿಕೆಯಾಗಿದೆ.

ಇಂಥ ಭಕ್ತಿಯಲ್ಲಿ ಎರಡು ಪ್ರಕಾರಗಳು. ಸಕಾಮ ಭಕ್ತಿ ಮತ್ತು ನಿಷ್ಕಾಮ ಭಕ್ತಿ ಎಂದು. ಯಾವುದಾದರೊಂದು ಫಲದ ಅಪೇಕ್ಷೆಯಿಂದ ದೇವರನ್ನು ಪ್ರೀತಿಸುವುದು, ಭಜಿಸುವುದು ಸಕಾಮ ಭಕ್ತಿ. ಯಾವ ಅಪೇಕ್ಷೆಯೂ ಇಲ್ಲದೆ ದೇವರನ್ನು ಪ್ರೀತಿಸುವುದು, ಭಜಿಸುವುದು ನಿಷ್ಕಾಮ ಭಕ್ತಿ.

ಆದಿ ಕಾಲದಿಂದಲೂ ಮನುಜ ದೇವರ ಮೇಲೆ ನಂಬಿಕೆಯಿಟ್ಟು ಭಕ್ತಿಯಿಂದ ಪೂಜೆ ಮಾಡುತ್ತಾ ಬಂದಿರುವುದನ್ನು ಕಾಣುತ್ತೇವೆ. ವೇದಗಳ ಕಾಲದಿಂದಲೂ ಭಕ್ತಿ ಭಾವನೆಗಳು ಮೂಡಿರುವುದನ್ನು ಕಾಣಬಹುದು. ವೇದ, ಇತಿಹಾಸ, ಪುರಾಣ, ಕಾವ್ಯಾದಿಗಳಲ್ಲಿ ಭಕ್ತಿರಸ ಉಕ್ಕಿ ಹರಿದಿರುವುದನ್ನು ಕಾಣಬಹುದು. ಹಲವಾರು ದೇವರ ಹೆಸರಿಲ್ಲದೆ

ನಾಮಸ್ಮರಣೆ ಮಾಡುತ್ತಾ ಭಕ್ತಿ ರಸವನ್ನು ಹೊರಹೊಮ್ಮಿಸಿರುವುದನ್ನು ನೋಡುತ್ತೇವೆ.

ಭಕ್ತಿ ಹೃದಯದ ನಿಕ್ಷೇಪ. ದೇವರಿದ್ದಾನೆ ಎಂಬ ನಂಬಿಕೆಯೇ ಮನಸ್ಸಿಗೆ ಎಷ್ಟೋ ಧೈರ್ಯ, ಆನಂದ ಕೊಡುತ್ತದೆ. ಭಕ್ತಿ ಹೃದಯವನ್ನು ಸೂರೆಗೊಂಡದ್ದಲ್ಲದೆ ಆ ಪರಮಾತ್ಮನು ಕಾಣುವುದಿಲ್ಲ. ಭಕ್ತನ ಆಸೆಯಂತೆ ಪರಮಾತ್ಮನು ಯಾವ ರೂಪದಲ್ಲಾದರೂ ಕಾಣಬಹುದು.

ಜಾನಪದ ಸಾಹಿತ್ಯದಲ್ಲಿ ಭಕ್ತಿಯ ನಿರೂಪಣೆ ಸಹಜವಾಗಿ ಮೂಡಿಬಂದಿದೆ. ಜನಪದರು ಪ್ರತಿಯೊಂದು ವಸ್ತುವಿನಲ್ಲೂ ದೇವರನ್ನು ಕಾಣುತ್ತಾರೆ. ತಾವು ಮಾಡುವ ಕೆಲಸ, ಉಪಯೋಗಿಸುವ ವಸ್ತು, ತಿನ್ನುವ ಊಟ ಎಲ್ಲದರಲ್ಲೂ ದೇವರನ್ನು ಕಾಣುತ್ತಾರೆ. ಜಗತ್ತಿನಲ್ಲಿ ಪ್ರೀತಿಯಿಲ್ಲದ ಜೀವಿಯೇ ಇಲ್ಲ. ಈ ಪ್ರೀತಿಯ ಪ್ರವಾಹವನ್ನು ಜಗದೊಡೆಯನಾದ ಸೃಷ್ಟಿ, ಸ್ಥಿತಿ, ಲಯಕರ್ತನಾದ ಪರಮಾತ್ಮನ ಕಡೆಗೆ ಹರಿಸಿದರೆ ಉತ್ಕೃಷ್ಟವಾದ ಭಕ್ತಿಯೆನಿಸಿಕೊಳ್ಳುತ್ತದೆ. ಶಿಷ್ಟರ ಭಕ್ತಿಭಾವಕ್ಕೂ, ಜನಪದರ ಭಕ್ತಿಭಾವಕ್ಕೂ ವ್ಯತ್ಯಾಸವಿರುವುದು ಸ್ಪಷ್ಟವಾಗಿದೆ. ಜನಪದರ ಮನಸ್ಸು ಮುಗ್ಧ. ಅದರಂತೆ ಅವರ ಭಾವನೆಗಳೂ ಮುಗ್ಧತೆಯಿಂದ ಕೂಡಿ ಅವರ ಭಕ್ತಿ ಭಾವಪೂರ್ಣವಾಗಿರುವುದು ಕಂಡುಬರುತ್ತದೆ. ಭಕ್ತಿಯಿಂದ ದೇವರನ್ನು ನೆನೆಯುತ್ತಲೇ ಅವರ ದಿನಚರಿ ಪ್ರಾರಂಭವಾಗಿ ತಮ್ಮ ಪರಿಸರವೇ ಪ್ರಪಂಚವನ್ನಾಗಿ ಮಾಡಿಕೊಂಡು ಆಗಿಹೋದ ಮಹಾತ್ಮರಲ್ಲಿ, ವಸ್ತುಗಳಲ್ಲಿ, ಪ್ರಕೃತಿಯಲ್ಲಿ ದೇವರನ್ನು ಕಂಡು ಭಕ್ತಿಯಿಂದ ನಮಿಸುತ್ತಾರೆ.

ಇನ್ನು ವಚನಕಾರರು ಭಕ್ತಿಯನ್ನು ಕುರಿತು ಭಕ್ತಿ, ಮುಕ್ತಿ ಎಂಬುದು ದೇವರ ಕರುಣವುಳ್ಳಂಗಲ್ಲದೆ ನೆಲೆಗೊಳ್ಳದು, ಸಿದ್ಧಿಸದು ಎಂದು ಶರಣರು ಹೇಳಿದ್ದಾರೆ. ಬಾಹ್ಯ ಅಲಂಕಾರ ಮಾಡಿ ವಿವಿಧ ವಸ್ತುಗಳಿಂದ ಅಂದರೆ ಹೂ, ಹಣ್ಣು, ಬಿಲ್ವಪತ್ರೆ, ಅರ್ಚನೆ, ಅಭಿಷೇಕ ಮಾಡಿದಾಕ್ಷಣ ಭಕ್ತಿಯೆನಿಸುವುದಿಲ್ಲ. ಅದು ಅಂತರಂಗದ ಶ್ರದ್ಧೆಯಿಂದ ಮಾಡುವ ಕಾರ್ಯ ಎಂದೂ, ಮೋಸ ಮಾಡದೆ, ಸುಳ್ಳು ಹೇಳದೆ, ಸನ್ನಡತೆಯನ್ನು ರೂಢಿಸಿಕೊಳ್ಳುವುದೇ ಭಕ್ತಿ ಎಂದು ವಚನಕಾರರು ಹೇಳಿದ್ದಾರೆ.

ಹರಿಹರನ ರಗಳೆಯಲ್ಲಿಯೂ ಭಕ್ತಿಯನ್ನು ಕಾಣುತ್ತೇವೆ. ಕೀರ್ತನಕಾರರಲ್ಲಿ, ಜ್ಞಾನ, ಭಕ್ತಿ, ವೈರಾಗ್ಯಗಳು ಹೃದಯದಿಂದ ಕೀರ್ತನರೂಪವಾಗಿ ಹೊರಹೊಮ್ಮಿದವು. ಕೀರ್ತನೆಗಳಲ್ಲಿ ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮ ನಿವೇದನ – ಎಂಬ ನವವಿಧ ಭಕ್ತಿಯ ರಚನೆಗಳನ್ನು ಕಾಣಬಹುದು.

ಹೀಗೆ ಭಕ್ತಿಯೆಂಬುದು ವೇದಗಳ ಕಾಲದಿಂದ ಇಂದಿನವರೆಗೂ ವಿವಿಧ ರೀತಿಯಲ್ಲಿ ಹರಿದು ಬಂದಿರುವುದನ್ನು ಕಾಣುತ್ತೇವೆ. ಭಕ್ತಿ ಎಂಬುದು ನಂಬಿಕೆ, ಪ್ರೀತಿ. ಇದರಿಂದಲೇ ಮುಕ್ತಿಯನ್ನು ಕಾಣಲು ಸಾಧ್ಯ ಎಂಬುದು ಇದರ ಆಶಯವಾಗಿದೆ.

* * *

# ಜನಪದ ಭಕ್ತಿ

ಏಳುತಾಲೇ ಎದ್ದು ಯಾರ್‍ಯಾರ ನೆನೆಯಾಲಿ
ಎಳ್ಳುಜೀರಿಗೆ ಬೆಳೆಯೋಳಾ–ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನು

ಹೊತ್ತನಂತೆ ಎದ್ದು ಯಾರ್‍ಯಾರ ನೆನೆದೇನು
ಕಲ್ಲು ಕಾವೇರಿ ಕಪಿನೀಯ–ನೆನೆದಾರೆ
ಮೇಲಿದ್ದ ಪಾಪ ಪರಿಹಾರ

ಏಳುವಾಗ ನೆನೆವೇನು ಭಾಳಲೋಚನದವನ
ಜೋಳಿಗೆ ಹೊನ್ನ ಮಳೆಗರೆದ–ಕೈಲಾಸ್ದ
ದೇವ ಮಲ್ಲಯನ ನೆನೆವೇನು

ಎಳ್ಳು ಹೊಲದಾಗಿರುವ ದೊಳಹೊಟ್ಟೆ ಬೆನವಣ್ಣ
ಎಳ್ಳೆಲೆ ತುಪ್ಪ ತಿಳಿದುಪ್ಪ–ಸಲಿಸುವೆ
ದೊಳಹೊಟ್ಟೆ ಬೆನವ ಕೊಡು ಮತಿಯ

ಮೊದಲಾಗಿ ನೆನೆವೇನು ಮದನ ಗೋವಿಂದನ
ಹದಿನೆಂಟು ನಾಮದೊಡೆಯನ–ನೆನೆದಾರೆ
ಹೊತ್ತಿದ್ದ ಪಾಪ ಪರಿಹಾರ.

ಏಳುತಲೆ ಶಿವ ಎನ್ನಿ ಬೀಳುತಲೆ ಶಿವ ಎನ್ನಿ
ಯಾಳೆ ಬಂದಾಗ ಶಿವ ಎನ್ನಿ–ಯೋಳ್ಡೆಡೆಯ
ಸರಪ ಬಂದಾಗ ಶಿವ ಎನ್ನಿ.

ಮುತ್ತಿನ ಮೇಲುಕೋಟೆ ಮತ್ತೀಗ ಹರಿಕೋಟೆ
ಉತ್ತಮರಿರುವುದು ಮೇಲುಕೋಟೆ–ಬೀದೀಲಿ
ಚೆಲುವಯ್ಯ ಮುತ್ತಿನ ತೇರ ಹರಿಸ್ಯಾನು

ಚೆಲುವಯ್ಯ ಬರುವಾಗ ಮನೆಯೆಲ್ಲ ಘಮ್ಮೆಂದೊ
ಮುಡಿದು ಬಂದವರೆ ಮುರುಗನ–ಚೆಲುವಯ್ಯ
ಅವರಿಡಿದು ಬಂದವರೆ ಜವನವ

ವೈರಮುಡಿ ಹೊದುಕೊಂಡು ರಾಜಮುಡಿ ಹಾಸಿಕೊಂಡು
ರಾಜ ಬೀದೀಲಿ ಬರುವೋನೆ–ಚೆಲುವಯ್ಯ
ಅವಳು ನಾರಿ ಒಪ್ಯಾಳೆ ವರನಂದಿ.

ಹೊತ್ತು ಮುಳುಗಿದರೇನು ಕತ್ತಲಾದರೇನು
ಅಪ್ಪ ನಿನಗುಡಿಗೆ ಬರುವೇನೊ–ಮಾದಯ್ಯ
ಮುತ್ತಿನ ಬಾಗೀಲು ತೆರೆದೀರು

ಮಾದಯ್ಯ ಬರುವಾಗ ಮಾಳೆಲ್ಲ ಘಮ್ಮೆಂದೊ
ಮಾಳದಲ್ಲಿ ಗರುಕೆಚಿಗರೀವೋ–ಮಾದೇವ
ಮೂಡ್ಲಲ್ಲಿ ಮಳೆಯು ಸುರಿದಾವೊ

ಮಾದೇವ ನಿನ ಹೊರತು ನಾನ್ಯಾರ ನಂಬಿಲ್ಲ
ನಾ ಮಾಡೆನೆಂಬ ಅಳವಿಲ್ಲ–ಮಲ್ಲಯ್ಯ
ನೀ ನಡಿಸು ನನ್ನ ಸರುವೆಲ್ಲ.

* * *

ಶರಣು ಶರಣುವಯ್ಯ ಗಣನಾಯ್ಕ
ನಮ್ಮ ಕರುಣದಿಂದಲೆ ಕಾಯೊ ಗಣನಾಯ್ಕ

ಎಳ್ಳುಂಡೆ ಜೇನುತುಪ್ಪ ಗಣನಾಯ್ಕ
ನಮಗೆ ವಿದ್ಯಾವ ಕಲಿಸಯ್ಯ ಗಣನಾಯ್ಕ
ಉದ್ದು ಹೋಳಿಗೆ ತುಪ್ಪ ಗಣನಾಯ್ಕ
ನಮ್ಗೆ ತಪ್ಪದೆ ಒಪ್ಪಿಸುವೆ ಗಣನಾಯ್ಕ

ಗೊನೆ ಮೇಗ್ಲ ಬಾಳೆಹಣ್ಣು ಗಣನಾಯ್ಕ
ನಿಮ್ಗೆ ಕಳ ಅಡ್ಕೆ ಚಿಗುರೆಲೆ ಗಣನಾಯ್ಕ
ಕೊಂಬೆ ಮೇಗ್ಲ ನಿಂಬೆಹಣ್ಣು ಗಣನಾಯ್ಕ
ನಿಮ್ಗೆ ಒಡಗಾಯಿ ಇಡಗಾಯಿ ಗಣನಾಯ್ಕ

ಕರ್ಪೂರ ಸಾಂಬ್ರಾಣಿ ಗಣನಾಯ್ಕ
ನಿಮ್ಗೆ ಮರುಗ ಮಲ್ಲಿಗೆ ಜಾಜಿ ಗಣನಾಯ್ಕ
ಹಸುರಂಗಿ ಕಾಲ್ಗಡಗ ಗಣನಾಯ್ಕ
ನಿಮ್ಗೆ ಕುಶಲದ ಮೇಲ್ಕಟ್ಟು ಗಣನಾಯ್ಕ

ಮೂಷಕ ವಾಹನ ಗಣನಾಯ್ಕ
ನಮ್ಮ ಶಿವನ ಕುಮಾರನಯ್ಯ ಗಣನಾಯ್ಕ
ನಿನ್ಗೆ ಹೆಂಡ್ರಿಲ್ಲ ಮಕ್ಳಲ್ಲ ಗಣನಾಯ್ಕ
ನೀ ಎದ್ದು ಬಾರಯ್ಯ ಸಿದ್ಧಿ ಗಣನಾಯ್ಕ

ಬಿಲ್ಪತ್ರೆ ವನದಲ್ಲಿ ಗಣನಾಯ್ಕ
ನಿನ್ನ ಧ್ಯಾನ ಮಾಡಿ ನೆನ್ದೇವಯ್ಯ ಗಣನಾಯ್ಕ

ಕಂಟಕ ಹರ ನೀನು ಗಣನಾಯ್ಕ
ನಮ್ಗೆ ವರವನು ಪಾಲಿಸಯ್ಯ ಗಣನಾಯ್ಕ

* * *

# ನಮಸ್ಕಾರ

ಮಣಿಯಲೆನ್ನ ಶಿರವು ನಿನ್ನ
ಚರಣ ಧೂಳಿತಲದಲಿ
ನನ್ನ ಅಹಂಕಾರವೆಲ್ಲ
ಮುಳುಗಲಶ್ರುಜಲದಲಿ!

ನನಗೆ ನಾನೆ ಪೂಜೆಗೈಯೆ
ಸೊಡರನೆತ್ತಲು
ಬೆಳಕು ಬರುವ ಬದಲು ಅಯ್ಯೋ
ಬರಿಯ ಕತ್ತಲು!
ಅಹಂಕಾರದಂಧಕಾರ
ಮುತ್ತುತಿದೆ ಸುತ್ತಲು!

ನನ್ನ ನಾನೆ ಮೆರೆಯದಂತೆ
ನಾನು ಗೈವ ಕರ್ಮದಿ
ನಿನ್ನ ಇಚ್ಛೆ ಪೂರ್ಣವಾಗಲೆನ್ನ ಜೀವ ಧರ್ಮದಿ.

ತಳೆಯಲೆನ್ನ ಜ್ಞಾನ ನಿನ್ನ
ಚರಮ ಶಾಂತಿಯ;
ಬೆಳಗಲೆನ್ನ ಪ್ರಾಣ ನಿನ್ನ
ಪರಮ ಕಾಂತಿಯ
ನನ್ನನಳಿಸು, ನೀನೆ ನೆಲಸು
ಹೃದಯ ಪದ್ಮದಲದಲಿ!

**–ರವೀಂದ್ರನಾಥ ಟಾಗೋರ್**

**ಕನ್ನಡಕ್ಕೆ– ಕುವೆಂಪು(ಕುಟೀಚಕ)**

ಪುಟ: ೧೫೩

* * *

# ಭಾರತೀಯ ಭಕ್ತಿ ಪರಂಪರೆಯ ಭಿನ್ನ ಧ್ವನಿ : 'ವಚನ ಚಳುವಳಿ'

**–ಡಾ। ಜಿ.ಎನ್. ಉಪಾಧ್ಯ**

ಭಾರತೀಯ ಭಕ್ತಿ ಪರಂಪರೆಗೆ ಸುದೀರ್ಘವಾದ ಇತಿಹಾಸವಿದೆ. ನಮ್ಮ ದೇಶದ ಪ್ರಾಚೀನ ಸಂಸ್ಕೃತಿಯ ತೊಟ್ಟಿಲುಗಳಾದ ಹರಪ್ಪ ಮೊಹೆಂಜೊದಾರೊಗಳಲ್ಲಿ ದೊರೆತ ಅವಶೇಷಗಳಲ್ಲಿ ಶಿವನ ಉಪಾಸನೆಗೆ ಸಂಬಂಧಿಸಿದಂತೆ ಸಮೃದ್ಧ ಮಾಹಿತಿ ಲಭ್ಯವಾಗಿದೆ. ಅವರ ಆರಾಧ್ಯ ದೈವ ಪಶುಪತಿ; ರುದ್ರನಾಗಿದ್ದ. ಅಲ್ಲಿನ ಜನರು ಲಿಂಗರೂಪಿ ಭಗವಂತನ ಪೂಜೆ ಪುನಸ್ಕಾರದಲ್ಲಿ ನಿರತರಾಗಿದ್ದರೆಂಬುದು ಪ್ರಾಚ್ಯ ಅವಶೇಷಗಳಿಂದ ತಿಳಿದುಬರುತ್ತದೆ. ವೇದಕಾಲಕ್ಕಿಂತ ಹಿಂದಿದ್ದ ದ್ರಾವಿಡ ಸಂಸ್ಕೃತಿಯಲ್ಲಿಯೂ ಭಕ್ತಿಗೆ ಅಷ್ಟಾಗಿ ಮಹತ್ವವಿರಲಿಲ್ಲ. ವೇದಗಳು ಕರ್ಮಕ್ಕೆ ಪ್ರಾಧಾನ್ಯ ನೀಡಿದವು. ಉಪನಿಷತ್ಕಾಲಕ್ಕೆ ಜ್ಞಾನಕ್ಕೆ ಒತ್ತು ನೀಡಲಾಯಿತು. ಯಜ್ಞಯಾಗಾದಿಗಳಿಗೆ ಮಹತ್ವ ಕೊಟ್ಟ ಆರ್ಯರು ಕ್ರಮೇಣ ಭಕ್ತಿಯನ್ನೂ ಸ್ವೀಕಾರ ಮಾಡಿದರು. ಹೀಗಾಗಿ ಭಗವದ್ಗೀತೆಯಲ್ಲಿ ಭಕ್ತಿಗೆ ಆದ್ಯತೆ ಸಿಕ್ಕಿತು. 'ಸ್ವಾರ್ಥವನ್ನು ಬದಿಗೊತ್ತಿ ತನ್ನನ್ನು ತಾನು ಮರೆಯುವಂಥ ಅಚಲ ಪ್ರೇಮವೇ ಭಕ್ತಿ' ಎಂದು ಭಾಗವತದಲ್ಲಿ ಹೇಳಲಾಗಿದೆ. ರಾಮಾಯಣ ಮಹಾಕಾವ್ಯದಲ್ಲಿ 'ಉತ್ಕೃಷ್ಟವಾದ ಪ್ರೀತಿಯೇ ಭಕ್ತಿ' ಎಂದು ಸಾರಲಾಗಿದೆ. ನಾರದ ಭಕ್ತಿಸೂತ್ರದಲ್ಲಿ 'ಅಮೃತಸ್ವರೂಪನಾದ ಭಗವಂತನಲ್ಲಿ ಉತ್ಕಟವಾದ ಪ್ರೇಮವೇ ಭಕ್ತಿ' ಎಂದು ಬಣ್ಣಿಸಲಾಗಿದೆ. ಪರಮಾತ್ಮನಲ್ಲಿ ಮನಸ್ಸು ಸ್ಥಿರಗೊಳಿಸುವುದಕ್ಕೆ ಏಕಾಗ್ರತೆ ಅಗತ್ಯ. ಈ ಏಕಾಗ್ರತೆ ಅಭ್ಯಾಸದಿಂದ ಸಿದ್ಧಿಸುತ್ತದೆ. ಅಭ್ಯಾಸಕ್ಕೆ ಜ್ಞಾನ, ಅದಕ್ಕೆ ಧ್ಯಾನ ಮತ್ತು ಕರ್ಮಫಲ ತ್ಯಾಗರೂಪವಾದ ಭಕ್ತಿ ಕಾರಣ. ಭಕ್ತಿಯಿಂದ ನೆಮ್ಮದಿ, ಶಾಂತಿ ಸಿಗುತ್ತದೆ ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ.

ಮುಖ್ಯವಾಗಿ 'ಭಕ್ತಿ' ಆಗಮ ಸಂಸ್ಕೃತಿಯಿಂದ ಹುಟ್ಟಿಕೊಂಡಿತೆಂದು

ಹೇಳಲಾಗುತ್ತದೆ. ಸಾಕ್ಷಾತ್ ಶಿವನೇ ನಿರೂಪಿಸಿದ ಎಂದು ನಂಬಲಾಗುವ ಆಗಮಗಳ ಬಗೆಗೂ ಸಾಕಷ್ಟು ಚಿಂತನೆ ನಡೆದಿದೆ. ಶಿವ ಅನಾದಿ, ಅನಂತ, ಸರ್ವಜ್ಞ, ಸರ್ವಶಕ್ತ ಎಂದೂ ಹೇಳಲಾಗಿದೆ. ಶೈವ ಧರ್ಮದಲ್ಲಿ ಕ್ರಮೇಣ ಕಾಶ್ಮೀರಶೈವ, ತಮಿಳುಶೈವ, ವೀರಶೈವ ಮೊದಲಾದ ಶಾಖೆಗಳು ಹುಟ್ಟಿಕೊಂಡವು. ತಮಿಳುಶೈವ ಶಾಖೆಗೆ ಸಾಕಷ್ಟು ಹಿನ್ನೆಲೆಯಿದೆ. "ದಕ್ಷಿಣ ಭಾರತದಲ್ಲಿ ಶೈವ ಧರ್ಮಕ್ಕೆ ಸಂಬಂಧಿಸಿದಂತೆ ಒಂದು ಮಹಾ ಕ್ಷೋಭೆಯೇ ಉಂಟಾಯಿತು. ಇದಕ್ಕೆ ಮುಖ್ಯವಾಗಿ ನಾಯನಾರರೆಂಬ ಶೈವಸಂತರು ತಮಿಳು ಭಾಷೆಯಲ್ಲಿ ಬರೆದ ಭಕ್ತಿಗೀತೆಗಳೇ ಕಾರಣ. ಈ ಗೀತೆಗಳನ್ನು ೧೧ ಸಂಕಲನಗಳಾಗಿ ವಿಭಾಗಿಸಲಾಗಿದೆ. ಇವು 'ಪೆರಿಯ ಪುರಾಣಂ' ಎಂಬ ಹೆಸರಿನ ತಮಿಳು ಪುರಾಣದೊಂದಿಗೆ ಸೇರಿ ಸಂತರ ಪವಿತ್ರ ಸಾಹಿತ್ಯವಾಗಿ (ಧರ್ಮಗ್ರಂಥವಾಗಿ) ಶೈವಧರ್ಮದ ಅಡಿಪಾಯವನ್ನು ಸ್ಥಾಪಿಸಿವೆ. 'ತೇವಾರಂ' ಎಂಬ ಹೆಸರಿನ ಮೊದಲ ಏಳು ಸಂಕಲನಗಳನ್ನು ಸಂಬಂಧರ್ ಹಾಗೂ ಅವನ ಹಳೆಯ ಸಮಕಾಲೀನರಾದ ಅಪ್ಪರ್ ಮತ್ತು ಸುಂದರರ್ ಎಂಬ ಸಂತರು ರಚಿಸಿದರು. ಇವರೆಲ್ಲರೂ ಜೀವಿಸಿದ್ದು ಕ್ರಿ.ಶ. ಏಳನೆಯ ಶತಮಾನದಲ್ಲಿ ಅಥವಾ ಅದಕ್ಕಿಂತ ಸ್ವಲ್ಪ ಅನಂತರದ ಕಾಲದಲ್ಲಿ. 'ದೇವಾರಂ'ಗಳನ್ನು ವೇದಗಳಿಗೆ ಸರಿಸಮವಾಗಿ ಭಾವಿಸಲಾಗಿದೆ" (ಯುಗಯಾತ್ರಿ ಭಾರತೀಯ, ಸಂಸ್ಕೃತಿ; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೮ (ಪುಟ ೩೯)) ಎಂಬ ಮಾತು ನಿಜವಾದರೂ ತಮಿಳು ಶೈವ ಶಾಖೆಯಲ್ಲಿ ಭಕ್ತಿಗೆ ವಿಶೇಷ ಒತ್ತು ನೀಡಿದ್ದನ್ನು ಕಾಣಬಹುದು. ವೈದಿಕ ವಿರೋಧಿ ನಿಲುವು ಅಲ್ಲಿ ಸ್ವಲ್ಪಮಟ್ಟಿಗೆ ಕಂಡುಬರುತ್ತದೆ.

ತಮಿಳು ಶೈವ ಸಿದ್ಧಾಂತಕ್ಕೆ ಸುದೀರ್ಘವಾದ ಇತಿಹಾಸವಿದೆ. ಈ ಸಿದ್ಧಾಂತ ಕ್ರಿ.ಶ. ೮ನೆಯ ಶತಮಾನದಿಂದ ೧೩ನೆಯ ಶತಮಾನದವರೆಗೆ ಸಾಕಷ್ಟು ಪ್ರಭಾವಶಾಲಿಯಾಗಿತ್ತು. ದಕ್ಷಿಣದಲ್ಲಿ ಶಿವನ ಉಪಾಸಕರು ನಾಯನಾರರು. ನಾಯನಾರರು ಶಿವನ ಉಗ್ರಭಯಂಕರ ರೂಪವನ್ನು ಕಳೆದು ಪ್ರಸನ್ನ, ಶಾಂತಿರೂಪ, ಕರುಣಾಶಾಲಿಯಾದ ಶಿವನ ಆರಾಧನೆಯನ್ನು ಚಾಲ್ತಿಗೆ ತಂದರು. ಈ ಶಿವಭಕ್ತರ ಸಾಹಿತ್ಯ 'ತೇವಾರಂ'

ಎಂದೇ ಜನಪ್ರಿಯವಾಯಿತು. ತಮಿಳು ಶೈವ ಪರಂಪರೆಯ ಪ್ರಭಾವ ಕರ್ನಾಟಕದ ಮೇಲೂ ಆಯಿತು. ಅಲ್ಲಿನ ೬೩ ಮಂದಿ ಪುರಾತನರು ಇಲ್ಲಿಯೂ ಪೂಜ್ಯನೀಯರಾದರು. ವೀರಶೈವ ಧರ್ಮದ ಅನೇಕ ಅಂಶಗಳಲ್ಲಿ ತಮಿಳು ಶೈವ ಸಿದ್ಧಾಂತವನ್ನೇ ಹೋಲುತ್ತದಾದರೂ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ ಈ ಮೊದಲಾದ ಕೆಲವು ವಿಶಿಷ್ಟ ಅಂಶಗಳಿಂದ ತನ್ನದೇ ಆದ ಆಚರಣೆಯ ಮಾರ್ಗವನ್ನು ಕಂಡುಕೊಂಡಿದೆ ಎಂಬುದಾಗಿ ತಿಪ್ಪೇರುದ್ರಸ್ವಾಮಿ ಅವರು ಅಭಿಪ್ರಾಯ ಪಟ್ಟಿದ್ದಾರೆ. ೧೨ನೆಯ ಶತಮಾನದ ಆರಂಭದಲ್ಲಿ ಬಸವಣ್ಣನ ನೇತೃತ್ವದಲ್ಲಿ ನಡೆದ ಕ್ರಾಂತಿಯಿಂದಾಗಿ ಇನ್ನಿತರ ಶೈವ ಸಂಪ್ರದಾಯಗಳು ವೀರಶೈವ ದಲ್ಲಿ ಧ್ರುವೀಕರಣಗೊಂಡವು. ಹೀಗಾಗಿ ಸರ್ವಶ್ರುತಿ ಸಮನ್ವಯ ಮಾರ್ಗ ವಾದ ವೀರಶೈವ ಆಂದೋಲನ ಬಹುಬೇಗ ಜನಪ್ರಿಯವಾಯಿತು.

**ಸಾಂಘಿಕ ಹೋರಾಟ :** ಶಿವಶರಣರದು ಸಮಾಜೋ ಧಾರ್ಮಿಕ ಆಂದೋಲನ. 'ಧರ್ಮ' ಎಂಬ ಪದಕ್ಕೆ ಅವರು ಹೊಸ ಅರ್ಥವನ್ನು ತಂದುಕೊಟ್ಟರು. ಅಲ್ಲಿ 'ದಯೆಯೇ ಧರ್ಮದ ಮೂಲ'ವಾಯಿತು. ದಯ ಬೇಕು ಸಕಲ ಪ್ರಾಣಿಗಳಲ್ಲಿ ಎನ್ನುತ್ತಾ ಭೂತದಯೆಯನ್ನು ಶರಣರು ಎತ್ತಿಹಿಡಿದರು. ಅವರು ಧಾರ್ಮಿಕ ಚೌಕಟ್ಟಿನೊಳಗಿದ್ದುಕೊಂಡು ಸಮಾಜ ಸುಧಾರಣೆಗೆ ಧುಮುಕಿದರು. ಧರ್ಮದ ಮೂಲಕ ಮಾನವೀಯತೆಯನ್ನು ಬಿತ್ತಿ ಬೆಳೆದರು. ಸಾಹಿತ್ಯ ರಚನೆ ಶಿವಶರಣರ ಮುಖ್ಯ ಉದ್ದೇಶವಾಗಿರಲಿಲ್ಲ. ಜನಜಾಗೃತಿಗಾಗಿ ಅವರು ಸಾಹಿತ್ಯವನ್ನು ತಮ್ಮ ಕ್ರಾಂತಿಯ ಪಥವಾಗಿ ಮಾಡಿಕೊಂಡರು. ತಮಗೆ ಕಂಡದ್ದನ್ನು ಧೈರ್ಯವಾಗಿ ಜನರ ಆಡುನುಡಿಯಲ್ಲಿ ಹೇಳಿದರು. ದೇವರೊಂದಿಗೂ ಕನ್ನಡದಲ್ಲೇ ಸಂಭಾಷಣೆ ನಡೆಸಿದರು. ಕನ್ನಡ ನುಡಿಯನ್ನು ಈ ಮೂಲಕ ದೇವವಾಣಿಯ ದರ್ಜೆಗೇರಿಸಿದರು. "ವಚನ ಸಾಹಿತ್ಯ ಎರವಲು ತಂದದ್ದಲ್ಲ. ಅದು ಕನ್ನಡದ ಸ್ವಾರ್ಜಿತ ಸ್ವತ್ತು. ವಚನಕಾರರು ಸಂಸ್ಕೃತದ ಆಚಾರ್ಯರಲ್ಲ. ಅವರು ಅಚ್ಚಗನ್ನಡದ ಬೇಸಾಯಗಾರರು" ಎಂಬ ಎಂ.ಆರ್.ಶ್ರೀ. ಅವರ ಮಾತು ಸತ್ಯ. ಬದುಕು ಸಹ್ಯವಾಗಲು, ಸಮಾಜ ಸುಧಾರಣೆಗೆ ಏನೆಲ್ಲ ಆಗಬೇಕೋ ಅದೆಲ್ಲವನ್ನೂ ಶರಣರು

ಆಂದೋಲನದ ರೀತಿಯಲ್ಲಿ ಒಗ್ಗಟ್ಟಿನಿಂದ ಮಾಡಿದರು. ಹೀಗಾಗಿ "ಶಿವಶರಣರು ಹುಟ್ಟು ಹಾಕಿದ ಚಳುವಳಿ ದಲಿತ ದುರ್ಬಲರ ಕ್ರಾಂತಿಯಾಯಿತು. ಅಬಲೆಯರ ಕ್ರಾಂತಿಯಾಯಿತು. ಕಾಯಕ ಪರಿಣಾಮಿಗಳ ಕ್ರಾಂತಿಯಾಯಿತು. ದಾಸೋಹಿಗಳ ಕ್ರಾಂತಿಯಾಯಿತು. ಈ ಕ್ರಾಂತಿಯ ಬೆಳಗು, ತಪ್ಪುಗಳ ಕತ್ತಲೆಯನ್ನು ತಕ್ಕಮಟ್ಟಿಗೆ ಹರಿಯಲು ಕಾರಣವಾಯಿತು"(ಡಾ| ಎಸ್.ಎಂ. ಹಿರೇಮಠ, ೧೯೯೯, ಪುಟ ೧೧). ವಾಸ್ತವ ಬದುಕಿನ ನಿಜದ ನೆಲೆಗಳನ್ನು ಶರಣರು ತೆರೆದು ತೋರಿದರು. ಇದರಿಂದ ಹೊಸ ಬಗೆಯ ವಿಚಾರವಾದ ತಲೆ ಎತ್ತಿತು. ಎಲ್ಲವನ್ನೂ ಪ್ರಶ್ನಿಸುವ ವಿಚಾರಿಸುವ ಧೈರ್ಯ, ಸಾಮರ್ಥ್ಯ ಬಂದಿತು. ವಚನಕಾರರು ಸಂಪ್ರದಾಯಕ್ಕಿಂತ ಅನುಭವಜ್ಞಾನಕ್ಕೆ ಹೆಚ್ಚು ಮಹತ್ವ ನೀಡಿದರು.

೧೧ರಿಂದ ೧೬–೧೭ನೆಯ ಶತಮಾನದವರೆಗೂ ಭಾರತದ ವಿವಿಧ ಪ್ರಾಂತಗಳಲ್ಲಿ ಭಕ್ತಿ ಚಳುವಳಿ ನಡೆಯಿತು. ಆದರೆ ಕನ್ನಡದ ನೆಲದಲ್ಲಿ ನಡೆದಷ್ಟು ವೈವಿಧ್ಯಮಯವಾದ ಕ್ರಾಂತಿಕಾರಿಯಾದ ಕಾರ್ಯ ಬೇರೆಲ್ಲೂ ನಡೆದಿಲ್ಲ. ಬಸವಣ್ಣನವರ ನೇತೃತ್ವದಲ್ಲಿ ನಡೆದ ಈ ಚಳುವಳಿಯ ಪರಿ ಭಿನ್ನವಾಗಿತ್ತು. ಬಸವಣ್ಣನ ದೆಸೆಯಿಂದ ಕಲ್ಯಾಣದಲ್ಲಿ ವಚನಧರ್ಮ ವಿಕಾಸಗೊಂಡಿತು. ಅಲ್ಲಿಯ ಶಿವಾನುಭವ ಮಂಟಪದಲ್ಲಿ ಆತ್ಮ ಆತ್ಮ ಮಥಿಸಿ ಅನುಭಾವ ಹುಟ್ಟಿತು. ವಚನಧರ್ಮ ಪ್ರಕಾಶಿಸಿತು. ಯಾರು ಯಾರಲ್ಲಿ ವಚನಧರ್ಮ ಪ್ರೇಮ ಗುಪ್ತವಾಗಿ ಸುಪ್ತವಾಗಿ ಇದ್ದಿತೋ ಅದೆಲ್ಲವೂ ಚೇತನಗೊಂಡು ಹರಿಯತೊಡಗಿತು. ಈ ಪ್ರಕಾಶ, ಪ್ರವಾಹ ಕನ್ನಡನಾಡಿನಲ್ಲಿ ತಲೆದೋರಿದವು. ಕನ್ನಡ ಭಾಷೆಯ ಕಿರಣಗಳಿಂದ ಕನ್ನಡ ಭಾಷಾ ವಾಹಿನಿಯಿಂದ ಬೆಳಕು ಹರಡಿತು, ಬೆಳೆ ಎದ್ದಿತು. ಸ್ವತಂತ್ರ ವಿಚಾರವಾದಿಗಳ ಇಂತಹ ದೊಡ್ಡ ಗುಂಪು ತಮಿಳುನಾಡಿನಲ್ಲಿ–ಯಾಗಲಿ ತೆಲುಗುನಾಡಿನಲ್ಲಿಯಾಗಲಿ ಇವಕ್ಕೆ ಹಿಂದೆ ಕಾಣಿಸಿಲ್ಲ, ಆಗಲೂ ಕಾಣಲಿಲ್ಲ. ತಮಿಳುನಾಡಿನಲ್ಲಿ ತಲೆದೋರಿದ ಶೈವಭಕ್ತಿ ಪ್ರವಾಹದ ಸ್ತೋತ್ರಗೀತೆಗಳನ್ನು ಬೆಳೆಸಿತು. ಅರವತ್ತುಮೂರು ಪುರಾತನರ ಕಥೆಗಳನ್ನು ಅರಳಿಸಿತು. ಈ ತಮಿಳುನಾಡಿನ ಕ್ರಾಂತಿಯು ಪ್ರಭಾವವನ್ನು ವಚನಕಾರರಲ್ಲಿ ಕಾಣಬಹುದಾದರೂ ವಿಚಾರವಾದ, ಸ್ಥಾವರಲಿಂಗ

ಪೂಜೆಯ ಖಂಡನೆ ಮೊದಲಾದವನ್ನು ಈ ತಮಿಳು ಕ್ರಾಂತಿಯಲ್ಲಿ ಕಾಣಲಾಗುವುದಿಲ್ಲ. ತೆಲುಗುನಾಡಿನಲ್ಲಿ ಆರಾಧ್ಯ ಸಂಪ್ರದಾಯ ಪ್ರಬಲಿಸಿತು. ಇದರ ಪ್ರಭಾವವೂ ಕನ್ನಡನಾಡಿನಲ್ಲಿ ದೊಡ್ಡ ಕ್ರಾಂತಿಯುಂಟಾಯಿತು" ಎಂದು ಹೇಳಬಹುದು ಎಂಬುದಾಗಿ ಎಂ.ಆರ್. ಶ್ರೀನಿವಾಸಮೂರ್ತಿ ಅವರು ತೌಲನಿಕವಾಗಿ ವಿವೇಚಿಸುತ್ತಾ ಶರಣ ಚಳುವಳಿಯ ವೈಶಿಷ್ಟ್ಯವನ್ನು ಎತ್ತಿ ಹಿಡಿದಿದ್ದಾರೆ.

೧೨ನೆಯ ಶತಮಾನದ ಸಂಕ್ರಮಣ ಕಾಲಘಟ್ಟದಲ್ಲಿ ಕನ್ನಡ ನಾಡಿನಲ್ಲಿ ವಚನ ಚಳುವಳಿ ಹೊಸ ಸಂಚಲನೆಯನ್ನು ಉಂಟುಮಾಡಿತು. ಶರಣರ ಆಂದೋಲನದಿಂದ ೧೨ನೆಯ ಶತಮಾನ 'ವಿಚಾರ ಕ್ರಾಂತಿ'ಯ ಯುಗವೆಂದೇ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಕನ್ನಡನಾಡಿನಲ್ಲಿ ನಡೆದ ಈ ಚಳುವಳಿಯನ್ನು ಇತಿಹಾಸಕಾರರು ಇಂದು ಗಂಭೀರವಾಗಿ ಪರಿಗಣಿಸುತ್ತಿದ್ದಾರೆ. ಪ್ರಸಿದ್ಧ ಇತಿಹಾಸಕಾರರೂ ಚಿಂತಕರೂ ಆದ ರೊಮಿಲಾ ಥಾಪರ್ ಅವರು ವಚನ ಚಳುವಳಿಯನ್ನು `Most progressive movement in India' 'ಭಾರತದ ಪ್ರಖರವಾದ ಪ್ರಗತಿಶೀಲ ಚಳುವಳಿ' ಎಂದವರು ವಚನಕಾರರ ಸಾಧನೆಗಳನ್ನು ಬಣ್ಣಿಸಿದ್ದಾರೆ. ಕನ್ನಡ ವಿದ್ವಾಂಸರಾದ ಸಿ. ವೀರಣ್ಣ ಅವರು 'ಕಾಯಕ ಜೀವಗಳ ಚಳುವಳಿ' ಎಂಬುದಾಗಿ ಕರೆದರೆ, ಎಂ. ಚಿದಾನಂದ ಮೂರ್ತಿ ಅವರು ಸಾಮಾಜಿಕ ಧಾರ್ಮಿಕ ಆಂದೋಲನವೆಂದೂ ಕರೆದಿದ್ದಾರೆ. ನಡೆನುಡಿಯನ್ನು ಒಂದು ಮಾಡಿ ಬಹಿರಂಗ ಅಂತರಂಗಗಳ ಶುದ್ಧಿಗೆ ಯತ್ನಿಸಿದ ಶರಣರು ಜ್ಞಾನ ಮತ್ತು ಕ್ರಿಯೆಗಳನ್ನು ಒಂದುಗೂಡಿಸಿ ಕಾಯ ಮತ್ತು ಕಾಯಕಕ್ಕೆ ಹೊಸ ಅರ್ಥವನ್ನು ನೀಡಿದರು.

> 'ಜ್ಞಾನದಲರಿದಡೇನು, ಕ್ರಿಯನಾಚರಿಸದನ್ನಕ್ಕ
> ನೆನದ ಮಾತ್ರದಲ್ಲಿ ಅಹುದೆ, ಕಾರ್ಯದಲ್ಲಲ್ಲದೆ
> ಕುರುಡ ಕಾಣ ಪಥವ, ಹೆಳವನಡೆಯಲರಿಯ
> ಒಂದಿಲ್ಲದಿರ್ದಡೊಂದಾಗದು
> ಜ್ಞಾನವಿಲ್ಲದಿರ್ದ ಕ್ರಿ ಜಡನು ಕ್ರಿಯಿಲ್ಲದ ಜ್ಞಾನವಾಗ್ಜಾಲ
> ಭ್ರಾಂತು ಇದು ಕಾರಣ

ಸಿದ್ಧಸೋಮನಾಥ ಲಿಂಗವ ಕೂಡುವ ಶರಣಂಗೆ
ಎರಡೂ ಬೇಕು'

**–ಅಮುಗಿ ದೇವಯ್ಯ**

ಸಕಲ ಜೀವಾತ್ಮರಿಗೆ ಲೇಸ ಬಯಸುವ ಗುರಿಯನ್ನಿಟ್ಟುಕೊಂಡು ವಚನ ರಚನೆಗೈದ ಶರಣರ ವಿಚಾರಧಾರೆಗಳು ಕನ್ನಡದ ಉಪನಿಷತ್ತುಗಳೆನಿಸಿದವು. "ವಚನಕಾರರು ಸ್ವತಂತ್ರಮತಿಗಳು, ಪ್ರಯೋಗಶೀಲರು. ಅವರ ಜೀವಿತದ ಮುಖ್ಯಗುರಿ ಆತ್ಮನಿರೀಕ್ಷಣೆ ಹಾಗೂ ಸಮಾಜ ಸುಧಾರಣೆ. ಅಂತರಂಗ ಶುದ್ಧಿಗಾಗಿ ಅವರು ಜನಸಾಮಾನ್ಯರೊಡನೆ ಮಾತನಾಡಿದರು. ಹಾಗೆ ಮಾತನಾಡುವಾಗ ಅವರ ಸಹಜ ನುಡಿಯೇ ಅನುಭಾವಾಭಿವ್ಯಕ್ತಿಯ ಮಾಧ್ಯಮವಾಯಿತು. ಅದು ಯಾವುದೇ ಕೃತಕ ಪ್ರಭಾವಕ್ಕೆ ಒಳಗಾಗದೇ ಇದ್ದ ರೂಪದಲ್ಲಿಯೇ ಹೊರಹೊಮ್ಮಿತು. ಅನುಭವ ತೀವ್ರತೆ ಆ ಅಭಿವ್ಯಕ್ತಿಗೆ ಕಾರಣವಾದುದರಿಂದ ಅನಿವಾರ್ಯವಾಗಿ ಒಂದು ವಿಶಿಷ್ಟ ರೂಪ ತನ್ನಿಂದ ತಾನೆ ಕ್ಷಣದಲ್ಲಿ ಮೈದಾಳಿತು. ಅದೇ ವಚನವೆನಿಸಿತು. ಹರಿದುಬಂದ ಪರಂಪರೆಯ ಸತ್ವ ಬೆರೆತು ನಿಂದ ನೆಲದ ಗುಣ ತೆರೆದು ತೋರಿದ ಉಜ್ವಲ ಪ್ರತಿಭೆ ಅದರಲ್ಲಿ ಸಂಗಮಿಸಿ ನೂತನತೆ ನಿಮಿರೆದ್ದಿತು" ಎಂಬುದಾಗಿ ವಚನ ವಾಙ್ಮಯದ ಭಿನ್ನಪರಿಯನ್ನು ವೀರಣ್ಣ ರಾಜೂರ ಅವರು (ವಚನ ಅಧ್ಯಯನ ಪುಟ ೨೩) ಸರಿಯಾಗಿಯೇ ಗುರುತಿಸಿದ್ದಾರೆ. ಭಾರತದ ಬೇರೆ ಬೇರೆ ಕಡೆಗಳಲ್ಲಿ ಮೂಡಿಬಂದ ಭಕ್ತಿ ಸಾಹಿತ್ಯಕ್ಕಿಂತ 'ವಚನ ವಾಙ್ಮಯ' ಹೇಗೆ ಭಿನ್ನ ಎಂಬುದನ್ನು ಹೀಗೆ ಪಟ್ಟಿ ಮಾಡಿ ಹೇಳಬಹುದಾಗಿದೆ.

* ಭಾರತದ ಇತರೆಡೆಯ ಭಕ್ತಿಪಂಥದ ಸಂತರಲ್ಲಿ, ಶರಣರಲ್ಲಿ ಅಷ್ಟಾಗಿ ಕಾಣಿಸದ ತೀವ್ರ ಸಾಮಾಜಿಕ ಚಿಂತನೆ, ಸಾಮಾಜಿಕ ನಿಲುವು ಕರ್ನಾಟಕದ ಶಿವಶರಣರ ಅನನ್ಯ ಸಾಧನೆ.
* ಜಾತಿಪಂಥದ ನಿರಾಕರಣೆ, ಜಾತಿರಹಿತ ಸಮಾಜ ನಿರ್ಮಾಣದ ಕನಸು.
* ವೈದಿಕ ವಿಚಾರಧಾರೆಯ ವಿರುದ್ಧ ತೀವ್ರವಾದ ಪ್ರತಿಭಟನೆ, ಹೋರಾಟ.

* ಸಂಕ್ರಮಣ ಕಾಲಘಟ್ಟದಲ್ಲಿ ಕನ್ನಡನಾಡಿನಲ್ಲಿ ಸಂಚಲನವನ್ನು ಉಂಟುಮಾಡಿ ಹೊಸ ಸಮಾಜದ ನಿರ್ಮಾಣದ ಕನಸು ಕಂಡದ್ದು.
* ಎಲ್ಲ ಬಗೆಯ ಪ್ರಭುತ್ವವನ್ನು ಮೀರುವ ಸಮಷ್ಟಿ ಹೋರಾಟ; ಆಂದೋಲನವನ್ನು ರೂಪಿಸಿದ್ದು.
* ಎಲ್ಲ ಬಗೆಯ ಸಮಾನತೆಯನ್ನು ಎತ್ತಿಹಿಡಿದು ವಿಚಾರ ಕ್ರಾಂತಿಯನ್ನು ಸಂಘಟಿಸಿದ್ದು.
* 'ಕಾಯಕ'ದ ಪರಿಕಲ್ಪನೆಯ ಮೂಲಕ ಶ್ರಮಸಂಸ್ಕೃತಿಯನ್ನು ಎತ್ತಿಹಿಡಿದದ್ದು (ವಚನ ಚಳುವಳಿ ಕಾಯಕ ಜೀವಿಗಳ ಹೋರಾಟದ ಕಥೆಯೂ ಆಗಿದೆ.) ಕಾಯಕ ಮಾರ್ಗದಿಂದ ಗಳಿಸಿ ದಾಸೋಹ ಮಾರ್ಗದಿಂದ ವಿತರಣೆ ಮಾಡಬೇಕು ಎಂಬ ಆಶಯವನ್ನು ಶಿವಶರಣರು ಹೊಂದಿದ್ದರು.
* ಶ್ರೀಸಾಮಾನ್ಯನ ಬದುಕು ಹಸನಾಗಬೇಕೆಂಬ ಮಹದಾಶಯ ಅಲ್ಲಿತ್ತು.
* ಶರಣರು ಮನುಜಮತವನ್ನು ಎತ್ತಿಹಿಡಿದರು; ಅವರದು ಮಾನವ್ಯ ಧೋರಣೆ. ಮಾನವೀಯ ಕನಸುಗಳನ್ನು ಕಂಡು ನನಸಾಗಲು ಯತ್ನಿಸಿದರು.
* ಸ್ತ್ರೀಯರ ಆತ್ಮಗೌರವಕ್ಕೆ ಮಾನ್ಯತೆ ನೀಡಿ ಅವರನ್ನು ಸಮಾನವಾಗಿ ಕಂಡದ್ದು ಶರಣರ ಬಹು ದೊಡ್ಡ ಸಾಧನೆ.
* ಶರಣ ಚಳುವಳಿ ಜನಪರವಾದ ಸಾಂಸ್ಕೃತಿಕ ಚಳುವಳಿ ಆಗಿತ್ತು.
* ಕನ್ನಡ ಭಾಷೆಯನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶಿಷ್ಟ ಬಗೆಯ 'ವಚನ'ಗಳನ್ನು ರಚಿಸಿ, ದೇಸಿ ಸಂಸ್ಕೃತಿಯ ಸತ್ವವನ್ನು ಎತ್ತಿಹಿಡಿದರು.
* ಇತರ ಭಕ್ತಿಪಂಥಗಳು ಆಧ್ಯಾತ್ಮಿಕ ಸಮಾನತೆಯನ್ನು ಮಾತ್ರ ಎತ್ತಿ ಹಿಡಿದರೆ ಶರಣರು ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸಿದರು.

* ಎಲ್ಲ ಬಗೆಯ ಸಮನ್ವಯಕ್ಕೆ ಆದ್ಯತೆ, ಉದಾ. ನುಡಿ ನಡೆ, ಅಂತರಂಗ ಬಹಿರಂಗ, ಇಹಪರ, ಲೌಕಿಕ ಅಲೌಕಿಕ ಮುಂತಾದ ಸಮನ್ವಯ; ಸಾಮರಸ್ಯ.
* ಅಂಧಶ್ರದ್ಧೆಯನ್ನು ನಿವಾರಿಸಿ ಪ್ರಗತಿಪರ ವಿಚಾರಧಾರೆಯನ್ನು ಶಿವಶರಣರು ಎತ್ತಿಹಿಡಿದದ್ದು.
* ಶಿವಶರಣರು ದೇವಾಲಯ ಸಂಸ್ಕೃತಿಯನ್ನು ನಿರಾಕರಿಸಿದರು. 'ದೇಹವೇ ದೇವಾಲಯ'ವಾಗಿ ಅವರಿಗೆ ಮುಖ್ಯವಾಯಿತು. ಶೈವರ ಶಿವಲಿಂಗದ ಉಪಾಸನೆಯ ಬದಲಿಗೆ 'ಇಷ್ಟಲಿಂಗ' ಉಪಾಸನೆ ವೀರಶೈವರಿಗೆ ಮುಖ್ಯವಾಯಿತು.
* ಕೆಳವರ್ಗದ ಅಥವಾ ತಳವರ್ಗದ ಜನರು ಈ ಚಳುವಳಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.
* ಗುರುಲಿಂಗ ಜಂಗಮ ಇವರಲ್ಲಿ ಅಭೇದ ಕಲ್ಪಿಸಿದರು. ಎಲ್ಲರಿಗೂ ಏಕಪ್ರಕಾರವಾದ ಗೌರವ ಸಂದಿತು. ಸಂಸಾರದ ಬಗೆಗೆ ಗುಣಾತ್ಮಕವಾದ ನಿಲುವನ್ನು ತಳೆದರು.
* 'ಸಕಲ ಜೀವಾತ್ಮರಿಗೆ ಲೇಸ ಬಯುಸುವ' ಮೂಲಕ ಉದಾರವಾದಿ ಧೋರಣೆಗೆ ಮಹತ್ವ ನೀಡಿದರು.
* ಸಂಸ್ಕೃತದ ಆಧಿಪತ್ಯವನ್ನು ನಿರಾಕರಿಸಿ ದೇಸಿ ನೆಲೆಗೆ ದನಿ ಕೊಟ್ಟು ಜನಪರ ಧೋರಣೆಯನ್ನು ಅಭಿವ್ಯಕ್ತ ಪಡಿಸಿದ್ದು.
* ಅತ್ತ ಗದ್ಯವೂ ಅಲ್ಲದ ಇತ್ತ ಪದ್ಯವೂ ಅಲ್ಲದ (ಗಪದ್ಯ) ಪ್ರತ್ಯೇಕವಾದ 'ವಚನ' ಪ್ರಕಾರವನ್ನು ರೂಪಿಸಿ ತಮ್ಮ ಸಾಮಾಜಿಕ ಉದ್ದೇಶಗಳಿಗೆ ಅವನ್ನು ಬಳಿಸಕೊಂಡಿದ್ದು ಶರಣ ಕ್ರಾಂತಿಯ ಇನ್ನೊಂದು ವೈಶಿಷ್ಟ್ಯ. ಸಾಮಾಜಿಕವಾಗಿ ನಾನಾ ರಂಗಗಳಲ್ಲಿ ಬದಲಾವಣೆ ತರುವ ಒತ್ತಡದಲ್ಲಿ, ಒತ್ತಾಸೆಯಲ್ಲಿ ಪಡಿಮೂಡಿದ್ದು ವಚನ ಸಾಹಿತ್ಯ.
* ಶಿವಶರಣರು ಹನ್ನೆರಡನೆಯ ಶತಮಾನದ ಕನ್ನಡ ನಾಡಿನ

ಸಾಂಸ್ಕೃತಿಕ ಇತಿಹಾಸದಲ್ಲಿ ಉಂಟುಮಾಡಿದ ಸಂಚಲನವು ಮುಂದಿನ ಯುಗಮಾನದಲ್ಲೂ ಪ್ರೇರಣೆ ಪ್ರಭಾವ ಬೀರುತ್ತಾ ಬಂದಿದೆ.

* ವಚನಕಾರರು ಹೇಳಿದ್ದು ದೈನಂದಿನ ಬದುಕಿನ 'ಕ್ರಿಯಾಶೀಲತೆ'. ಇದೇ ಜಂಗಮತ್ವ, ಚಲನಶೀಲ ಗುಣ.
* ನಿಜವಾಗಿಯೂ ಶರಣರ ಅಭಿವ್ಯಕ್ತಿ 'Secular' ಅಭಿವ್ಯಕ್ತಿ.
* ಆರೋಗ್ಯಪೂರ್ಣ, ಸ್ವಾಸ್ಥ್ಯ ಸಮಾಜದ ಕನಸು ಕಂಡದ್ದು. ಮಾನವನ ಘನತೆಯನ್ನು ಎತ್ತಿ ಹಿಡಿದು ಬಾಳ್ವೆಗೆ ಬೆಳಕಾದುದು.
* ಸಾಮೂಹಿಕ ಆಂದೋಲನದ ಮೂಲಕ ಆತ್ಮ ಕಲ್ಯಾಣ ಮತ್ತು ಲೋಕ ಕಲ್ಯಾಣಕ್ಕೆ ಪ್ರಾಶಸ್ತ್ಯ ನೀಡಿದ್ದು.
* ವಚನಕಾರರು ಜೀವನ ಮೌಲ್ಯಗಳಿಗೆ ಹೊಸ ಅರ್ಥವನ್ನು ತಮ್ಮ ಸ್ವಾನುಭವದ ಮೂಲಕ ಒದಗಿಸಿದರು. ಅವರು ತೋರಿದ ಜೀವನ ಪ್ರೀತಿ, ಜೀವನೋತ್ಸಾಹ ಜನಸಾಮಾನ್ಯರಿಗೆ ಒಂದು ರೀತಿಯ ಸಾಂತ್ವನವನ್ನು ಸಮಾಧಾನವನ್ನು ನೀಡಿದವು.
* ಶರಣರು ಸಮಾಜದ ನಡುವಿದ್ದು 'ಸಮಾಜ ಕೇಂದ್ರಿತವಾಗಿ' ಚಿಂತನೆ ನಡೆಸಿದರು. ಹೀಗಾಗಿ ಅವರು ಹೊಸ ಸಮಾಜದ ಹರಿಕಾರರಾದರು. ಆರ್ಥಿಕ ಸಮಾನತೆಯ ಮೂಲಕ ಸಾಮಾಜಿಕ ಸಮಾನತೆ ಸಾಧ್ಯ ಎಂದವರು ನಂಬಿಕೊಂಡಿದ್ದರು.

ಎಲ್ಲರಲ್ಲೂ ಸಮಾನವಾಗಿರುವ ಮಾನವತ್ವದಿಂದಾಗಿ ಎಲ್ಲ ಮನುಷ್ಯರೂ ಸಮಾನರು ಎಂಬ ಶರಣರ ಧೋರಣೆ ಇತರ ಭಕ್ತಿ ಪಂಥಗಳಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ದೇಶ, ಕಾಲ, ಮತಾತೀತವಾಗಿ ಚಿಂತಿಸಿದ ಶಿವಶರಣರ ವಿಚಾರಗಳು ಮಾನವಕಲ್ಯಾಣದ ದೃಷ್ಟಿಯನ್ನು ಹೊಂದಿದ್ದವು. ಇದನ್ನು ಗಮನಿಸಿ ಮಹಾತ್ಮಾ ಗಾಂಧೀಜಿ ಅವರು ಒಂದು ಕಡೆ "At such a time in the history of India, I think all of us can go back to Basava and seek

guidance, inspiration and light from his Philosophy. If Basava's Philosophy is properly understood and interpreted to the common man and woman of India, it will help the country in it's onward march in search of happiness, social equality and spirituality'' ಎಂದಿದ್ದಾರೆ. ಹೀಗಾಗಿ ಕರ್ನಾಟಕದ ಶರಣ ಚಳುವಳಿ ರಾಷ್ಟ್ರೀಯ ಪಾತಳಿಯಲ್ಲಿಯೂ ಮಹತ್ವ ಪಡೆದುಕೊಂಡಿದೆ.

ಉತ್ತರ ಭಾರತದಲ್ಲಿ ಕಬೀರ್, ನಾನಕ್, ದಕ್ಷಿಣ ಭಾರತದಲ್ಲಿ ಅದರಲ್ಲಿಯೂ ತಮಿಳುನಾಡಿನಲ್ಲಿ ರಾಮನುಜಾಚಾರ್ಯರು, ಮಹಾರಾಷ್ಟ್ರದ ಸಂತರು ಇವರೆಲ್ಲ ಬ್ರಾಹ್ಮಣ ವಿರೋಧಿ, ಪುರೋಹಿತ ಶಾಹಿ ವಿರೋಧಿ ನೆಲೆಗಳನ್ನು ಪುರಸ್ಕರಿಸಿದರು. ಇವರು ಜಾತಿ ವ್ಯವಸ್ಥೆಯನ್ನು ಬಲವಾಗಿ ಖಂಡಿಸಿದರು. ಆದರೆ ಇವರದು ವೈಯಕ್ತಿಕ ಹೋರಾಟಗಳಾಗಿದ್ದವೇ ಹೊರತು ಕನ್ನಡ ನಾಡಿನ ಶಿವಶರಣರಂತೆ ಸಂಘಟಿತ ಆಂದೋಲನಗಳಾಗಿರಲಿಲ್ಲ. ಮಹಾರಾಷ್ಟ್ರದಲ್ಲಿ ಹನ್ನೆರಡು ಹದಿಮೂರನೆಯ ಶತಮಾನದಲ್ಲಿ ಜ್ಞಾನೇಶ್ವರರು ಆರಂಭಿಸಿದ ಭಕ್ತಿಪಂಥದ ಅನುಯಾಯಿಗಳಾದವರು ಕೆಳವರ್ಗದವರೇ ಆಗಿದ್ದರು. ನಾಮದೇವ, ಗೋರಾ ಕುಂಬಾರ, ಏಕನಾಥ, ತುಕಾರಾಮ, ಚೋಖಾಮೇಳಾ, ಕಾನ್ಹೋಪಾತ್ರಾ ಮೊದಲಾದವರು ವೈದಿಕ ವಿರೋಧಿ, ಜಾತಿ ನಿರಾಕರಣೆ ಕಾರ್ಯವನ್ನು ಆರಂಭಿಸಿದರು. ಆದರೂ ಶ್ರೇಣೀಕೃತ ಸಮಾಜದಲ್ಲಿ ಇವರ ಹೋರಾಟ ನಿರೀಕ್ಷಿತ ಫಲ ನೀಡಲಿಲ್ಲ. ಇವರೆಲ್ಲ ತಮ್ಮ ತಮ್ಮ ಗುಂಪುಗಳನ್ನು ಕಟ್ಟಿಕೊಂಡು ದ್ವೀಪಗಳಾಗಿಯೇ ಉಳಿದರು. ಪಂಡರಾಪುರ ಇವರನ್ನೆಲ್ಲ ಸೆಳೆಯುವ ಕೇಂದ್ರವಾಗಿದ್ದರೂ ಇವರೆಲ್ಲ ಒಂದೆಡೆ ಕುಳಿತು ಅನುಭವ ಮಂಟಪದಂತೆ ವಿಚಾರಮಂಥನವನ್ನು ಮಾಡಿಕೊಳ್ಳಲಿಲ್ಲ. ಇವರೆಲ್ಲರಿಗೆ ತಕ್ಷಣದ ಆಧ್ಯಾತ್ಮಿಕ ಸಮಾನತೆ ಮುಖ್ಯವಾಯಿತು. ಭಕ್ತರೆಲ್ಲರೂ ಸಮಾನರಾದರು; ತಮ್ಮ ಕೆಲಸ ಮುಗಿಯಿತು ಎಂದು ಭಾವಿಸಿಕೊಂಡರು. ಇಲ್ಲಿ ಸಾಮಾಜಿಕ ಸಮಾನತೆ ಸಾಧ್ಯವಾಗಲೇ ಇಲ್ಲ. ಇಲ್ಲಿನ ಭಕ್ತಿ ಚಳುವಳಿ ಧಾರ್ಮಿಕವಾಗಿ

ಸಾಮಾಜಿಕವಾಗಿ ಕ್ರಾಂತಿಯನ್ನು ಗೈಯಲು ಸಾಧ್ಯವಾಗಲಿಲ್ಲ. ಮಹಾರಾಷ್ಟ್ರದಲ್ಲಿ ಭಕ್ತಿ ಚಳುವಳಿಯಲ್ಲಿ ಕೆಳವರ್ಗದವರು ದೊಡ್ಡ ಪ್ರಮಾಣದಲ್ಲಿದ್ದರೂ ಸಮರ್ಥ ನಾಯಕತ್ವದ ಕೊರತೆ ಎದ್ದು ಕಾಣುತ್ತಿತ್ತು. ಅಲ್ಲಿ ಭಕ್ತಿ ಮುಖ್ಯವಾಗಿ ಪ್ರಗತಿಪರ ಚಿಂತನೆ ಮೂಕವಾಯಿತು, ಮಂಕಾಯಿತು.

ಕರ್ನಾಟಕದಲ್ಲಿ ವಚನಕಾರರು ಸಂಘಟಿತರಾಗಿ ಹೋರಾಟವನ್ನು ಮಾಡಿದರು. ಅವರಿಗೆ ಬಸವಣ್ಣ, ಪ್ರಭುದೇವ, ಚನ್ನಬಸವಣ್ಣರಂಥ ಸಮರ್ಥ ನಾಯಕರ ಮುಂದಾಳತ್ವ ಸಿಕ್ಕಿತು. ಸುಮಾರು ೩೦೦ರಷ್ಟು ಶಿವಶರಣರು, ೫೦ಕ್ಕೂ ಹೆಚ್ಚು ಮಹಿಳಾ ಶರಣರು ಈ ಸಂಘಟನೆಯಲ್ಲಿ ಇದ್ದರೆಂಬುದು ಉಲ್ಲೇಖನೀಯ ಅಂಶ. “ವಚನ ಚಳುವಳಿ ಬಹುತೇಕ ಕೆಳಜಾತಿ ಕೆಳವರ್ಗ ಜನತೆಯ ಕಾರಣದಿಂದಲೇ ಒಂದು ದೊಡ್ಡ ಶಕ್ತಿಯಾಗಲು ಕಾರಣವಾಯಿತು. ವರ್ಣವ್ಯವಸ್ಥೆಯ ಶ್ರೇಣೀಕರಣವನ್ನು ಮುರಿದು ಸಮಾನ ವ್ಯಕ್ತಿತ್ವದ ಆಧಾರದ ಮೇಲೆ ಧಾರ್ಮಿಕ ಪಂಥವೊಂದನ್ನು ನಿರ್ಮಾಣ ಮಾಡುವ ಕೆಲಸವು ಇಲ್ಲಿ ನಡೆಯಿತು. ವಚನ ಚಳುವಳಿಗೆ ಧಾರ್ಮಿಕ ಶಿಸ್ತು ಬಂದದ್ದು ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು ಮುಂತಾದ ಕೆಲವು ಮುಖ್ಯಸ್ಥರಿಂದ ಎನ್ನಬಹುದು. ಹಿಂದೂ ವ್ಯವಸ್ಥೆಯ ರಚನಾ ಸ್ವರೂಪವನ್ನೇ ಪ್ರಶ್ನಿಸಿದ ವಚನಕಾರರು, ಉಳಿದ ಭಕ್ತಿಪಂಥಗಳ ಹಾಗೆ ಕೇವಲ ನೀತಿ ನೆಲೆಯಲ್ಲಿಯೇ ನಿಲ್ಲದೆ ಹೊಸ ಸಾಮಾಜಿಕ ಸ್ವರೂಪಗಳ, ಹೊಸ ಸಿದ್ಧಾಂತಗಳ ಆವಿಷ್ಕಾರ ಮಾಡುವುದನ್ನು ತಮ್ಮ ಮುಖ್ಯ ಗುರಿಯನ್ನಾಗಿ ಇಟ್ಟುಕೊಂಡರು” ಎಂಬ ಬಸವರಾಜ ಕಲ್ಗುಡಿ ಅವರ ತರ್ಕ ಸಮಂಜಸವಾಗಿದೆ.

ವಚನಕಾರರು ಕ್ರಿಯಾಶೀಲರಾಗಿ ಸಾಮಾಜಿಕ ಧಾರ್ಮಿಕ ನೆಲೆಗಳೆರಡರಲ್ಲೂ ಹೊಸ ರಚನೆಯನ್ನು ರೂಪಿಸಿದ್ದು ಈ ಚಳುವಳಿಯ ಧನಾತ್ಮಕ ಅಂಶ. “ವಚನ ಚಳುವಳಿಯ ಪ್ರಮುಖ ಉದ್ದೇಶವೇ ಕರ್ನಾಟಕ ಸಂಸ್ಕೃತಿಯಲ್ಲಿ ಅಡಕವಾಗಿದ್ದ ಸಾಂಪ್ರದಾಯಿಕ ನೆಲೆಗಳ ಸ್ಪಷ್ಟ ವಿರೋಧವಾಗಿದೆ. ಭಕ್ತಿ ಪಂಥದ ಚಳುವಳಿಯಲ್ಲಿ ತಮಿಳುನಾಡಿನ ಶೈವ ವೈಷ್ಣವ ಸ್ಫೋಟದ ಅನಂತರ, ಮೊತ್ತಮೊದಲ ಪುನರುತ್ಥಾನ

ಕರ್ನಾಟಕದ ವಚನಕಾರರಿಂದಲೇ ಆಗಿರುವುದು ಗಮನಿಸಬೇಕಾದ ಸಂಗತಿಯಾಗಿದೆ"(ಅದೇ ಪುಟ ೨೫೧). ಶಿವಶರಣರ ಆಂದೋಲನ ಉದಾರ ನೆಲೆಯ ಸಮಷ್ಟಿ ಪರವಾದ, ಸಮುದಾಯ ಪರವಾದ ಧೋರಣೆಗಳನ್ನು ಸಂತತವಾಗಿ ನಡೆಸಿಕೊಂಡು ಸಾಗಿದ್ದು ಭಾರತದ ಭಕ್ತಿಪಂಥದ ಇತಿಹಾಸದಲ್ಲಿ ಒಂದು ಮೈಲುಗಲ್ಲು. ಉತ್ತರ ಭಾರತದ 'ಭಕ್ತಿಪಂಥ'ಗಳು ವರ್ಣಭೇದ, ಜಾತಿಭೇದವನ್ನು ಖಂಡಿಸಿದರೂ ಅವು ಜನಸಾಮಾನ್ಯರ ಮೇಲೆ ಅಷ್ಟಾಗಿ ಪರಿಣಾಮ ಬೀರಲಿಲ್ಲ. ಅಲ್ಲಿ ನೀತಿಬೋಧೆ, ಸಂಕುಚಿತ ನಿಲುವು ರಾರಾಜಿಸಿತು. ಆಳುವ ವರ್ಗದ ದರ್ಪ, ಜಮೀನ್ದಾರಿ ಪದ್ಧತಿಯ ಹಿಡಿತ, ಪುರೋಹಿತಶಾಹಿಗಳ ದಬ್ಬಾಳಿಕೆಯ ಮುಂದೆ ಸುಧಾರಣಾವಾದಿಗಳು ಬರೇ ಕಂಠಶೋಷಣೆ ಮಾಡಿದಂತಾಯಿತು. ಹೀಗಾಗಿ ಅಲ್ಲಿ ಸಾಮಾಜಿಕ ಪರಿವರ್ತನೆಯ ಸೊಲ್ಲು ಕ್ಷೀಣವಾಯಿತು.

ಭಾರತೀಯ ಸುಧಾರಣಾವಾದಿ ಚಳುವಳಿ ಪರಂಪರೆಯಲ್ಲಿ ಕರ್ನಾಟಕದ ಶಿವಶರಣರದು ಅಮೋಘ ಸಾಧನೆ. ಶರಣರ ಸಾಧನೆ ಭಾರತೀಯ ಭಕ್ತಿ ಸಾಹಿತ್ಯ ಇತಿಹಾಸದಲ್ಲಿ ಒಂದು ಮಹಾಪರ್ವ. 'ಪ್ರಾಚೀನ ದ್ರಾವಿಡ ಭಾಷಾಸಾಹಿತ್ಯದಲ್ಲಿ 'ವಚನ ಚಳುವಳಿ' ಒಂಟಿ ತಾರೆಯಂತೆ ನಮಗೆ ಕಾಣುತ್ತದೆ' ಎಂಬ ರಹಮತ್ ತರೀಕೆರೆ ಅವರ ಮಾತಿನಲ್ಲಿ ಉತ್ಪ್ರೇಕ್ಷೆಯಿಲ್ಲ. ಹೀಗೆ ಬಹುರೂಪಿತನದಿಂದ ಬರೇ ದ್ರಾವಿಡ ಭಾಷಾ ಸಾಹಿತ್ಯವಷ್ಟೇ ಅಲ್ಲ, ಇಡೀ ಭಾರತೀಯ ಭಾಷಾ ಸಾಹಿತ್ಯದಲ್ಲಿ ವಚನವಾಙ್ಮಯ ವಿಶೇಷವಾದ ನೆಲೆಬೆಲೆಯನ್ನು ಗಳಿಸಿಕೊಂಡಿದೆ.

೧. ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಕ.ಸಾ.ಪ, ಬೆಂಗಳೂರು, ೧೯೮೮, ಪುಟ ೨೩೮.

* * *

# ಗ್ರಾಮದೇವತೆಗಳು

–ಡಾ। ಸಿದ್ಧಲಿಂಗಯ್ಯ

## ಗುಡಿ ಒಲ್ಲದ ದೇವತೆಗಳು

ನಾನು ಎಪ್ಪತ್ತರ ದಶಕದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಗ್ರಾಮಗಳಲ್ಲಿ ಸಂಚರಿಸುತ್ತಿದ್ದಾಗ ಕೆಂಚರಾಯ ಎಂಬ ಭೂತದ ಬಗ್ಗೆ ಮಾಹಿತಿ ದೊರೆಯಿತು. ಈ ಮಾಹಿತಿ ಗ್ರಾಮದೇವತೆಗಳ ಹೊಸ ಪ್ರವೃತ್ತಿಯೊಂದರ ಬಗ್ಗೆ ಬೆಳಕು ಚೆಲ್ಲಿತು. ಆ ಹೊಸ ಪ್ರವೃತ್ತಿ ದೇವಾಲಯಗಳ ನಿರಾಕರಣೆಯಾಗಿತ್ತು. ಕೆಂಚರಾಯ ಸೀಳುದಾರಿಯ ಬದಿಯಲ್ಲಿರುವ ಒಂದು ಗೇಣುದ್ದದ ಕಲ್ಲು, ತಿಳಿದವರು ಹೇಳದಿದ್ದರೆ ಅದು ದೈವವೆಂದು ಗೊತ್ತಾಗುವುದಿಲ್ಲ. ಆದರೆ ಅದರ ಮಹಿಮೆ ಅಪಾರ, ಕೆಂಚರಾಯನ ಬಗ್ಗೆ ಜನಗಳಿಗೆ ಭಕ್ತಿ–ವಿಶ್ವಾಸಗಳು ಹೆಚ್ಚಾಗುತ್ತಿದ್ದಂತೆ ಅವರು ಈ ಬಯಲು ದೇವರಿಗೆ ದೇವಾಲಯವೊಂದನ್ನು ಕಟ್ಟುವ ಸಂಕಲ್ಪ ಮಾಡಿದರು. ಗ್ರಾಮದಲ್ಲೆಲ್ಲಾ ಚಂದಾ ಎತ್ತಿ ತಳಪಾಯ ತೆಗೆಯಲು ಸಿದ್ಧರಾದರು ಇದಕ್ಕಾಗಿ ಪೂಜೆ ಏರ್ಪಡಿಸಿದರು. ಶಂಕುಸ್ಥಾಪನೆಯ ಕಾರ್ಯ ನಡೆಯುತ್ತಿದ್ದಾಗ ಪೂಜಾರಿಯ ಮೇಲೆ ದೇವರು ಮೈದುಂಬಿತು. ಭಕ್ತರು ಆಶ್ಚರ್ಯ, ಸಂತೋಷಗಳಿಂದ ದೈವದ ಮಾತಿಗೆ ಕಿವಿಗೊಟ್ಟು ನಿಂತರು. ದೇವರು ಭಕ್ತರನ್ನು ಕುರಿತು "ನಿಮಗೆಲ್ಲರಿಗೂ ಮನೆ ಇದೇ" ಎಂದಿತು. ಗುಂಪಿನಲ್ಲಿದ್ದ ಒಬ್ಬ ಭಕ್ತ "ಇಲ್ಲ" ಎಂದನು. ದೇವರು "ಹಾಗಾದರೆ ನನಗೆ ಗುಡಿ ಬೇಡ" ಎಂದಿತು. ಭಕ್ತರು ಪರಿಪರಿಯಾಗಿ ಕೇಳಿಕೊಂಡರೂ ಕೆಂಚರಾಯ ಒಪ್ಪಲಿಲ್ಲ. ಭಕ್ತರು ಅಸಹಾಯಕರಾದರು. ದೈವಗುಡಿಯನ್ನು ನಿರಾಕರಿಸಿದ್ದೇಕೆ? ಈ ಪ್ರಶ್ನೆಗೆ ಉತ್ತರ ಸರಳವಲ್ಲ. ವಚನಕಾರರು ದೇವಾಲಯ ಕಲ್ಪನೆಯನ್ನು ನಿರಾಕರಿಸಿದ್ದರು. ಜನಪದರು ದೇವಾಲಯದ ಪರಿಕಲ್ಪನೆಯನ್ನು ನಿರಾಕರಿಸಿರುವುದು ಆ ಸಂಸ್ಕೃತಿಯ ವೈಶಿಷ್ಟ್ಯ. ದೇವರು ಮೈದುಂಬಿದ ಪೂಜಾರಿಯ ಸುಪ್ತಪ್ರಜ್ಞೆ ಅಂದು

ಮಾತನಾಡಿರಬೇಕು. ಎಲ್ಲರಿಗೂ ವಾಸಕ್ಕೆ ಮನೆಯಿರಬೇಕು, ತಿನ್ನಲು ಅನ್ನವಿರಬೇಕು ಎಂಬುದು ಎಲ್ಲರ ಸುಪ್ತಪ್ರಜ್ಞೆಯ ಹಂಬಲ. ಉಳ್ಳವರು ಧಾರ್ಮಿಕರಾಗಿದ್ದರೆ, ನೈತಿಕ ಪ್ರಜ್ಞೆ ಉಳ್ಳವರಾಗಿದ್ದರೆ, ಮನೆ ಇಲ್ಲದವರ, ಅನ್ನಕ್ಕೆ ಪರದಾಡುವವರ ಬಗ್ಗೆ ಮರುಗುತ್ತಾರೆ. ಈ ಸವಲತ್ತು ತಮಗೆ ಇರುವುದರ ಬಗ್ಗೆ ಅಪರಾಧಿಭಾವ ತಾಳುತ್ತಾರೆ. ಯಾರ ಅಂತರಂಗ ಜಾಗೃತವಾಗುತ್ತದೋ ಅವರಲ್ಲಿ ಈ ಭಾವನೆ ಆಗಾಗ ಮೂಡಬಹುದು. ಜನಮನದ ಅಂತರಾಳದ ಈ ಭಾವನೆಗೆ ಕೆಂಚರಾಯ ಮೈದುಂಬಿದ ವ್ಯಕ್ತಿ ಅಂದು ಅಭಿವ್ಯಕ್ತಿ ನೀಡಿದನು. ಜನರೂ ಆತನ ಮಾತನ್ನು ಅನುಮೋದಿಸಿದರು.

ಬೆಂಗಳೂರು ಜಿಲ್ಲೆಯ ಅನೇಕ ಗ್ರಾಮದೇವತೆಗಳು ತಮಗೆ ಗುಡಿ ಕಟ್ಟುವ ಸಂದರ್ಭದಲ್ಲಿ ಪೂಜಾರಿಯ ಮೈದುಂಬಿ ಈ ಮಾತನ್ನು ಹೇಳಿರುವುದುಂಟು. ಕೆಂಗೇರಿಯ ಬಳಿಯ ಒಳಗೆರೆ ಹಳ್ಳಿಯಲ್ಲಿರುವ ಬಿಸಿಲು ಮಾರಮ್ಮನಿಗೆ ಗುಡಿ ಕಟ್ಟುವ ಪ್ರಯತ್ನವನ್ನು ಭಕ್ತರು ಮಾಡಿದಾಗ ದೇವತೆ ವ್ಯಕ್ತಿಯೊಬ್ಬನ ಮೈದುಂಬಿ ಪ್ರತಿಭಟಿಸಿತು. ತನ್ನ ವಿಗ್ರಹದ ಮೇಲೆ ಮಕ್ಕಳು ಕುಳಿತು ಆಟ ಆಡಿದರೂ ಬೇಸರವಿಲ್ಲವೆಂದು ದೇವತೆ ಹೇಳಿತು. ಅಂದಿನಿಂದ ಈ ದೇವತೆಗೆ ಆಡು ಮಾರಮ್ಮನೆಂದು ಹೆಸರಾಯಿತು. ಇದೇ ಜಿಲ್ಲೆಯ ಮಂಗನ ಹಳ್ಳಿ, ದೊಡ್ಡಬಸ್ತಿಯ ಗ್ರಾಮದೇವತೆಗಳು ಗುಡಿ ಕಟ್ಟುವುದನ್ನು ಪ್ರತಿಭಟಿಸಿದವು. ಒತ್ತಾಯ ಪೂರ್ವಕವಾಗಿ ಗುಡಿ ಕಟ್ಟಿದಾಗ ದೇವತೆ ದೇವಾಲಯಕ್ಕೆ ಬಾಗಿಲು ಹಾಕುವುದನ್ನು ತಡೆಯಿತು. ಕಾರಣ ಕೇಳಿದಾಗ "ನಾನು ಪದೇ ಪದೇ ಹೊರಕ್ಕೆ ಹೋಗಿ ಒಳಕ್ಕೆ ಬರುವುದರಿಂದ ಬಾಗಿಲು ಅಡ್ಡಿಯಾಗುತ್ತದೆ" ಎಂದು ಹೇಳಿ ಬಾಗಿಲನ್ನು ಬೇಡವೆಂದಿತು.

ಮಂಡ್ಯ ಜಿಲ್ಲೆಯ ಮದ್ದೂರಿನ ಮದ್ದೂರಮ್ಮನಿಗೆ ಭಕ್ತರು ದೇವಾಲಯ ನಿರ್ಮಿಸಲು ಪ್ರಯತ್ನಿಸಿದಾಗ ದೇವತೆ ಮೈದುಂಬಿ ಪ್ರತಿರೋಧ ವ್ಯಕ್ತಪಡಿಸಿತು. ಭಕ್ತರು ಕಾರಣ ಕೇಳಿದಾಗ "ನಾನು ಬಿಸಿಲಲ್ಲಿ ಒಣಗಬೇಕು, ಮಳೆಯಲ್ಲಿ ನೆನೆಯಬೇಕು, ಸುತ್ತೇಳು ದೇಶದ ನನ್ನ ಭಕ್ತರನ್ನು ಸದಾ ನೋಡಬೇಕು" ಎಂದು ಹೇಳಿತು. ಆದ್ದರಿಂದ ದೇವತೆಗೆ

ಗೋಡೆ ಮಾತ್ರ ಇದ್ದು ಮೇಲ್ಛಾವಣಿ ಇಲ್ಲ. ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಮಾರಮ್ಮ ಮತ್ತು ಊರಮ್ಮ ದೇವತೆಗಳಿಗೆ ಗುಡಿ ಕಟ್ಟಿಸುವ ಯತ್ನ ನಡೆದಾಗ ಇದೇ ಬಗೆಯ ಪ್ರತಿರೋಧ ಬಂದಿತು. ಕೋಲಾರ ಜಿಲ್ಲೆಯ ಹೊಲ್ಲಂಬಳ್ಳಿಯಲ್ಲಿ ಗ್ರಾಮದೇವತೆಗೆ ದೇವಾಲಯ ಕಟ್ಟುವ ಯತ್ನ ನಡೆದಾಗ ದೇವತೆ ಪೂಜಾರಿಯ ಮೈದುಂಬಿ ನಿರಾಕರಿಸಿತು. ಬೇರೆಯವರಿಗೆ ಇಲ್ಲದ ಸೌಲಭ್ಯ ನನಗೇಕೆ ಎನ್ನುವ ತಾತ್ವಿಕತೆ ಇಲ್ಲಿ ಕೆಲಸ ಮಾಡಿದೆ. ಹಾಗೆಯೇ ಸಂಕಷ್ಟವನ್ನು ಅನುಭವಿಸಬೇಕೆಂಬ ಸುಪ್ತಪ್ರಜ್ಞೆಯ ಹಂಬಲವೂ ಇಲ್ಲಿ ಕೆಲಸ ಮಾಡಿರಬೇಕು. ಜನಪದರ ಕಷ್ಟ ಕಾರ್ಪಣ್ಯದ ಬದುಕನ್ನು ನಿತ್ಯವೂ ಗಮನಿಸುವ ಗ್ರಾಮದೇವತೆಗಳು ತಾವೂ ಸದಾ ಬಿಸಿಲಿನಲ್ಲಿ ಒಣಗಬೇಕು, ಚಳಿಯಲ್ಲಿ ನಡುಗಬೇಕು, ಮಳೆಯಲ್ಲಿ ನೆನೆಯಬೇಕು ಎಂಬ ನಿಲುವಿಗೆ ಅಂಟಿಕೊಂಡಿವೆ. ಆದ್ದರಿಂದಲೇ ಗ್ರಾಮದೇವತೆಗಳು ಯಾತನೆಗೆ ಮೈಯ್ಯೊಡ್ಡಿದ ದೇವತೆಗಳು.

## ಗ್ರಾಮದೇವತೆಗಳ ಜನೋಪಕಾರ

ಮನುಷ್ಯರು ಮತ್ತು ಪ್ರಾಣಿಪಕ್ಷಿಗಳ, ಮಳೆ ಬೆಳೆಯ ಸಂರಕ್ಷಣೆ ಗ್ರಾಮದೇವತೆಗಳ ಹೊಣೆ ಎಂಬ ಭಾವನೆ ಜನಪದರಲ್ಲಿ ದಟ್ಟವಾಗಿದೆ. ಆದರೆ ಈ ದೇವತೆಗಳು ಕೆರೆ, ರಸ್ತೆಗಳ ನಿರ್ಮಾಣ ಮಾಡುವಲ್ಲಿ ತಮ್ಮ ಪ್ರಭಾವ ಬೀರಿರುವ ವಿಶೇಷ ಘಟನೆಗಳು ಜನಪದರ ನಂಬಿಕೆಯ ಭಾಗವಾಗಿವೆ. ಮದ್ದೂರಮ್ಮ ಮುತ್ತೇರಿಕೆರೆಯನ್ನು ಕಟ್ಟಿಸಿದ ಘಟನೆ ವಿಶಿಷ್ಟವಾದುದು. ಮದ್ದೂರಿನ ಜನವೆಲ್ಲ ಮುತ್ತೇರಿ ಎಂಬ ಜಾಗದಲ್ಲಿ ಕೆರೆ ಕಟ್ಟಲು ಪ್ರಯತ್ನಪಟ್ಟು ವಿಫಲರಾದರು. ಎಷ್ಟೇ ಮಣ್ಣು ಸುರಿದರೂ ಏರಿ ನಿಲ್ಲುತ್ತಿರಲಿಲ್ಲ. ಸುರಿದ ಮಣ್ಣೆಲ್ಲ ಕೊಚ್ಚಿ ಹೋಗುತ್ತಿತ್ತು. ಇದನ್ನು ಅರಿತ ಮದ್ದೂರಮ್ಮ ಪೂಜಾರಿಯ ಮೈದುಂಬಿ ಬಂದಳು. ಕೆರೆ ಕಟ್ಟಲು ಬೇರೆ ಸ್ಥಳವನ್ನು ಸೂಚಿಸಿದಳು. ತನ್ನ ಅಣ್ಣನಾದ ತಿರುಪತಿ ತಿಮ್ಮಪ್ಪನನ್ನು ಕೂಗಿ ಕರೆದಳು. ಜನಕ್ಕೆ ನೆರವಾಗುವಂತೆ ಅವನಲ್ಲಿ ವಿನಂತಿಸಿಕೊಂಡಳು. ಅಣ್ಣ ತಂಗಿ ಇಬ್ಬರೂ ಸೇರಿ ರಾತ್ರೋರಾತ್ರಿ ಹುಣಸೆ ಮರದ ಸಾಲನ್ನು ಸೃಷ್ಟಿಸಿದರು. ಜನ ಮಾರನೇ ದಿನ ಅಲ್ಲಿ ಮಣ್ಣು ಹಾಕಿದಾಗ ಏರಿ

ನಿಂತು ಕೆರೆ ನಿರ್ಮಾಣವಾಯಿತು. ಹಾಗೆಯೇ ಸಾಕಮ್ಮ ಎಂಬ ದೇವತೆ ರಸ್ತೆ ನಿರ್ಮಾಣ ಮಾಡಿಸಿದ ಘಟನೆ ಕುತೂಹಲಕರವಾಗಿದೆ. ದೇವತೆಯ ಗುಡಿಗೆ ಬೇರೊಬ್ಬರ ಹೊಲದ ಮೂಲಕ ಭಕ್ತರು ಹೋಗಬೇಕಾಗಿತ್ತು. ಇದರಿಂದ ಬೆಳೆ ಹಾಳಾಗುವುದೆಂದು ಹೊಲದ ಯಜಮಾನ ಹೊಲದ ಸುತ್ತ ಬೇಲಿ ಹಾಕಿಸಿದನು. ಭಕ್ತರಿಗಾಗಿ ಎರಡು ಕಲ್ಲುಕಂಬ ನೆಟ್ಟು ನಡುವೆ ಜಾಗಬಿಟ್ಟನು. ಇದರಿಂದ ಭಕ್ತರಿಗೆ ಬಹಳ ತೊಂದರೆಯಾಯಿತು. ದೇವತೆ ಒಮ್ಮೆ ಸಂಚಾರ ಹೋಗಿ ಹಿಂದಿರುಗುವಾಗ ಆಕೆಯ ಸೀರೆಯೇ ಕಲ್ಲುಕಂಬಕ್ಕೆ ಸಿಕ್ಕಿ ತೊಂದರೆಯಾಯಿತು. ಇದರಿಂದ ಸಿಟ್ಟಾದ ದೇವತೆ ಜಮೀನು ಮಾಲೀಕನ ಜೀತಗಾರನ ಕನಸಿನಲ್ಲಿ ಕಾಣಿಸಿಕೊಂಡು "ನಮ್ಮ ಯಜಮಾನ ನನ್ನ ದೇವಸ್ಥಾನಕ್ಕೆ ಬರುವ ರಸ್ತೆಯನ್ನು ಅಗಲ ಮಾಡಿಸದಿದ್ದರೆ ನನ್ನ ಶಕ್ತಿ ತೋರಿಸುತ್ತೇನೆ" ಎಂದಳು. ಈ ವಿಷಯ ತಿಳಿದು ಹೆದರಿದ ಜಮೀನಿನ ಯಜಮಾನ ಮಾರನೆಯ ದಿನವೇ ರಸ್ತೆಯನ್ನು ಅಗಲ ಮಾಡಿಸಿದನು.

ಕರ್ನಾಟಕದ ಹಲವು ಭಾಗಗಲ್ಲಿ ಗ್ರಾಮದೇವತೆಗಳು ಬಡ ಭಕ್ತರ ಮದುವೆಗಳಿಗೆ ನೆರವಾಗುತ್ತಿದ್ದ ಸಂದರ್ಭಗಳೂ ಇದ್ದವು. ಮದುವೆ ಆಗುತ್ತಿದ್ದ ಬಡ ಹೆಣ್ಣುಮಕ್ಕಳಿಗೆ ತೊಡಲು ಒಳ್ಳೆಯ ಆಭರಣಗಳು ಇರುತ್ತಿರಲಿಲ್ಲ. ತಮ್ಮ ದೇವಸ್ಥಾನಗಳಲ್ಲಿ ಭಕ್ತರೇ ಮಾಡಿಕೊಟ್ಟಿದ್ದ ಆಭರಣಗಳಿದ್ದುದರಿಂದ ಅವುಗಳು ಭಕ್ತರಿಗೆ ಉಪಯೋಗವಾಗಲೆಂದು ದೇವತೆಗಳ ಆಸೆ, ಆದ್ದರಿಂದ ಈ ದೇವತೆಗಳು ಪೂಜಾರಿಗಳ ಮೈದುಂಬಿ ಮದುವೆ ಕಾರ್ಯಕ್ಕೆ ದೇವಾಲಯದ ಆಭರಣಗಳನ್ನು ಬಳಿಸಿಕೊಳ್ಳ ಬಹುದೆಂದು ಸೂಚಿಸುತ್ತಿದ್ದವು. ಆಭರಣವನ್ನು ತೆಗೆದುಕೊಂಡು ಹೋದ ಭಕ್ತರು ಮದುವೆಯಾದ ನಂತರ ಅಷ್ಟೇ ಮುತುವರ್ಜಿಯಿಂದ ಹಿಂದಿರುಗಿಸುತ್ತಿದ್ದರು. ಆದರೆ ಮುಗ್ಧರಾಗಿದ್ದ ಗ್ರಾಮೀಣ ಜನರಲ್ಲಿ ವಂಚನೆಯ ಪ್ರವೃತ್ತಿ ಉಂಟಾಗುತ್ತಿದ್ದಂತೆ ತೆಗೆದುಕೊಂಡು ಹೋದ ದೇವತೆಯ ಆಭರಣಗಳನ್ನು ಹಿಂದಿರುಗಿಸದೆ ಹಾಗೇ ಇಟ್ಟುಕೊಳ್ಳುವುದು ಪ್ರಾರಂಭವಾಯಿತು. ಕೊನೆಗೆ ನೆರವಿನ ಸಂಪ್ರದಾಯವೂ ನಿಂತು ಹೋಯಿತು

## ಗ್ರಾಮದೇವತೆಗಳು ಮತ್ತು ನ್ಯಾಯಾಂಗ ವ್ಯವಸ್ಥೆ

ಗ್ರಾಮೀಣ ಜನರ ಜಗಳಗಳು ಮತ್ತು ವೈರಭಾವನೆಯನ್ನು ನಿವಾರಿಸುವಲ್ಲಿ ಗ್ರಾಮ ದೇವತೆಗಳು ಮಹತ್ತರ ಪಾತ್ರ ವಹಿಸಿವೆ. ಈ ದೇವತೆಗಳಲ್ಲಿ ತುಮಕೂರು ಜಿಲ್ಲೆಯ ಜಲ್ದಗೆರೆ ಅಮ್ಮ ಪ್ರಮುಖಳು. ಗ್ರಾಮದಲ್ಲಿ ಅನ್ಯಾಯಕ್ಕೆ ಒಳಗಾದ ವ್ಯಕ್ತಿ ನೇರವಾಗಿ ಒಂದು ಕೋಳಿಯೊಂದಿಗೆ ಜಲ್ದಗೆರೆ ಅಮ್ಮನ ದೇವಸ್ಥಾನಕ್ಕೆ ಹೋಗುತ್ತಾನೆ. ಪೂಜೆ ಮಾಡಿಸಿ, ಕೋಳಿಕುಯ್ದು ಅದರ ರಕ್ತವನ್ನು ಎರಡೂ ಕೈಗಳಲ್ಲಿ ಚೆನ್ನಾಗಿ ಅದ್ದಿಕೊಂಡು ತನ್ನ ವೈರಿಯನ್ನು ನೆನಪು ಮಾಡಿಕೊಂಡು ರಕ್ತದ ಕೈಗಳಿಂದ ದೇವಾಲಯದ ಗೋಡೆಯ ಮೇಲೆ ಅಚ್ಚು ಒತ್ತುತ್ತಾನೆ. ಇದನ್ನು ಹಸ್ತಿ ಮಾಡುವುದು ಎನ್ನುತ್ತಾರೆ. ಹೀಗೆ ಮಾಡಿ ಅವನು ಊರಿಗೆ ಮರಳಿದ ಮೇಲೆ ಅವರ ವೈರಿಗೆ ವಾಂತಿಭೇದಿ, ಜ್ವರ, ಮೈನಡುಕ ಪ್ರಾರಂಭವಾಗುತ್ತದೆ. ಕೆಲವೇ ದಿನಗಳಲ್ಲಿ ನಿರ್ದಿಷ್ಟ ವಾರದ ದಿನ ಅವನು ಜಲ್ದಗೆರೆ ಅಮ್ಮನ ಗುಡಿಗೆ ಹೋಗಿ ಪೂಜೆ ಮಾಡಿಸುತ್ತಾರೆ. ಹೀಗೆ ವೈರ ಮುಕ್ತವಾಗುತ್ತದೆ. ಈ ಪದ್ಧತಿ ಗ್ರಾಮೀಣ ಜಗಳಗಳ ಪರಿಹಾರದಲ್ಲಿ ಮಹತ್ವದ ಪಾತ್ರ ವಹಿಸಿದೆ. ಜಲ್ದಗೆರೆ ಅಮ್ಮನಿಗೆ ಪೂಜೆ ಮಾಡಿಸಿ ಬಂದ ಮೊದಲ ವ್ಯಕ್ತಿ ತಾನು ರಕ್ತ ಕೈಒತ್ತಿ ಬಂದಿರುವುದನ್ನು ಊರಿನಲ್ಲಿ ಹಬ್ಬಿಸುತ್ತಿದ್ದಂತೆ ಆತನ ವೈರಿಯ ಮೇಲೆ ಮಾನಸಿಕ ಪರಿಣಾಮ ಉಂಟಾಗಿ ಅವನು ನಾನಾ ಕಾಯಿಲೆಗಳಿಗೆ ತುತ್ತಾಗಿ ಕೊನೆಗೆ ಅವನೂ ಸಹ ದೇವಿಯ ಮುಂದೆ ಹಾಜರಾಗುವುದರೊಂದಿಗೆ ಈ ಪ್ರಹಸನ ಮುಗಿಯುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ನೀಲಕಂಠನಹಳ್ಳಿಯಲ್ಲಿ ಹಿರಿಯ ಪೂಜಾರಿಯು ಹೊಸ ಪೂಜಾರಿ, ಪೂಜಾರಿಣಿಗೆ ಮಾಡುವ ಉಪದೇಶ ಸ್ವಾರಸ್ಯಕರವಾಗಿದೆ. ಆತನ ಉಪದೇಶದಲ್ಲಿ "ಒಂದು ಹಸು ಬೇರೆಯವರ ಹೊಲದಲ್ಲಿ ಮೇಯುತ್ತಿದ್ದರೆ ಅದನ್ನು ಹೊಲದ ಯಜಮಾನನಿಗೆ ಹೇಳಬಾರದು. ಒಂದು ಕರು ಕಿತ್ತುಕೊಂಡು ತಾಯಿಯ ಹಾಲನ್ನು ಕುಡಿಯುತ್ತಿದ್ದರೆ ಅದನ್ನು ಯಾರಿಗೂ ಹೇಳಬಾರದು" ಎಂಬ ಸಂಗತಿಗಳೂ ಸೇರಿಕೊಂಡಿವೆ. ಒಬ್ಬನ ಹಸು

ಇನ್ನೊಬ್ಬನ ಹೊಲದಲ್ಲಿ ಮೇಯುವುದು ಊರಿನ ಜಗಳಗಳ ಮೂಲಕಾರಣಗಳಲ್ಲಿ ಒಂದು. ಮೂಲಕಾರಣವನ್ನು ಮುಚ್ಚಿಡುವ ರೀತಿ ಮುಂದೆ ಸಂಭವಿಸಬಹುದಾದ ಜಗಳವನ್ನು ತಡೆಯುವ ಉಪಾಯವಾಗಿದೆ.

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಸಿಂಗಮ್ಮ ಎಂಬ ದೇವತೆಗೆ ಸಂಬಂಧಿಸಿದ ಐತಿಹ್ಯ ಗಮನಿಸಬೇಕಾದುದು. ದೇವತೆ ನೆಲಸಿರುವ ತೋಪಿನ ಮೂಲಕ ಪೊಲೀಸನೊಬ್ಬ ಹಾದು ಹೋಗುತ್ತಿದ್ದ. ಅವನ ಕೈಯಲ್ಲಿ ಒಂದು ಮೋಟು ಬೀಡಿಯಿತ್ತು. ಅವನಿಗೆ ದೇವಿಯ ಮುಂದೆ ಉರಿಯುತ್ತಿರುವ ದೀಪದಿಂದ ಬೀಡಿ ಹಚ್ಚಿಕೊಳ್ಳುವ ಮನಸ್ಸಾಯಿತು. ಬೀಡಿ ಹಚ್ಚಿಕೊಳ್ಳಲು ಹೋದ. ಇದನ್ನು ಕಂಡ ರೈತನೊಬ್ಬ ಹಾಗೆ ಮಾಡಬಾರದೆಂದು ಪೊಲೀಸರನ್ನು ಎಚ್ಚರಿಸಿದ. ಕೆರಳಿದ ಪೊಲೀಸ್ ದೇವತೆಯನ್ನು ಬಯ್ಯುತ್ತಾ ಬೀಡಿ ಹಚ್ಚಿಕೊಂಡ, ಇದರಿಂದ ಕೋಪಗೊಂಡ ದೇವತೆ ಆತನನ್ನು ಕಲ್ಲಾಗಿಸಿದಳು. ತೋಪಿನಲ್ಲಿ ನಿಂತಿರುವ ಮನುಷ್ಯ ವಿಗ್ರಹವನ್ನು ಜನ "ಪೊಲೀಸ್‌ಕಲ್ಲು" ಎಂದು ಕರೆಯುತ್ತಾರೆ. ದೈವವು ಮಾನವ ನಿರ್ಮಿತ ವ್ಯವಸ್ಥೆಯನ್ನು ಮೀರಿದ್ದು ಎಂಬ ಆಶಯ ಈ ಕಥೆಯಲ್ಲಿದೆ. ದೇವತೆಯನ್ನು ಉಪೇಕ್ಷೆ ಮಾಡುವವರಿಗೆ ಕಾದಿರುವ ಶಿಕ್ಷೆಯನ್ನು ಈ ಐತಿಹ್ಯ ಸೂಚಿಸುತ್ತದೆ.

ದೊಡ್ಡಬಳ್ಳಾಪುರದ ಸಾವಿರಕಣ್ಣಮ್ಮನ ದೇವಸ್ಥಾನದಲ್ಲಿ ರಾತ್ರಿ ಹೊತ್ತು ಏನನ್ನೋ ಕದಿಯಲು ಹೋದ ವ್ಯಕ್ತಿ ಅಲ್ಲಿಯೇ ಮೂರ್ಛೆ ಬಿದ್ದು ಹೋಗಿ ನಂತರ ಎಚ್ಚೆತ್ತುಕೊಂಡು ಮರಳಿದನು. ಈ ವಿಚಾರವನ್ನು ಸಂಬಂಧಿಸಿದ ವ್ಯಕ್ತಿಯೇ ಹೇಳಿರುವುದರಿಂದ ಇದನ್ನು ನಂಬಬಹುದು. ಆತನಗೆ ಕದಿಯಲು ಹೋದ ಸಮಯದಲ್ಲಿ ಉಂಟಾದ ಮಾನಸಿಕ ಪರಿಣಾಮವೇ ಈ ಬದಲಾವಣೆಗೆ ಕಾರಣ ಎಂದು ತರ್ಕಿಸಬಹುದು.

## ಗ್ರಾಮದೇವತೆ ಮತ್ತು ವೃಕ್ಷಗಳು

ಗ್ರಾಮದೇವತೆಯ ಸಂಸ್ಕೃತಿಯಲ್ಲಿ ವೃಕ್ಷಗಳಿಗೆ ಮಹತ್ವದ ಪಾತ್ರವಿದೆ. ಅನೇಕ ದೇವತೆಗಳು ತಮ್ಮನ್ನು ವೃಕ್ಷಗಳ ಜೊತೆ ಗುರುತಿಸಿಕೊಂಡಿವೆ.

ಕೆಲವು ದೇವತೆಗಳು ವೃಕ್ಷಗಳಲ್ಲೇ ಒಡಮೂಡಿರುವುದರಿಂದ ಭಕ್ತರು ಆ ವೃಕ್ಷಗಳನ್ನು ಪೂಜಿಸುತ್ತಾರೆ. ಅವುಗಳನ್ನು ಕಡಿಯುವುದಿಲ್ಲ. ಒಲೆಗೆ ಸೌದೆಯಾಗಿ ಬಳಸುವುದಿಲ್ಲ. ಆ ವೃಕ್ಷಕ್ಕೂ ದೇವತೆಗೂ ಯಾವುದೇ ವ್ಯತ್ಯಾಸವಿಲ್ಲವೆಂದು ನಂಬುತ್ತಾರೆ. ಬೆಂಗಳೂರು ಜಿಲ್ಲೆಯ ಆನೇಕಲ್ ತಾಲ್ಲುಕಿನ ತಿಮ್ಮಸಂದ್ರ ಗ್ರಾಮದಲ್ಲಿ ಗೌಡನ ಮನೆಯ ಪಕ್ಕದಲ್ಲಿ ಒಂದು ಬೇವಿನ ಮರ ಇತ್ತು. ಆ ಮರದಲ್ಲಿ ಲಕ್ಷ್ಮಿದೇವಿ ನೆಲೆಸಿರುವುದು ಆತನಗೆ ಗೊತ್ತಿರಲಿಲ್ಲ. ಆ ಮರವನ್ನು ಕಡಿಸಿ ಮನೆಯ ಉಪಯೋಗಕ್ಕೆ ಬಳಸಿಕೊಂಡ. ಈ ಕಾರಣದಿಂದ ಅವನಿಗೆ ಸಾವುಂಟಾಯಿತು ಎಂದು ಜನ ನಂಬಿದ್ದಾರೆ.

ಗುಲ್ಬರ್ಗಾ ಜಿಲ್ಲೆಯ ಚಿಂಚನಸೂರು ಮಹಾಪೂರತಾಯಿ ಬನ್ನಿ ಮರದಲ್ಲಿ ನೆಲಸಿದ್ದಾಳೆಂದು ಭಕ್ತರ ನಂಬಿಕೆ. ದೇವತೆಯ ಭಕ್ತರು ಬನ್ನಿಮರಕ್ಕೆ ಸೀರೆ ಉಡಿಸಿ ಪೂಜೆ ಮಾಡುತ್ತಾರೆ. ಕಬ್ಬಾಳಮ್ಮ ಹೊನ್ನೇ ಮರದಲ್ಲಿ ಒಡಮೂಡಿದ್ದಾಳೆಂದು ಆಕೆಯ ಭಕ್ತರು ನಂಬಿರುವುದರಿಂದ ಈ ಮರವನ್ನು ಅವರು ಪೂಜಿಸುತ್ತಾರೆ. ದೊಡ್ಡಬಳ್ಳಾಪುರ ತಾಲ್ಲೂಕಿನ ಕಾವೇರಮ್ಮ ಮಾವಿನ ಮರದಲ್ಲಿ ಒಡಮೂಡಿರುವುದರಿಂದ ಈ ದೇವತೆಯ ಭಕ್ತರು ಮಾವಿನ ಮರವನ್ನು ಕಡಿಯುವುದಿಲ್ಲ. ಎಲೆಗಳನ್ನು ತೋರಣಕ್ಕೆ ಬಳಸುವಷ್ಟಕ್ಕೆ ಮಾತ್ರ ಸೀಮಿತವಾಗಿದ್ದಾರೆ. ಆಲದಮರದಮ್ಮ ಎಂಬ ದೇವತೆ ಆಲದ ಮರದಲ್ಲಿ ವಾಸವಾಗಿದೆ. ಆದ್ದರಿಂದ ಆಲದಮರ ಪೂಜ್ಯವಾದುದು. ಕೆಲವು ದೇವತೆಗಳು ಹೊಂಗೆ ಮರದಲ್ಲಿರುವುದರಿಂದ ಹೊಂಗೆ ಮರವನ್ನು ಕಡಿಯುವಂತಿಲ್ಲ. ಅನೇಕ ಗ್ರಾಮಗಳಲ್ಲಿ ಮೆರವಣಿಗೆಯ ದೇವತೆಗಳನ್ನು ಬೂರಗ, ಹತ್ತಿ, ಮತ್ತಿಮರಗಳಿಂದ ಮಾಡುತ್ತಾರೆ. ಆದ್ದರಿಂದ ಹತ್ತಿ, ಮತ್ತಿಗಳಿಗೂ ಪೂಜ್ಯಸ್ಥಾನವಿದೆ.

## ದೇವತೆಗಳು ಮತ್ತು ಶಿಕ್ಷೆ

ಶಿಷ್ಟ ಜನವರ್ಗದವರು ತಾವು ಮಾಡುವ ತಪ್ಪುಗಳಿಗೆ ದೈವ ಶಿಕ್ಷೆ ನೀಡುವುದೆಂದು ನಂಬುತ್ತಾರೆ. ಜನಪದರು ತಪ್ಪು ಮಾಡಿದ ದೈವಕ್ಕೆ ತಾವೇ ಶಿಕ್ಷೆ ನೀಡಲು ಮುಂದಾಗುತ್ತಾರೆ. ಕುಲದೇವತೆ ತಮ್ಮ

ಕೋರಿಕೆಯನ್ನು ಈಡೇರಿಸದಿದ್ದರೆ ಅವರು ಅದನ್ನು ಕೈಬಿಟ್ಟು ಇನ್ನೊಂದು ದೇವತೆಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅದನ್ನು ಮೊರೆಹೊಕ್ಕ ದೇವತೆ ಎನ್ನುವರು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಗಣಿರಂಗ ಎಂಬ ಭೂತಕ್ಕೆ ತಮ್ಮ ಕೋರಿಕೆಯನ್ನು ಈಡೇರಿಸಲಿಲ್ಲವೆಂದು ಭಕ್ತರು ಮೆಣಸಿನಕಾಯಿ ಘಾಟು ಹಾಕಿದ್ದರು. ಇದನ್ನು ನಾನಾ "ಅವತಾರಗಳು" ಕೃತಿಯಲ್ಲಿ ತಮಾಷೆಯಾಗಿ ಹೇಳಿದರೂ, ಈ ಸಂಗತಿಯನ್ನು ಗಂಭೀರವಾಗಿ ಯೋಚಿಸುವುದು ಸೂಕ್ತವಾದುದು, ಜನಪದರು ತಮ್ಮ ನೆಚ್ಚಿನ ದೈವಕ್ಕೆ ಏಕಾಏಕಿ ಶಿಕ್ಷೆ ವಿಧಿಸಲು ಹೋಗುವುದಿಲ್ಲ. ಅವರು ತಮ್ಮ ಕೆಲಸ ಮಾಡಿಕೊಡಲು ಕೆಲವು ತಿಂಗಳು ಅಥವಾ ದಿನಗಳ ಮಟ್ಟಿಗೆ ಅವಕಾಶ ನೀಡುವರು. ಅವಧಿ ಮೀರಿದ ನಂತರವೂ ದೇವತೆಕಾರ್ಯ ಪ್ರವೃತ್ತವಾಗದಿದ್ದರೆ ಅವರು ನಿರ್ಭಿಡೆಯಿಂದ ಶಿಕ್ಷೆ ವಿಧಿಸಲು ಮುಂದಾಗುವರು. ಕೆಲವು ಸಲ ತಮ್ಮ ತೀವ್ರವಾದ ಸಿಟ್ಟನ್ನು ಶಿಕ್ಷೆ ವಿಧಿಸುವುದರ ಮೂಲಕ ತೋಡಿಕೊಳ್ಳುವರು. ಸಗಣಿರಂಗನ ಸಂದರ್ಭದಲ್ಲಿ ಹೀಗೇ ಆಗಿದೆ. ದೇವರುಗಳ ಚಟುವಟಿಕೆಗಳು ತಮ್ಮ ಎನ್ನಿಸಿದಾಗಳು ಜನಪದರು ಹೀಗೆ ಶಿಕ್ಷೆ ವಿಧಿಸುತ್ತಾರೆ. ರಾಯಚೂರು ಜಿಲ್ಲೆಯಲ್ಲಿ ಉಗುಳುಮಾರಿ ಎಂಬ ದೇವತೆ ಇದೆ. ಈ ದೇವತೆಗೆ ಭಕ್ತರು ಉಗಿಯುವ ಆಚರಣೆ ಮಾಡುತ್ತಾರೆ. ಈ ದೇವತೆ ಮೊದಲು ಹುಲಿಗೆಮ್ಮನ ಭಕ್ತೆ. ದೇವತೆಗೆ ಏನನ್ನೋ ಕೊಡುವುದಾಗಿ ಹರಕೆ ಮಾಡಿಕೊಂಡಿದಳು. ಕಾರಣಾಂತರಗಳಿಂದ ಹರಕೆ ಒಪ್ಪಿಸಲಾಗಲಿಲ್ಲ. ದೇವತೆಯ ಶಾಪಕ್ಕೆ ತುತ್ತಾಗಿ ಕಲ್ಲಾದಳು. ಆ ಕಲ್ಲಿಗೆ ಭಕ್ತರು ಉಗಿಯುತ್ತಿರುವುದರಿಂದ ಉಗುಳುಮಾರಿ ಎಂದು ಹೆಸರಾಗಿದ್ದಾಳೆ.

ರಾಯಚೂರು ಪಟ್ಟಣದಿಂದ ಮೂರು ಕಿಲೋಮೀಟರ್ ದೂರದಲ್ಲಿರುವ ಯಲ್ಲಮ್ಮನದು ಇನ್ನೊಂದು ರೀತಿಯ ಕಥೆ. ಯಲ್ಲಮ್ಮನ ಗುಡಿಯ ದಾರಿಯಲ್ಲಿ ಬಳೆಗಾರನೊಬ್ಬ ಹೋಗುತ್ತಿದ್ದ. ದೇವತೆ ಆತನನ್ನು ಕರೆದು ತನಗೆ ಬಳೆ ತೊಡಿಸುವಂತೆ ಹೇಳಿದಳು. ಅವನು ಬಳೆ ತೊಡಿಸಿ ಹಣ ಕೇಳಿದ. ದೇವತೆ "ಹಣ ಕೊಡುವುದಿಲ್ಲ, ಹಿಂದೆತಿರುಗಿ ನೋಡದೆ ಹೊರಟುಹೋಗು" ಎಂದಳು. ಅವನು ಕುತೂಹಲಕ್ಕಾಗಿ ಹಿಂದಿರುಗಿ

ನೋಡಿಬಿಟ್ಟ. ಅವನಿಗೆ ಸಾವು ಸಂಭವಿಸಿತು. ಅವನು ಅಲ್ಲಿಯೇ ಸಮಾಧಿಯಾಗಿದಾನೆ. ಈಗ ಅಲ್ಲಿಗೆ ಬರುವವರೆಲ್ಲ ಅವನ ಸಮಾಧಿಗೆ ಐದ್ಮೈದು ಕಲ್ಲು ಬೀರುತ್ತಾರೆ. ಅಲ್ಲಿ ಕಲ್ಲಿನ ರಾಶಿಯೇ ಬೆಳೆದಿದೆ. ದೇವತೆಯನ್ನು ಹಣ ಕೇಳುವುದರ ಮೂಲಕ ಅಗೌರವದಿಂದ ಕಂಡದ್ದು ಬಳೆಗಾರನ ಮೊದಲ ತಪ್ಪು. ಕುತೂಹಲದಿಂದ ಹಿಂದಿರುಗಿ ನೋಡಿ ದೇವತೆಯ ಮಾತನ್ನು ಮೀರಿ ನಡೆದದ್ದು ಎರಡನೆಯ ತಪ್ಪು. ದೇವತೆಯ ಬಗ್ಗೆ ಭಯ–ಭಕ್ತಿಯನ್ನು ಹೊಂದಿರಬೇಕೆಂಬ ಆಶಯ ಈ ಕಥೆಯ ಹಿನ್ನೆಲೆಯಲ್ಲಿದೆ.

ಮದ್ದೂರು ತಾಲ್ಲೂಕಿನಲ್ಲಿ ಮಹದೇವಮ್ಮ ಎಂಬ ದೇವತೆ ಮೈದುಂಬಿ ಬಂದು ಊರಗೌಡನನ್ನು "ಗೌಡ ನಿನ್ನ ಸೊಸೆನ ಬಲಿಕೊಡು. ಇಲ್ಲ, ಊರನ್ನೇ ನುಂಗಿಹಾಕ್ತೀನಿ" ಎಂದಳು. ಮೊದಲು ಹೆದರಿದ ಗೌಡ ನಂತರ ಧೈರ್ಯ ತಂದುಕೊಂಡು ದೇವತೆಯನ್ನು ಎದುರಿಸುವ ನಿರ್ಧಾರಕ್ಕೆ ಬಂದ. ಊರಜನ ಗೌಡನ ಬೆಂಬಲಕ್ಕೆ ನಿಂತರು. ದೇವತೆ ಗುಡಿಯಿಂದ ಹೊರಕ್ಕೆ ಬಾರದಂತೆ ಬಾಗಿಲಿಗೆ ಕಲ್ಲುಕಂಬ ನೆಟ್ಟು ದೇವತೆಯ ಚಲನೆಯನ್ನು ನಿರ್ಬಂಧಿಸಿದರು. ಈಗ ಆ ದೇವತೆಯ ಗುಡಿಯ ಬಳಿ ಯಾರೂ ಸುಳಿಯುವಂತಿಲ್ಲ. ಪೂಜೆ ಮಾಡುವಂತಿಲ್ಲ. ಈ ಪ್ರತಿಭಟನೆ ವಿಶಿಷ್ಟವಾಗಿದೆ. ತಮಗೆ ಅಹಿತವಾದುದನ್ನು ಮಾಡಲು ದೇವತೆಯೇ ಸೂಚಿಸಿದರೂ ಜನಪದರು ಅದನ್ನು ಧಿಕ್ಕರಿಸುವ ಧೈರ್ಯವನ್ನು ಪ್ರಕಟಿಸುತ್ತಾರೆ ಎಂಬುದಕ್ಕೆ ಈ ಪ್ರಕರಣ ಸಾಕ್ಷಿಯಾಗಿದೆ. ಇದೇ ತಾಲ್ಲೂಕಿನಲ್ಲಿ ಗಿಡ್ಡಮ್ಮನನ್ನು ಭಕ್ತರು ಹಬ್ಬದಲ್ಲಿ ಓಲೈಸುತ್ತಿದ್ದ ರೀತಿ ಸ್ವಾರಸ್ಯಕರವಾಗಿದೆ. ನದಿಯ ದಡದಲ್ಲಿ ದೇವರ ಗುಡ್ಡನು ಗಿಡ್ಡಮ್ಮನನ್ನು ಕುರಿತು, "ಒಲಿದು ಬಾರಮ್ಮ ನೀನು ಒಲಿದು ಬಾರೆ ನಿನ್ನ ಕಾಯ್ಕೋಂಡು ಕೂತೀವಿ ಒಲಿದು ಬಾರೆ" ಎಂದು ಭಕ್ತಿ ಸಂಭ್ರಮದಿಂದ ಹಾಡಿ ಕರೆಯುತ್ತಿದ್ದನು. ಉಳಿದ ಗುಡ್ಡರು ಅವನ ಧ್ವನಿಗೆ ಹಿಮ್ಮೇಳ ನೀಡುತ್ತಿದ್ದರು. ಈ ಹಾಡಿಗೆ ದೇವತೆ ಒಲಿದು ಮೇದುಂಬದಿದ್ದರೆ ಬೇರೆ ಗುಡ್ಡರು "ಒಲಿದು ಬಾರೇ ತಾಯಿ ಒಲಿದು ಬಾರೆ ನಿಮ್ಮಪ್ಪ ನಿನ್ನ ತುಲ್ಲ ಕೆಯ್ಯ ಒಲಿದು ಬಾರೇ" ಎಂದು ಅಶ್ಲೀಲವಾಗಿ

ಹಾಡುತ್ತಿದ್ದರು. ಹೀಗೆ ಹಾಡಿದ ಕೂಡಲೇ ದೇವಿ ಪೂಜಾರಿಯ ಮೈಮೇಲೆ ಬರುತ್ತಿದ್ದಳು.

## ಗ್ರಾಮದೇವತೆಗಳು ಮತ್ತು ದೈಹಿಕ ಊನ

ಗ್ರಾಮದೇವತೆಗಳಲ್ಲಿ ಕೆಲವಕ್ಕೆ ವಿಚಿತ್ರವಾದ ದೈಹಿಕ ತೊಂದರೆಗಳಿವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕಬ್ಬಾಳಮ್ಮನಿಗೆ ಭಕ್ತರ ನಂಬಿಕೆಯಂತೆ ಕಣ್ಣಿನ ದೋಷವಿದೆ. ಅವರ ಪ್ರಕಾರ ದೇವತೆಗೆ ಸಮೀಪದೃಷ್ಟಿ ಇಲ್ಲ. ದೂರದೃಷ್ಟಿ ಚೆನ್ನಾಗಿದೆ. ಆದ್ದರಿಂದ ದೂರದೇಶಗಳಿಂದ ಬರುವ ಭಕ್ತರುಗಳಿಗೆ ಎಲ್ಲ ಸಂಪತ್ತು, ಭಾಗ್ಯಗಳು ದೊರಕುತ್ತವೆ. ಆದರೆ ಸಮೀಪದಲ್ಲಿಯೇ ಇರುವ ಭಕ್ತರಿಗೆ ಹೇಳಿಕೊಳ್ಳುವಂತ ಅನುಕೂಲಗಳು ಆಗುವುದಿಲ್ಲ. ಬಳ್ಳಾರಿ ಜಿಲ್ಲೆಯ ಹುಲಿಗೆಮ್ಮ ಉಳ್ಳಾಗಡ್ಡಿಯನ್ನು ಕದ್ದಿದ್ದಳು. ಈ ಕಳತನದ ಆಪಾದನೆ ಮಾತಂಗಮ್ಮನ ಮೇಲೆ ಬಂದು ಆಕೆಯ ಮೂಗನ್ನು ಕತ್ತರಿಸಿ ಹಾಕಲಾಯಿತು. ಹುಲಿಗೆಮ್ಮನ ಮರ್ಯಾದೆಯನ್ನು ಕಾಯ್ದ ಕಾರಣಕ್ಕಾಗಿ ಮಾತಂಗಮ್ಮನಿಗೆ ಮೊದಲ ಪೂಜೆ ಆಗುತ್ತದೆ. ಈ ಗೌರವಕ್ಕೆ ಪಾತ್ರಳಾಗಿರುವ ಮಾತಂಗಮ್ಮ ಇದಕ್ಕಾಗಿ ತನ್ನ ಮೂಗನ್ನೇ ಕಳೆದುಕೊಂಡಿರುವುದು ವಿಚಿತ್ರವಾಗಿದೆ. ಹುಲಿಗೆಮ್ಮ ಮೇಲುಜಾತಿಯ ಹೆಣ್ಣುಮಗಳೆಂಬುದನ್ನೂ, ಮಾತಂಗಮ್ಮ ಕೆಳಜಾತಿಯ ಹೆಣ್ಣು ಮಗಳೆಂಬುದನ್ನೂ ನಾವು ಗಮನಿಸಬಹುದು. ಬಲಾಢ್ಯರು ಮಾಡುವ ತಪ್ಪಿಗೆ ದುರ್ಬಲರು ಬಲಿಯಾಗುತ್ತಾರೆ ಎನ್ನುವ ಅಂಶವನ್ನು ಈ ಕಥೆ ಸೂಚಿಸುತ್ತದೆ.

ಶಿವಮೊಗ್ಗ ಜಿಲ್ಲೆಯ ಕಾಗಿನೆಲೆಯಲ್ಲಿರುವ ಕುಂಟುಮಾರಮ್ಮ ಮೊದಲು ಮೂಕಾಂಬಿಕೆ. ಈ ಸ್ಥಳಕ್ಕೆ ಬಂದಾಗ ಜಾಗದ ವಿಚಾರದಲ್ಲಿ ಈಕೆಗೂ ಬ್ರಹ್ಮದೇವರಿಗೂ ಜಗಳವಾಯಿತು. ಜಗಳದಲ್ಲಿ ಇವಳ ಕಾಲು ಕುಂಟಾಗಿ ಅಂದಿನಿಂದ ಕುಂಟುಮಾರಮ್ಮನಾದಳು. ಮಂಡ್ಯ ಜಿಲ್ಲೆಯ ಕೃಷ್ಣರಾಜ ಪೇಟೆ ತಾಲೂಕಿನ ಮಾಯಮ್ಮನಿಗೆ ಮೈದುಂಬಿದಾಗ ಮಾತಿಲ್ಲ. ಎಲ್ಲಾ ಕೈಸನ್ನೆ ಬಾಯಿಸನ್ನೆಯಲ್ಲೇ ನಡೆಯುತ್ತದೆ. ಕಾರಣ ದೇವತೆ

ತನ್ನ ಮಗನ ಸಾವಿಗೆ ಕಾರಣಳಾದಳೆಂದು ಕೋಪಗೊಂಡ ಭಕ್ತನೊಬ್ಬ ಈಕೆಯ ತಲೆಯ ಮೇಲೆ ಮೊಳೆ ಹೊಡೆದುಬಿಟ್ಟದ್ದು. ಅಂದಿನಿಂದ ಈಕೆ ಮೈದುಂಬಿದಾಗ ಮಾತಿಲ್ಲ. ಬರೀ ಕಣ್ಣೀರು ಸುರಿಸುತ್ತಾಳೆ. ಇದೇ ಬಗೆಯ ಕಥೆಗಳ ಹಿನ್ನೆಲೆಯುಳ್ಳ ನೂರಾರು ಊಗುಮಾರಮ್ಮಂದಿರು ಕರ್ನಾಟಕದ ಉದ್ದಗಲಕ್ಕೂ ಕಂಡುಬರುತ್ತಾರೆ. ಮೈದುಂಬಿರುವ ಅವಧಿಯಲ್ಲಿ ಮೌನವೇ ಇವರ ಭಾಷೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲೂಕಿನ ಅಕ್ಕಿನಾಳು ಗ್ರಾಮದ ಚನ್ನಮ್ಮ ಎಂಬ ದೇವತೆಗೆ ತೋಳಿದ್ದು ಕಯ್ಯಿಲ್ಲ. ಈಕೆಯನ್ನು ತೋಳ್ಗೈ ಚನ್ನಮ್ಮ ಎಂದೇ ಕರೆಯುತ್ತಾರೆ. ಕೆರೆ ಏರಿ ನಿಲ್ಲದಿದ್ದಾಗ ಬಲಿಯಾಗುವುದಕ್ಕಾಗಿ ಈಕೆ ತನ್ನ ಮಗುವನ್ನೆತ್ತಿಕೊಂಡು ನೀರಿನ ನಡುವೆ ನಿಂತಿದ್ದಳು. ನೀರು ನುಗ್ಗಿ ಇವಳ ಕೈ ತುಂಡಾಗಿ ಮಗುವಿನ ಸಮೇತ ನೀರಿನಲ್ಲಿ ಕೊಚ್ಚಿಕೊಂಡು ಹೋಯಿತು.

ಪೊಲೀಸ್ ದೇವತೆಯನ್ನು ಬಯ್ಯುತ್ತಾ ಬೀಡಿ ಹಚ್ಚಿಕೊಂಡ, ಇದರಿಂದ ಕೋಪಗೊಂಡ ದೇವತೆ ಆತನನ್ನು ಕಲ್ಲಾಗಿಸಿದಳು. ತೋಪಿನಲ್ಲಿ ನಿಂತಿರುವ ಮನುಷ್ಯ ವಿಗ್ರಹವನ್ನು ಜನ "ಪೊಲೀಸ್ ಕಲ್ಲು" ಎಂದು ಕರೆಯುತ್ತಾರೆ. ದೈವವು ಮಾನವ ನಿರ್ಮಿತ ವ್ಯವಸ್ಥೆಯನ್ನು ಮೀರಿದ್ದು ಎಂಬ ಆಶಯ ಈ ಕಥೆಯಲ್ಲಿದೆ. ದೇವತೆಯನ್ನು ಉಪೇಕ್ಷೆ ಮಾಡುವವರಿಗೆ ಕಾದಿರುವ ಶಿಕ್ಷೆಯನ್ನು ಈ ಐತಿಹ್ಯ ಸೂಚಿಸುತ್ತದೆ.

ದೊಡ್ಡಬಳ್ಳಾಪುರದ ಸಾವಿರಕಣ್ಣಮ್ಮನ ದೇವಸ್ಥಾನದಲ್ಲಿ ರಾತ್ರಿ ಹೊತ್ತು ಏನನ್ನೋ ಕದಿಯಲು ಹೋದ ವ್ಯಕ್ತಿ ಅಲ್ಲಿಯೇ ಮೂರ್ಛೆ ಬಿದ್ದು ಹೋಗಿ ನಂತರ ಎಚ್ಚೆತ್ತುಕೊಂಡು ಮರಳಿದನು. ಈ ವಿಚಾರವನ್ನು ಸಂಬಂಧಿಸಿದ ವ್ಯಕ್ತಿಯೇ ಹೇಳಿರುವುದರಿಂದ ಇದನ್ನು ನಂಬಬಹುದು. ಆತನಿಗೆ ಕದಿಯಲು ಹೋದ ಸಮಯದಲ್ಲಿ ಉಂಟಾದ ಮಾನಸಿಕ ಪರಿಣಾಮವೇ ಈ ಬದಲಾವಣೆಗೆ ಕಾರಣ ಎಂದು ತರ್ಕಿಸಬಹುದು.

* * *

ಓದು ಪಠ್ಯ

# ಬೇಡರ ಕನ್ನಯ್ಯನ ಕಥೆ

**–ಜನಪದ**

ಕಂಚಿ, ಕಾಳಹಸ್ತಿಯ ಸುತ್ತಿನಲ್ಲಿ ಬೇಡರ ಕನ್ನಯ್ಯನು ಬೇಟೆಯಾಡಿಕೊಂಡು ಜೀವಿಸಿ ತನ್ನ ಹೆಂಡತಿ ಮಕ್ಕಳನ್ನು ಸಾಕುತ್ತಿದ್ದನು. ಬೇಡರ ಕನ್ನಯ್ಯನಿಗೆ 'ಮೃಂಗಾಗಿಕ' ಎಂಬ ಹೆಸರೂ ಇದ್ದಿತು. ಒಂದು ಬಾರಿ ಬೇಸಿಗೆಯಲ್ಲಿ ಕಾಡಿನೊಳಗೆ ಪ್ರಾಣಿಗಳು ಹುಲ್ಲುನೀರು ಹುಡುಕಿಕೊಂಡು ದೂರದೂರ ಹೊರಟುಹೋದವು. ಕನ್ನಯ್ಯನು ಏಳು ರಾತ್ರಿ ಏಳು ಹಗಲು ಹುಡುಕಿದರೂ ಒಂದು ಇಲಿಯ ಬೇಟೆಯೂ ದಕ್ಕಲಿಲ್ಲ. ಹೆಂಡತಿ ಮಕ್ಕಳು ಉಪವಾಸವಿದ್ದು ಕನ್ನಯ್ಯನನ್ನು ನಿಂದಿಸತೊಡಗಿದರು. ಬೇಟೆ ತರದೇಹೋದರೆ ನಮ್ಮನ್ನೇ ಬಾಣ ಬಿಟ್ಟು ಕೊಲ್ಲಬೇಕಾಗಿ ಕೇಳಿಕೊಂಡರು. ಕನ್ನಯ್ಯನು ಬಹಳ ವ್ಯಥೆಯಿಂದ ಇವತ್ತು ಹೇಗಾದರೂ ಬೇಟೆ ತರುವುದೆಂದು ನಿರ್ಧಾರ ಮಾಡಿ ಉಪವಾಸದ ಎಂಟನೇ ದಿನ ಮನೆ ಬಿಟ್ಟು ಹೊರಟು ಬಂದನು.

ಬಹಳ ದೂರ ನಡೆದುಕೊಂಡು ಬಂದರೆ ಅವನ ಅದೃಷ್ಟವೋ ಎನ್ನುವಂತೆ ಒಂದು ಹೆಣ್ಣು ಜಿಂಕೆಯು ಅವನ ಎದುರು ದಾರಿಯಲ್ಲಿ ಬಂದಿತು. ಕನ್ನಯ್ಯನಿಗೆ ಬಹಳ ಸಂತೋಷವಾಗಿ ಬಿಲ್ಲಿಗೆ ಬಾಣ ಹೂಡಿದನು. ಆಗ ಹೆಣ್ಣು ಜಿಂಕೆಯಿದ್ದು 'ಅಪ್ಪಾ, ಸ್ವಲ್ಪ ತಾಳು, ನನ್ನ ಗಂಡನೂ ಮಕ್ಕಳೂ ಎತ್ತಲೋ ತಪ್ಪಿಸಿಕೊಂಡು ಹೋಗಿದ್ದಾರೆ. ಅವರನ್ನು ಹುಡುಕಿಕೊಂಡು ಹೊರಟಿದ್ದೇನೆ. ಅವರು ಎಲ್ಲಿಯೋ ಮೇವು, ನೀರು ಇಡುವ ಕಡೆ ಇರಬಹುದು. ಅವರು ಸಿಕ್ಕಿದರೆ ನೋಡಿಕೊಂಡು ಬಂದು ಬಿಡುವೆ. ಆಮೇಲೆ ನೀನು ನನ್ನನ್ನು ಕೊಂದು ಊಟ ಮಾಡಬಹುದು' ಎಂದು ಹೇಳಿತು. ಕನ್ನಯ್ಯನು ಯಾವ ಯೋಚನೆಯನ್ನೂ ಮಾಡದೆ 'ಆಯಿತು, ಹೋಗಿ ನಿನ್ನ ಗಂಡ ಮಕ್ಕಳನ್ನು ನೋಡಿ ಬಾ' ಎಂದು ಅವಕಾಶ ಮಾಡಿಕೊಟ್ಟನು. ಇನ್ನು ಆ ಜಿಂಕೆ ಬರುವವರೆಗೆ ಏನು ಮಾಡುವುದು ಎಂದು ಅವನಿಗೆ ತೋಚಲಿಲ್ಲ. ಮನೆಗೆ ಹೋದರೆ

ಬೇಟೆ ತಾರದೆ ಬಂದನೆಂದು ಹೆಂಡತಿ ಮಕ್ಕಳು ಬೈಯುವರು. ಇತ್ತ ಕಡೆ ಕೈಗೆ ಸಿಕ್ಕಿದ ಬೇಟೆಯ ಕಥೆ ಹೀಗಾಯಿತು, ಎಂದು ಯೋಚಿಸಿ ಅಲ್ಲೇ ಇದ್ದ ಮರವೊಂದನ್ನು ಏರಿ ಕುಳಿತನು. ಅವನು ಏರಿದ ಮರವು ಬಿಲ್ವಪತ್ರೆಯ ಮರವಾಗಿತ್ತು. ಆ ಮರದ ಕೆಳಗೆ ಒಂದು ಲಿಂಗವೂ, ಪಾಣಿಪೀಠವೂ, ಅದರ ಮುಂದೆ ಬಸವಣ್ಣನ ವಿಗ್ರಹವೂ ಇತ್ತು. ಬೇಡರ ಕನ್ನಯ್ಯನಿಗೆ ಅದು ವಿಗ್ರಹವೆಂಬುದೇ ಗೊತ್ತಿರದೆ ಮರ ಏರುವಾಗ ಲಿಂಗದ ಮೇಲೆಯೇ ಕಾಲಿಟ್ಟುಕೊಂಡು ಹತ್ತಿದ್ದನು.

ಜಿಂಕೆಯು ಅವತ್ತಿನ ಹಗಲೆಲ್ಲ ಬರಲಿಲ್ಲ. ಕನ್ನಯ್ಯನು ಜಿಂಕೆಯನ್ನು ಕಾಯುತ್ತಾ ಕಾಯುತ್ತಾ ಬೇಜಾರಿನಿಂದ ಮರದ ಮೇಲಿನ ಒಂದೊಂದೇ ಎಲೆಯನ್ನು ಕಿತ್ತು ಕಿತ್ತು ಕೆಳಕ್ಕೆ ಎಸೆಯುತ್ತಿದ್ದ. ಅದರ ಮಾರನೆಗೆ ಬಂದು ಗಂಡು ಜಿಂಕೆಯು ಆ ಮಾರ್ಗವಾಗಿ ಬಂದಿತು. ಆಗ ಬೇಡರ ಕನ್ನಯ್ಯ ಮರ ಬಿಟ್ಟು ಇಳಿದು, ಆ ಹೆಣ್ಣು ಜಿಂಕೆ ತಪ್ಪಿಸಿಕೊಂಡಿತು. ಈ ಗಂಡು ಜಿಂಕೆಯಾದರೂ ಸಿಕ್ಕಿತಲ್ಲ ಎಂದುಕೊಂಡು ಬಿಲ್ಲಿಗೆ ಬಾಣ ಹೂಡಿದನು. ಆಗ ಆ ಗಂಡು ಜಿಂಕೆಯಿದ್ದು 'ಅಯ್ಯಾ ಬೇಡನೇ ಸ್ವಲ್ಪ ತಾಳು, ನನ್ನ ಹೆಂಡತಿ, ಮಕ್ಕಳು ಎತ್ತಲೋ ತಪ್ಪಿಸಿಕೊಂಡಿದ್ದಾರೆ. ಅವರನ್ನು ಹುಡುಕಿಕೊಂಡು ತಿರುಗುತ್ತಿದ್ದೇನೆ. ಅವರು ಸಿಕ್ಕಿದರೆ ಕೊನೆಯ ದಾರಿ ನೋಡಿಕೊಂಡು ಇಲ್ಲಿಗೇ ಬಂದುಬಿಡುವೆ, ಆಗ ನೀನು ನನ್ನನ್ನು ಕೊಂದು ಮನೆಗೆ ಹೊತ್ತುಕೊಂಡು ಹೋಗುವೆಯಂತೆ, ನನ್ನ ಮಾತನ್ನು ನಂಬು' ಎಂದು ಕೇಳಿತು.

ಆಗಲೂ ಬೇಡರ ಕನ್ನಯ್ಯನಿಗೆ ಮನ ಕರಗಿತು. 'ಆಯಿತು ಹೋಗಿ ಬಾ, ನಿನ್ನನ್ನು ಕೊಲ್ಲದೆ ಬಿಡುತ್ತಿದ್ದೇನೆ' ಎಂದು ಹೇಳಿಕಳಿಸಿದ. ಜಿಂಕೆಯು ತನ್ನ ಸಂಸಾರವನ್ನು ಹುಡುಕಿಕೊಂಡು ಹೊರಟಿತು.

ಗಂಡು ಜಿಂಕೆ ಹೋದಮೇಲೆ ಮಾಡುವುದೇನು ಎಂದು ಯೋಚಿಸಿ ಕನ್ನಯ್ಯನು ಮನೆಗೆ ಹೋಗದೆ ತಿರುಗಿ ಮರ ಏರಿ ಕೂತು, ಬೇಜಾರಿಗೆ ಎಲೆ ಕಿತ್ತು ಲಿಂಗದ ಮೇಲೆ ಬಿಸಾಡತೊಡಗಿದ. ಹೆಣ್ಣು ಜಿಂಕೆ ಹೋದಾಗ ಹಗಲೆಲ್ಲ ಕಿತ್ತಿಟ್ಟ ಬಿಲ್ವಪತ್ರೆಯಿಂದ ಮರದ ಕೆಳಗಿನ ಲಿಂಗಕ್ಕೆ ಮೊದಲ ಪೂಜೆಯೂ ಈಗ ಎರಡನೇ ಬಾರಿಗೆ ಗಂಡುಜಿಂಕೆ ಹೋದಮೇಲೆ

ಕಿತ್ತಿಡುತ್ತಿದ್ದ. ಪತ್ರೆಯಿಂದ ಶಿವನಿಗೆ ಎರಡನೆ ಪೂಜೆಯೂ ಆದಂತಾಯಿತು. ಅವತ್ತೂ ಸಾಯಂಕಾಲ ಆಗುವವರೆಗೆ ನೋಡಿದ. ಅಪ್ಪಣೆ ಕೇಳಿಕೊಂಡು ಹೋದ ಹೆಣ್ಣು ಗಂಡು ಜಿಂಕೆಗಳು ಬರಲಿಲ್ಲ. ಬೇಟೆ ಮಾಡಿಕೊಂಡು ಬರುತ್ತೇನೆಂದು ಹೆಂಡತಿ ಮಕ್ಕಳಿಗೆ ಹೇಳಿ ಬಂದು ಮೂರು ದಿನವಾಯಿತು. ಅತ್ತ ಸಂಸಾರದ ಗತಿಯೇನಾಗಿರ ಬಹುದು ಎಂದು ಚಿಂತಾಕ್ರಾಂತನಾಗಿ ನೋಡಿಕೊಂಡಾದರೂ ಹೋಗೋಣವೆಂದುಕೊಂಡು ಮನೆಯ ಕಡೆಗೆ ಬಂದು 'ಈ ಸಾರಿ ಕಾಡಿನಲ್ಲಿ ಬೇಟೆ ಸಿಕ್ಕಿತೆಂದೂ, ಸಿಕ್ಕಿದರೂ ವಾಪಸ್ಸು ಬರುತ್ತೇವೆಂದು ಹೇಳಿಹೋದ ಜಿಂಕೆಗಳು ಬರಲಿಲ್ಲವೆಂದು' ಹೇಳಿದನು.

ಕನ್ನಯ್ಯನ ಮೇಲೆ ಮಡದಿಮಕ್ಕಳೆಲ್ಲಾ ಸಿಟ್ಟಾದರು. 'ನಿನ್ನಂಥ ಗಂಡನನ್ನು ಕಟ್ಟಿಕೊಂಡದ್ದೇ ತಪ್ಪಾಯಿತು. ಬಾಣ ಬಿಟ್ಟು ನನ್ನನ್ನೇ ಕೊಂದು ನೀವೆಲ್ಲ ಹಂಚಿಕೊಂಡು ತಿನ್ನಿ' ಎಂದು ಹೆಂಡತಿಯು ಕಣ್ಣೀರು ಸುರಿಸಿದಳು. ತಾಯಿಗಿಂತ ಹೆಚ್ಚಾಗಿ ಮಕ್ಕಳು ಅಳುತ್ತ ಅವು ಇನ್ನೇನು ಸಾಯುವ ಸ್ಥಿತಿಯಲ್ಲಿದ್ದವು. ಒಂದು ಸುಂಡಿಲಿಯನ್ನಾದರೂ ಹೊಡೆದುಕೊಂಡು ಬರುತ್ತೇನೆಂದು ಕನ್ನಯ್ಯನು ಮನೆ ಬಿಟ್ಟು ಹೊರಟ. ಹೋಗುವಾಗ ಅವನ ಹೆಂಡತಿಯು 'ನೀನು ಬೇಟೆ ತರುವುದಿರಲಿ, ಇನ್ನು ಒಂದು ದಿನ ತಡ ಮಾಡಿ ಬಂದರೂ ಮನೆಯಲ್ಲಿ ನಾವೆಲ್ಲ ಸತ್ತುಹೋಗಿರುತ್ತೇವೆ' ಎಂದು ಹೇಳಿಬಿಟ್ಟಳು.

ಬೇಡರ ಕನ್ನಯ್ಯನು ಅದೇ ಹೆಣ್ಣು ಗಂಡು ಜಿಂಕೆ ಭಾಷೆ ಕೊಟ್ಟು ಹೋಗಿದ್ದ ಸ್ಥಳಕ್ಕೆ ಬಂತು ನಿಂತ. ಅಷ್ಟು ಹೊತ್ತಿಗೆ ಒಂದು ಹೆಣ್ಣು, ಒಂದು ಗಂಡು, ಒಂದು ಮರಿಜಿಂಕೆಯು ಬಂದು ಕನ್ನಯ್ಯನ ಮುಂದೆ ನಿಂತವು. ಹೆಣ್ಣು ಜಿಂಕೆ ಹೇಳಿತು, 'ಅಪ್ಪಾ ಬೇಡನೆ, ನೀನು ನನ್ನ ಕೊನೆಯ ಆಸೆಯನ್ನು ನೆರವೇರಿಸಿದೆ. ನನ್ನ ಗಂಡ, ಮಗ ಸಿಕ್ಕಿದರು. ಅವರನ್ನು ಆನು ಕಣ್ಣು ತುಂಬಾ ನೋಡಿದೆ. ನೀನು ನನ್ನನ್ನು ಕೊಂದು ತೆಗೆದುಕೊಂಡು ಹೋಗಬಹುದು' ಎಂದಿತು. ಬೇಡರ ಕನ್ನಯ್ಯನಿಗೆ ದಿಕ್ಕೇ ತೋಚದಂತಾಯಿತು. ಆಗ ಮರಿಜಿಂಕೆಯಿದ್ದು 'ಅಪ್ಪಾ ತಂದೆಯೇ, ಈ ನನ್ನ ತಾಯಿ ತಂದೆಯನ್ನು ಕೊಲ್ಲಬೇಡ. ಅವರಿದ್ದರೆ ಮುಂದೆ

ನನ್ನಂಥ ನಾಲ್ಕಾರು ಮಕ್ಕಳಾಗಿ ಅವರ ವಂಶಾಭಿವೃದ್ಧಿಯಾಗುತ್ತದೆ. ನನ್ನಿಂದ ಏನು ಆಗುತ್ತದೆ. ಇನ್ನೂ ಚಿಕ್ಕವನು ಸತ್ತರೂ ಚಿಂತೆಯಿಲ್ಲ. ನನ್ನನ್ನು ಕೊಂದು ಮನೆಗೆ ತೆಗೆದುಕೊಂಡು ಹೋಗಿ ಊಟ ಮಾಡು' ಎಂದಿತು. ಯಾವಾಗ ಮರಿಜಿಂಕೆಯು ಹೀಗೆ ಅಂದಿತೋ ಅವನಿಗೆ ಆ ಜಿಂಕೆಯ ಸಂಸಾರದ ಮೇಲೆ ಅಪಾರ ಕರುಣೆ ಬಂದಿತು. ತಾನು, ತನ್ನ ಮಡದಿ ಮಕ್ಕಳು ಸತ್ತರೂ ಚಿಂತೆಯಿಲ್ಲ. ಇಂಥ ಸಂಸಾರದಲ್ಲಿ ಒಂದನ್ನೊಂದು ಅಗಲಿಸುವುದು ಸರಿಯಲ್ಲವೆಂದು ಯೋಚಿಸಿ, ಆ ಜಿಂಕೆಗಳನ್ನು ಹಾಗೆಯೇ ಕಳಿಸಿಬಿಟ್ಟ. ಆಗ ಜಿಂಕೆಗಳು 'ನೀನು ಬೇಡನಲ್ಲಪ್ಪ, ನಮ್ಮನ್ನೆಲ್ಲ ಬದುಕಿಸಿದ ತಂದೆ' ಎಂದು ಹೇಳಿ ಅರಣ್ಯ ಮಾರ್ಗವಾಗಿ ಹೋದವು.

ಅಷ್ಟು ಹೊತ್ತಿಗೆ ದಾರಿಯಲ್ಲಿ ಯಾರೋ ಮನುಷ್ಯನು ಮಡಿ ಉಟ್ಟುಕೊಂಡು ಕೈಯಲ್ಲಿ ಪಾತ್ರೆ, ಬುಟ್ಟಿ ಹಿಡಿದು ಇವನು ನಿಂತಿದ್ದ ಮರದ ಕಡೆಯೇ ಬರುತ್ತಿರುವಂತೆ ಕಂಡಿತು. ತಕ್ಷಣವೇ ಬೇಡರ ಕನ್ನಯ್ಯ ದೂರ ಓಡಿ ಹೋಗಿ ಬಂದು ಮರದ ಮರೆಗೆ ನಿಂತುಕೊಂಡ. ಬಂದ ವ್ಯಕ್ತಿಯು ಹಣೆಯಲ್ಲಿ ವಿಭೂತಿ ಧರಿಸಿದ್ದ. ಸ್ನಾನ ಮಾಡಿಕೊಂಡು ಶುದ್ಧನಾಗಿದ್ದ. ತಲೆ ಮುಡಿ ಕಟ್ಟಿ ಅದಕ್ಕೆ ಹೂ ಸಿಕ್ಕಿಸಿಕೊಂಡಿದ್ದ. ಅವನು ಬಂದವನೇ ಲಿಂಗದ ಸುತ್ತ ಗುಡ್ಡೆಯಾಗಿ ಬಿದ್ದಿದ್ದ ಬಿಲ್ವಪತ್ರೆಯನ್ನೆಲ್ಲ ಎತ್ತಿಹಾಕಿ ಹಾಗೆ ಕಸ ಮಾಡಿದವರನ್ನು ಬೈದುಕೊಂಡ. ಅವನು ಸಿಕ್ಕಿದರೆ ಊರ ಜನರೆಲ್ಲ ಸೇರುವಂತೆ ಮಾಡಿ, ಇವನ್ನು ತೋರಿಸಿ ಶಿಕ್ಷೆ ಮಾಡಿಸುತ್ತಿದ್ದೆ ಎಂದು ಸಿಟ್ಟಿನಿಂದ ಲಿಂಗದ ಸುತ್ತಮುತ್ತಣ ಅಂಗಳವನ್ನೆಲ್ಲ ಶುದ್ಧ ಮಾಡಿದ. ಪಾತ್ರೆಯಿಂದ ತಂದಿದ್ದ ನೈವೇದ್ಯವನ್ನು ಇಟ್ಟು ಪೂಜೆ ನೆರವೇರಿಸಿದ. ಪೂಜೆಯೆಲ್ಲ ಆದಮೇಲೆ ಪೂಜಾರಿಯು ತನಗೆ ಒಳ್ಳೆಯದು ಮಾಡಲೆಂದು ಮನಸ್ಸಿನಲ್ಲಿಯೇ ಬೇಡಿ ಅಡ್ಡ ಬಿದ್ದು ಬುಟ್ಟಿ ಪಾತ್ರೆ ನೈವೇದ್ಯವನ್ನೆಲ್ಲ ಎತ್ತಿಕೊಂಡು ಹೊರಟನು.

ಕನ್ನಯ್ಯನಿಗೆ ಆಗ ಗೊತ್ತಾಯಿತು ತಾನು ದೇವರು ನೆಲೆಸಿದ್ದ ಮರದ ಮೇಲೆ ಹತ್ತಿ ಕೂತಿದ್ದು ತಪ್ಪಾಯಿತೆಂದು. ಆ ತಪ್ಪನ್ನು ದೇವರು ಮನ್ನಿಸುವವರೆಗೂ ತಾನು ಇಲ್ಲಿಂದ ಹೋಗಬಾರದೆಂದು ಹೇಳಿ ಆ

ಪೂಜಾರಿಯು ಮಾಡಿದ್ದಂತೆಯೇ ತಾನೂ ಮಾಡಲು ಇಚ್ಛಿಸಿದನು. ಆದರೆ ನೀರು ತರಲು ಪಾತ್ರೆಯಿಲ್ಲ. ಓಡಿಹೋಗಿ ಬಾಯಲ್ಲೇ ನೀರು ತುಂಬಿಕೊಂಡು ಬಂದು ಲಿಂಗದ ಮೇಲೆ ಉಗಿದ. ಕಾಡು ಹೂ ತಂದು ಮುಡಿಸಿದ. ಅಷ್ಟು ಹೊತ್ತಿಗೆ ದೇವರ ಮಹಿಮೆಯೇ ಎಂಬಂತೆ ಒಂದು ಮೊಲವು ಆ ಕಡೆ ಕುಪ್ಪಳಿಸಿಕೊಂಡು ಬಂದಿತು. ಬೇಡರ ಕನ್ನಯ್ಯನಿಗೆ ತನ್ನ ಮಡದಿ ಮಕ್ಕಳು ಉಪವಾಸವಿರುವ ಸಂಗತಿ ಮರೆತೇಹೋಗಿ ಅವನ ಮನಸ್ಸಿನಲ್ಲಿ ಶಿವಲಿಂಗವೇ, ತಾನು ಮಾಡಿದ ತಪ್ಪೇ ಅಧಿಕವಾಗಿ ತುಂಬಿಹೋಗಿತ್ತು. ಆ ಕಡೆ ಬಂದ ಮೊಲವನ್ನು ಕೊಂದು ಅದರ ಮಾಂಸವನ್ನು ದೇವರ ಮುಂದೆ ಇಟ್ಟನು. ಇಟ್ಟು ತಾನು ಮಾಡಿದ ತಪ್ಪನ್ನು ಶಿವನು ಕ್ಷಮಿಸುವವರೆಗೂ ತಾನು ಅಲ್ಲಿಂದ ಕದಲುವುದಿಲ್ಲವೆಂದು ಮುಂದೆ ಕುಳಿತುಬಿಟ್ಟನು....

ಮಕ್ಕಳೊಡನೆ ಬಂದ ಮಡದಿಯನ್ನು ಬೇಡರ ಕನ್ನಯ್ಯ ನೋಡಿದ. ಅವರು ಹಸಿವಿನಿಂದ ಕಂಗಾಲಾಗಿರದೆ ಸಂತೋಷದಿಂದ ಇದ್ದರು. ಅವರೆಲ್ಲ ಬಂದವರೇ ಶಿವನ ವಿಗ್ರಹಕ್ಕೂ ಕನ್ನಯ್ಯನಿಗೂ ಸಾಷ್ಟಾಂಗ ನಮಸ್ಕಾರ ಮಾಡಿದರು. ಕನ್ನಯ್ಯನಿಗೆ ಮಹದಾಶ್ಚರ್ಯವಾಯಿತು. ಇದೇನಿದು ಎಂದು ಆಶ್ಚರ್ಯಚಕಿತನಾಗಿ ಕೇಳಲು ಹೆಂಡತಿಯು ನೀವೇ ಮೂರ್‍ನಾಲ್ಕು ದಿನದ ಹಿಂದೆ ಒಡವೆ, ವಸ್ತ್ರ, ಐಶ್ವರ್ಯ, ದವಸಧಾನ್ಯ ಎಲ್ಲ ಕಳಿಸಿದಿರಲ್ಲ. ಇದೇನು ಏನೂ ಗೊತ್ತಿಲ್ಲದವರ ಹಾಗೆ ಕೇಳುತ್ತಿರುವಿರಲ್ಲ ಎಂದಳು. ಕನ್ನಯ್ಯನಿಗೆ ಏನೂ ನಂಬಲಾಗಲಿಲ್ಲ. ಎದ್ದು ಮನೆಯ ಕಡೆ ಬಂದು ನೋಡಿದರೆ ಮನೆಯ ಒಳಗೆಲ್ಲ ದವಸ ಧಾನ್ಯ ತುಂಬಿದೆ. ಪೆಟ್ಟಿಗೆಯೊಳಗೆ ಒಡವೆ ವಸ್ತ್ರ ತುಂಬಿದೆ. ಅಯ್ಯೋ ನನ್ನ ಬಡತನವನ್ನು ನೀಗಿದವನು ಆ ಪರಮಾತ್ಮನೇ ಇರಬೇಕು. ಆ ದೇವರಿಗೆ ನಾನು ಸಾಷ್ಟಾಂಗ ಮಾಡಿ ಬರುವೆನೆಂದು ಒಡಿಬಂದ.

ಕನ್ನಯ್ಯ ಬಿಲ್ವಪತ್ರ ಮರದ ಕಡೆ ಬರುವುದಕ್ಕೂ ಧಾರಾಕಾರವಾಗಿ ಮಳೆ ಸುರಿಯುವುದಕ್ಕೂ ಸರಿಯಾಯಿತು. ಮರದ ಕೆಳಗಿನ ಲಿಂಗವು ನೆನೆಯುತ್ತಿದೆಯಲ್ಲ ಎಂದು ಕನ್ನಯ್ಯನಿಗೆ ಚಿಂತೆಯಾಗಿ ತನ್ನ ಮೈಮೇಲಿನ ಕಂಬಳಿಕೋರಿಯನ್ನು ತೆಗೆದು ಲಿಂಗಕ್ಕೆ ಹೊದಿಸಿ ಚಳಿಯಾಗದಂತೆ

ಬಲವಾಗಿ ತಬ್ಬಿಕೊಂಡನು. ಮಳೆಯು ನಿಂತಿತು. ಸ್ವಲ್ಪ ಹೊತ್ತಿನ ಮೇಲೆ ಕನ್ನಯ್ಯನು ನೋಡು ನೋಡುತ್ತಿದ್ದಂತೆಯೇ ಲಿಂಗದ ಎಡಗಣ್ಣಿನಲ್ಲಿ ನೀರು ಬಂದಿತು. ಈ ಮಳೆಯಿಂದಲೇ ಏನೋ ಆಯಿತೆಂದು, ವಸ್ತ್ರದಿಂದ ದೇವರ ಕಣ್ಣನ್ನು ತೊಡೆದ. ನೀರು ಸುರಿಯುವುದು ನಿಂತು ರಕ್ತ ಹರಿಯತೊಡಗಿ, ಕನ್ನಯ್ಯನಿಗೆ ಗಾಬರಿಯಾಯಿತು. ಸ್ವಾಮಿಯ ಕಣ್ಣಿಗೆ ಬದಲಾಗಿ ತನ್ನ ಕಣ್ಣನ್ನೇ ಕೊಟ್ಟುಬಿಡುವೆನೆಂದು ನಿರ್ಧರಿಸಿ ಬೆನ್ನಿನ ಬತ್ತಳಿಕೆಯಿಂದ ಬಾಣ ತೆಗೆದು ಕನ್ನಯ್ಯನು ತನ್ನ ಎಡಗಣ್ಣನ್ನು ಮೀಟಿ ತೆಗೆದು ಲಿಂಗದ ಎಡಗಣ್ಣಿನ ಕಡೆ ಇಟ್ಟನು. ಹೀಗೆ ಮಾಡಿದ್ದರಿಂದ ದೇವರ ಎಡಗಣ್ಣಿನಿಂದ ರಕ್ತ ಸುರಿಯುವುದು ನಿಂತಿರಬಹುದೇ ಎಂದು ಕನ್ನಯ್ಯನು ಬಲಗಣ್ಣಿನಿಂದ ನೋಡಿದರೆ ಸ್ವಾಮಿಯ ಬಲಗಣ್ಣಿನಿಂದಲೂ ರಕ್ತ ಹನಿಯಲು ಆರಂಭವಾಯಿತು. ಆಗ ಕನ್ನಯ್ಯನು ದೃಢ ನಿರ್ಧಾರ ಮಾಡಿದವನಾಗಿ ತನ್ನ ಬಲಗಾಲಿನ ಹೆಬ್ಬೆರಳನ್ನು ಸ್ವಾಮಿಯ ಬಲಗಣ್ಣಿನ ಕಡೆಗಿಟ್ಟು ಅದೇ ಬಾಣದಿಂದ ತನ್ನ ಬಲಗಣ್ಣನ್ನು ಮೀಟಿ ಅಲ್ಲಿ ಇಟ್ಟುಬಿಟ್ಟ.

ಆಗ ಶಿವನು ಪ್ರತ್ಯಕ್ಷನಾಗಿ ಕನ್ನಯ್ಯನಿಗೆ ಅವನ ಕಣ್ಣನ್ನು ಕರುಣಿಸಿದ. ಶಿವನ ನಿಜಸ್ವರೂಪವನ್ನು ಕಂಡ ಕನ್ನಯ್ಯನಿಗೆ ಸಂತೋಷವಾಯಿತು. ಶಿವನು ಕನ್ನಯ್ಯನನ್ನು ಕುರಿತು 'ನಿನ್ನ ಭಕ್ತಿಗೆ ಮೆಚ್ಚಿದ್ದೇನೆ, ಏನು ವರ ಬೇಕು ಬೇಡಿಕೋ' ಎಂದನು. ಕನ್ನಯ್ಯನಿಗೆ ದೇವರನ್ನು ಕುರಿತು ಏನನ್ನು ಬೇಡಲು ಬಾಯಿ ಬರಲಿಲ್ಲ. 'ಸ್ವಾಮಿ, ಶಿವರಾತ್ರಿಯ ಬೆಳೆ, ಗಂಜಿ ಮಡಕೆಯ ಸುತ್ತ ಮಕ್ಕಳು, ಕಟ್ಟಿಗೆ ಬೆಳಕಿನ ಊಟ ಕರುಣಿಸು, ಅಷ್ಟೇ ಸಾಕು' ಎಂದು ಕೇಳಿಕೊಂಡ. ಶಿವನು, 'ಆಯಿತು, ಬೇಡರ ವ್ಯವಸಾಯ ಮಾಡಿದಂತೆ ಬೆಳೆಯಾಗಲಿ, ಮನೆಯಲ್ಲಿ ಹೆಂಗಸು ಉಣ್ಣಲಿಟ್ಟರೆ ಮಕ್ಕಳು ಸುತ್ತ ಕೂತು ಬೆಂಕಿ ಬೆಳಕಿನಲ್ಲಿ ಊಟ ಮಾಡುವಂತಾಗಲಿ' ಎಂದು ಹೇಳಿ ಮಾಯವಾದನು. ಅದರಿಂದಲೇ ಬೇಡನಾಯಕರು ಎಷ್ಟೇ ಪರಾಕ್ರಮಶಾಲಿಗಳಾದರೂ ಬಡವರಾಗಿಯೇ ಉಳಿದಿರುವುದು; ಅದಕ್ಕೆ ಕಾರಣ ಈಗಿನ ನಾಯಕ ಮಕ್ಕಳಲ್ಲ, ಹಿಂದೆ ಕನ್ನಯ್ಯನು ಶಿವನಲ್ಲಿ ಬೇಡಿಕೊಂಡ ವರವೇ ಆಗಿತ್ತು.

* * *

# ಕಾಯ

## ಆಶಯ :

ಕಾಯ ಅಂದರೆ ದೇಹ. ಹುಟ್ಟು, ಬೆಳವಣಿಗೆ, ಸಾವು–ಇವು ಪ್ರಕೃತಿಯ ಸಹಜ ಕ್ರಿಯೆಯಾಗಿದೆ. ಹುಟ್ಟು, ಸಾವು ನಮ್ಮ ಕೈಯಲ್ಲಿ ಇಲ್ಲದಿದ್ದರೂ ಜೀವನದಲ್ಲಿ ಬೆಳವಣಿಗೆ ಹೊಂದುವುದು ಅಂದರೆ ಅಭಿವೃದ್ಧಿ ಹೊಂದುವುದು ಮಾನವನ ಕೈಯಲ್ಲಿದೆ. ಜನ್ಮವನ್ನು ಪಡೆದ ಮನುಜ ಲೌಕಿಕ ಜೀವನದ ಅಂದರೆ ಸಾಂಸಾರಿಕ ಜೀವನದ ಸುಖ–ದುಃಖಗಳ ಸುಳಿಯಲ್ಲಿ ಸಿಲುಕಿ ಹೊರಬರಲಾರದೆ ಅಲ್ಲೇ ಸುತ್ತುತ್ತಲೇ ಜೀವನವನ್ನು ಮುಗಿಸಿದವರು ಬಹಳಷ್ಟು ಜನರಿದ್ದಾರೆ. ಇನ್ನು ಪ್ರಪಂಚಕ್ಕೆ ಬಂದ ಕೆಲ ಮನುಜರು ತಮ್ಮ ತಮ್ಮ ಕ್ಷೇತ್ರಗಳಲ್ಲೇ ಇದ್ದುಕೊಂಡು ಇಲ್ಲಿನ ಸಾಂಸಾರಿಕ ಜೀವನದ ಸುಖ–ದುಃಖಗಳ ಸುಳಿಯಲ್ಲಿ ಸುತ್ತತ್ತಲೇ ತಮ್ಮ ಅಂತರಾಳದಲ್ಲಿ ಹುದುಕಿಕೊಂಡಿರುವ ದಿವ್ಯ ಚೇತನವಾದ ಜೀವಾತ್ಮವನ್ನು ತಾವು ಮೊದಲು ಅರಿತುಕೊಂಡು ಶ್ರೇಷ್ಠ ಮಟ್ಟಕ್ಕೆ ತಂದು ಪರಮಾತ್ಮನನ್ನು ಸೇರುವ ತತ್ವವನ್ನು ಸಾರಿದವರೂ ಇದ್ದಾರೆ.

ಕಾಯವನ್ನು ಅಂದರೆ ದೇಹವನ್ನು ದಂಡಿಸಿ ಮಾಡುವ ಕಸುಬು ಕಾಯಕ ಎನಿಸುತ್ತದೆ. ತನ್ನ ಆತ್ಮೋದ್ಧಾರ ಹಾಗೂ ಸಮಾಜದ ಒಳಿತಿಗಾಗಿ ಈ ಕಾಯುವನ್ನು ಮೀಸಲಿಡಬೇಕು. ಅಂದಾಗಲೇ ಜೀವನ ಸಾರ್ಥಕವೆಂಬುದನ್ನು ವಚನಕಾರರು ಸಾಬೀತು ಪಡಿಸಿದ್ದಾರೆ. 'ತನು, ಮನ ಬಳಲಿಸಿ ತಂದು ದಾಸೋಹವ ಮಾಡುವದು' ಎಂದು ಹೇಳಿದ್ದಾರೆ. ಶರಣೆ ಕಾಯಕ ತತ್ವ ಕಾಯಕ್ಕೇ ಸಂಬಂಧಿಸಿದ್ದಾಗಿದೆ.

ದೇಹವು ಪಂಚೇಂದ್ರಿಯಗಳನ್ನು ಹೊಂದಿರುವುದರಿಂದ ಮನುಷ್ಯನು ಉತ್ತಮ ಮಾರ್ಗದಲ್ಲಿ ನಡೆಯುವಲ್ಲಿ ಪಂಚೇಂದ್ರಿಯಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಮನುಷ್ಯನ ಸುಖ–ದುಃಖಗಳಿಗೂ, ಹಿರಿಮೆ–ಕಿರಿಮೆಗೂ ಅವನ ಮನಸ್ಸೇ ಕಾರಣ. ಸ್ವಾರ್ಥ, ಸಂಕುಚಿತ

ಮನೋಭಾವಕ್ಕೆ ಮನಸ್ಸೇ ಕಾರಣವಾಗಿರುವಂತೆ ನಿಸ್ವಾರ್ಥ, ತ್ಯಾಗ, ದಾನ, ಉದಾರತೆ–ಮುಂಯಾದ ವಿಶಾಲ ಮನೋಭಾವನೆಗಳಿಗೂ ಮನಸ್ಸೇ ಮೂಲವಾಗಿದೆ. ಇದನ್ನು ಅರಿತ ಶರಣರು ಮನಸ್ಸಿನ ನಿಗ್ರಹ ಅತ್ಯವಶ್ಯಕವಾದುದು ಎಂದಿದ್ದಾರೆ. ಮನಸ್ಸು ದೇಹದ ಪ್ರಮುಖ ಅಂಗವಾಗಿದೆ. ನಮ್ಮ ನಡುವಳಿಕೆಗಳು ಮನಸ್ಸಿನಲ್ಲಿರುವ ಯೋಚನೆಗಳ ಪ್ರತಿಕ್ರಿಯೆಯಾಗಿರುವುದರಿಂದ ಮನಸ್ಸನ್ನು ಹತೋಟಿಯಲ್ಲಿಡಬೇಕು.

'ಜಂತೂನಾಂ ನರಜನ್ಮ ದುರ್ಲಭ' ಎಂಬ ಶೃತಿವಾಣಿಯಂತೆ ಮನುಷ್ಯನಾಗಿ ಹುಟ್ಟುವುದೇ ದುರ್ಲಭ. ಆದ್ದರಿಂದ ಒಳ್ಳೆಯ ಕಾರ್ಯಮಾಡಿ ಮುಕ್ತಿಯನ್ನು ಪಡೆದುಕೊಳ್ಳುವುದೇ ಮುಖ್ಯ ಗುರಿಯಾಗಬೇಕು. ಇದನ್ನು ಬಿಟ್ಟು ಅನ್ನ, ವಸ್ತ್ರ, ಭೋಗಾದಿಗಳ ಸಂಪಾದನೆಗಾಗಿ ಸುಳ್ಳು, ಮೋಸ, ವಂಚನೆಗಳಲ್ಲಿ ನಿರತವಾಘಿದ್ದರೆ ಪುನಃ ಜನನ – ಮರಣವೆಂಬ ದುಃಖಗಳನ್ನನುಭವಿಸಬೇಕಾಗುತ್ತದೆ. ಆದುದರಿಂದ ಈಗ ದೊರೆತ ಅಮೂಲ್ಯ ಜನ್ಮವನ್ನು ಕೇವಲ ಲೌಕಿಕ ಸುಖಕ್ಕಾಗಿ ಉಪಯೋಗಿಸದೆ, ಕಾಲಹರಣ ಮಾಡದೆ, ಮಹಾತ್ಮರ ಸಂಗ ಮಾಡಿ, ಭಕ್ತಿ, ಜ್ಞಾನ, ವೈರಾಗ್ಯದ ದಾರಿ ಹಿಡಿದು ಸತ್ಯವನ್ನರಿತು ಸುಖಿಗಳಾಗಬೇಕೆಂಬುದೇ ಈ ಜನ್ಮದ ಉದ್ದೇಶವಾಗಬೇಕು.

ಒಟ್ಟಿನಲ್ಲಿ 'ಮಾನವ ಜನ್ಮ ದೊಡ್ಡದು, ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ' ಎಂದು ಪುರಂದರ ದಾಸರು ಹೇಳಿದಂತೆ, ಮಾನವ ಜನ್ಮ ಶ್ರೇಷ್ಠವಾದದ್ದು. ಹುಟ್ಟಿ ಬಂದ ಮೇಲೆ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬೇಕೆಂಬುದೇ ಮುಖ್ಯ ಉದ್ದೇಶವಾಗಿದೆ.

* * *

# ವಚನಗಳು

**ಸಕಲೇಶ ಮಾದರಸ**

ಕಾಯದಿಂದ ಗುರುವೆ ಕಂಡೆ,
ಕಾಯದಿಂದ ಲಿಂಗವ ಕಂಡೆ,
ಕಾಯದಿಂದ ಜಂಗಮನ ಕಂಡೆ,
ಕಾಯದಿಂದ ಸಕಳೇಶ್ವರ ದೇವರ ಪೂಜಿಸುವಲ್ಲಿ,
ಉತ್ತರ ಸಾಧಕನಾದೆಯಲ್ಲಾ ಎಲೆ ಕಾಯವೆ.

* * *

**ಅಕ್ಕಮಹಾದೇವಿ**

ಕಾಯ ಕರ್ರನೆ ಕಂದಿದರೇನಯ್ಯ?
ಕಾಯ ಮಿರ್ರನೆ ಮಿಂಚಿದರೇನಯ್ಯ?
ಅಂತರಂಗ ಶುದ್ಧವಾದ ಬಳಿಕ
ಚೆನ್ನಮಲ್ಲಿಕಾರ್ಜುನನೊಲಿದ ಕಾಯ
ಎಂತಾದಡೆಮಗೇನಯ್ಯ?

* * *

**ಬಸವಣ್ಣ**

ಎನ್ನ ಕಾಯವ ದಂಡಿಗೆಯ ಮಾಡಯ್ಯಾ ;
ಎನ್ನ ಸಿರವ ಸೋರೆಯ ಮಾಡಯ್ಯಾ ;
ಎನ್ನ ನರವ ತಂತಿಯ ಮಾಡಯ್ಯಾ ;
ಎನ್ನ ಬೆರಳ ಕಡ್ಡಿಯ ಮಾಡಯ್ಯಾ !
ಬತ್ತೀಸರಾಗವ ಹಾಡಯ್ಯಾ ; ಉರದಲೊತ್ತಿ ಬಾರಿಸು,
ಕೂಡಲಸಂಗಮದೇವಾ.

* * *

ಅತ್ತಲಿತ್ತಲು ಹೋಗದಂತೆ ಹೆಳವನ ಮಾಡಯ್ಯಾ ತಂದೆ ;
ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ;
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ ;
ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ
ಇರಿಸು ಕೂಡಲಸಂಗಮದೇವಾ.

* * *

## ಅಲ್ಲಮ ಪ್ರಭು

ಕಾಲುಗಳೆರಡೂ ಗಾಲಿ ಕಂಡಯ್ಯ !
ದೇಹವೆಂಬುದೊಂದು ತುಂಬಿದ ಬಂಡಿ ಕಂಡಯ್ಯ !
ಬಂಡಿಯ ಹೊಡೆವರೈವರು ಮಾನಿಸರು !
ಒಬ್ಬರಿಗೊಬ್ಬರು ಸಮವಿಲ್ಲಯ್ಯ !
ಅದರಿಚ್ಛೆಯನರಿದು ಹೊಡೆಯದಿದ್ದರೆ
ಅದರಚ್ಚು ಮುರಿಯಿತ್ತು ಗುಹೇಶ್ವರ.

* * *

# ಗುಡಿಯ ನೋಡಿರಣ್ಣ

**–ಸಂತ ಶಿಶುನಾಳ ಷರೀಫ**

ಗುಡಿಯ ನೋಡಿರಣ್ಣ । ದೇಹದ
ಗುಡಿಯ ನೋಡಿರಣ್ಣ ॥ಪ॥

ಗುಡಿಯ ನೋಡಿರಿದು ಪೊಡವಿಗೆ ಒಡೆಯನು
ಅಡಗಿಕೊಂಡು ಕೆಡು ಬೆಡಗಿನೊಳಿರುತಿಹ ।ಅ.ಪ.॥

ಮೂರು ಮೂಲೆ ಕಲ್ಲು ಅದರೊಳು
ಜಾರುತಿರುವ ಕಲ್ಲು
ಧೀರ ನರ್ಗುಣನು ಸಾರಸಗುಣದಲಿ
ತೋರಿ ಅಡಗಿ ತಾ ಬ್ಯಾಯ್ರಾಗಿರುತಿಹ ॥೧॥

ಆರು ಮೂರು ಕಟ್ಟಿ ಮ್ಯಾಲಕೆ
ಏರಿದವನು ಗಟ್ಟಿ
ಭೇರಿ ಕಾಳೆ ಶಂಖ
ಭಾರಿ ಸುನಾದದಿ
ಮೀರಿದಾನಂದ ತೋರಿ ಹೊಳೆಯುತಿಹ ॥೨॥

ಸಾಗುತಿಹವು ದಿವಸ ಬಹುದಿನ
ಹೋಗಿ ಮಾಡಿ ಪಾಯ್ಸ
ಯೋಗಿರಾಜ ಶಿಶುನಾಳಧೀಶ ತಾ
ನಾಗಿ ಪರಾತ್ಪರ ಬ್ರಹ್ಮರೂಪನಿಹ ॥೩॥

* * *

## ಮನೆಯ ಮಾಳಿಗಿ

**–ಸಂತ ಶಿಶುನಾಳ ಷರೀಫ**

ಸೋರುತಿಹುದು ಮನೆಯ ಮಾಳಗಿ ಅಜ್ಞಾನದಿಂದ
ಸೋರುತಿಹುದು ಮನೆಯ ಮಾಳಗಿ ॥ಪ॥

ಸೋರುತಿಹುದು ಮನೆಯ ಮಾಳಗಿ
ದಾರುಗಟ್ಟಿ ಮಾಳ್ಪರಿಲ್ಲ
ಕಾಳಕತ್ತಲೆಯಲ್ಲಿ ನಾನು
ಮೇಲಕೇರಿ ಹೋಗಲಾರೆ ॥ಅ.ಪ.॥

ಮುರುಕು ತೊಲೆಯು ಹುಳುಕ ಜಂತಿ
ಕೊರೆದು ಸರಿದು ಕೀಲ ಸಡಿಲ
ಹರುಕ ಚಪ್ಪರ ಜೇರುಗಿಂಡಿ
ಮೇಲಕೇರಿ ಹೋಗಲಾರೆ ॥೧॥

ಕರಕಿ ಹುಲ್ಲು ಕಸವು ಹತ್ತಿ
ದುರಿತಭರದಿ ಇರಬಿಮುತ್ತಿ
ಜಲದ ಭರದಿ ತಿಳಯ ಮಣ್ಣು
ಒಳಗೆ ಹೊರಗೆ ಏಕವಾಗಿ ॥೨॥

ಕಾಂತ ಕೇಳೆ ಕರುಣದಿಂದ
ಬಂತು ಕಾಣೆ ಹುಬ್ಬಿ ಮಳೆಯು
ನಿಂತು ಶಿಶುನಾಳೇಶ ತಾನು
ಎಂತೊ ಪೊರೆಯುವನೆಂದು ನಂಬಿದೆ ॥೩॥

* * *

# ಕಲ್ಲಾದಳು ಅಹಲ್ಯೆ

**–ಕಸ್ತೂರಿ ಬಾಯರಿ**

ಚಳಿಗಾಲದ ಪ್ರಾರಂಭದ ದಿನಗಳು. ದೀಪಾವಳಿ ಹಬ್ಬ ಈಗತಾನೆ ಮುಗಿದಿದೆ. ಮೂರು ಸಂಜೆಯ ಹೊತ್ತಿನಲ್ಲಿ ಅಹಲ್ಯಾ ಸಿಟಿ ಮಾರ್ಕೆಟ್ಟಿನ ಆ ಗೊಂಬೆಗಳ ಅಂಗಡಿಯ ಮುಂದೆ ನಿಂತಿದ್ದಾಳೆ. ಬೇಗನೆ ಕತ್ತಲಾಗಿದೆ. ಆ ದಿನದ ಕೆಲಸ ಮಾಡಿದ ಟೈಪ್ ಮಾಡಿದ ಕೆಲ ನೋಟ್ಸ್‌ಗಳನ್ನು ಅವಳು ಎಡಗೈಲಿ ಫೈಲ್‌ನಲ್ಲಿ ಬಿಗಿದು ಕಟ್ಟಿ ಹಿಡಿದಿದ್ದಳು. ಯಾವುದೋ ಹೇಳಲಾಗದ ಅಸಮಾಧಾನದ ಹೊಗೆ ಅವಳನ್ನು ಆವರಿಸಿತ್ತು. ಬೆಂಗಳೂರಿನ ವಾಹನ ದಟ್ಟಣೆಗೋ, ಚಳಿಗಾಲದ ಮಂಜಿಗೋ ಒಂಥರಾ ಹೊಗೆ ಹಾಕಿದ ಹಾಗೆ ಮುಸುಕಿನಲ್ಲಿ ಎಲ್ಲಾ ಬಸ್ಸುಗಳು ತಿಂಗಳು ತುಂಬಿದ ಬಸುರಿಯ ಹೆಂಗಸಿನ ಹಾಗೆ, ನಿಧಾನವಾಗಿ ಹೊಟ್ಟೆ ಉಬ್ಬಿಸಿಕೊಂಡು, ಸರ್ಕಲ್ಲಿನ ಸುತ್ತಲೂ ಹಾಯ್ದುಹೋಗುತ್ತಿದ್ದವು. ಅವಳಿಗೆ ಬೆಳಿಗ್ಗೆ ಶೇಖರ ಹೇಳಿದ ಮಾತು ಕಿವಿಯಲ್ಲಿ ಮತ್ತೆ ಪ್ರತಿಧ್ವನಿಸಿದಂತಾಯ್ತು.

"ಎಂಟು ದಿವಸವಾಯ್ತು ಹೇಳಿ ನಿನಗೆ. ಸುಮಿಗೆ ಆಫೀಸಿನಿಂದ ಬರುತ್ತಾ ಟೆಡ್ಡಿ ಬೇರ್ ತೆಗೆದುಕೊಂಡು ಬಾ. ಅಲ್ಲೇ ದಾರಿಯಲ್ಲಿ ಸಿಟಿ ಮಾರ್ಕೆಟ್ಟಿನಲ್ಲಿಳಿದು ತಂದರಾಯ್ತು. ನೀನು ನನಗೇನು ಆದಾಗ ತಂದರಾಯ್ತು, ಅಂತ ತಿಳಿದುಕೊಂಡ ಹಾಗಿದೆ. ನನಗೆ ರಾತ್ರಿಯ ಪಾಳಿ. ನೀನೋ ಏನೇನೋ ನೆಪ ಹೇಳಿ ದಿನಾಲೂ ಬರೀ ಕೈಲಿ ಮನೆಗೆ ಬರುತ್ತೀಯಾ. ಸುಮಿ ದಿನಾಲೂ ಕಣ್ಣೀರು ಹಾಕುತ್ತಾಳೆ. ಕಳ್ಳಿನಿಂದ ಬಂದರೆ ತಾನೆ ಕಕ್ಕುಲತೆ ಹುಟ್ಟೋದು! ಒಟ್ಟಾರೆ ನನ್ನ ಗ್ರಹಚಾರ."

ಅವಳಿಗೆ ಆಘಾತವಾಗಿತ್ತು. ತಾವಿಬ್ಬರೂ ಮದುವೆಗೆ ಮೊದಲು ಮಾಡಿಕೊಂಡ ಒಪ್ಪಂದವೇನು... ಯಾವ ಕಾರಣಕ್ಕೂ ಅವಳು ನೌಕರಿ ಬಿಡಬಾರದು ಮತ್ತೆ ಸುಮಿಯನ್ನು ತಪ್ಪಿಯೂ ತಾಯಿ ಇಲ್ಲದ ಮಗು ಅಂತ ಟ್ರೀಟ್ ಮಾಡಬಾರದು. ಮತ್ತೆ ಅಂತರದಲ್ಲಿ ಇನ್ನೊಂದು

ಮಗುವನ್ನು ಪಡೆಯಬೇಕು. ಮದುವೆಯ ಮೊದಲು ಶೇಖರ ಎಷ್ಟೊಂದು ಓಲೈಸಿದ್ಧ. ಇಬ್ಬರೂ ದುಡಿಯುತ್ತಿದ್ದವರಾಗಿದ್ದರಿಂದ ಆರ್ಥಿಕ ಮುಗ್ಗಟ್ಟು ಅಷ್ಟೊಂದು ಇಲ್ಲ. ಸುಮಿಯನ್ನು ಇಡೀ ದಿವಸ ನೋಡಿಕೊಳ್ಳಲು ಆಯಾಳನ್ನು ಇರಿಸಿದ್ದರು. ಅವಳ ಬೇಕು–ಬೇಡಗಳನ್ನು ಖುದ್ದಾಗಿ ತಾನೇ ಪೂರೈಸುತ್ತಿದ್ದಳು. ಇವಳ ಆರೈಕೆಯಿಂದ ಸುಮಿ ಗುಂಡು ಗುಂಡಾಗಿ ಎಲ್ಲರೂ ಪ್ರೀತಿ ಮಾಡಿ ಮುದ್ದು ಮಾಡುವಂತಹ ಮೂರೂವರೆ ವರ್ಷದ ಮಗಳಾಗಿದ್ದಾಳೆ. ಈಗ ಎರಡು ವರ್ಷಗಳ ಹಿಂದೆ ಇಂತಹ ಚಳಿಗಾಲದ ಸಂಜೆ, ಅವನ ಭೆಟ್ಟಿಯಾಗಿ ಪ್ರೀತಿ ಹುಟ್ಟಿ ಇಬ್ಬರೂ ಮದುವೆಯಾಗಿದ್ದೇವೆ. ಕೆಲವೊಂದು ನಿರ್ಧಾರಗಳನ್ನು ತೆಗೆದುಕೊಂಡಿದ್ದೇವೆ. ಶೇಖರ ಈಗೇಕೆ ಇಲ್ಲಸಲ್ಲದ ಧ್ವನಿ ಏರಿಸಿ ಮಾತನಾಡಿದ. ಅವಳ ಅಂಗಡಿ ಮುಂದೆ ಬಂದು ನಿಂತ ಕಾರಿನ ಹಾರ್ನಿಗೆ ಎಚ್ಚೆತ್ತಳು. ಮತ್ತೆ ಬದಿಗೆ ಸರಿದು ಅಂಗಡಿಯೊಳಗೆ ನಡೆದು ಹೋದಳು. ಎದುರಿಗೆ ಗಾಜಿನ ಕಪಾಟುಗಳಲಿ ಸಾವಿರಾರು ಬಣ್ಣ ಬಣ್ಣದ ಗೊಂಬೆಗಳು ಟೆಡ್ಡಿ ಬೇರ್‌ಗಳು. ಅವಳಿಗೆ ಒಮ್ಮೆಲೇ ಬಣ್ಣದ ಹೂತೋಟದಲ್ಲಿ ಇಳಿದು ಬಂದಂತಾಯ್ತು. ಸುಮಿ ಎಲ್ಲಾ ಗೊಂಬೆಗಳ ಮಧ್ಯೆ ತನ್ನ ಕೈ ಹಿಡಿದು ಸುತ್ತಿದಂತೆ, ತಾನು ಕೈಯಲ್ಲಿ ಗೊಂಬೆಗಳ ಹಿಡಿದು ಅವುಗಳ ಸೌಂದರ್ಯ ವೀಕ್ಷಿಸಿದಂತೆ, ಮನೆಯ ತುಂಬೆಲ್ಲಾ ಗೊಂಬೆಗಳನ್ನು ಒಯ್ದು ಇರಿಸಿಕೊಂಡಂತೆ, ಅವಳು ಭಾವಿಸಿಕೊಂಡಳು.

"ಎಸ್ ಮೇಡಂ, ಯಾವ ತರಹದ ಗೊಂಬೆಗಳು ಬೇಕು" ಅಂಗಡಿಯವ ಕೇಳಿದಾಗಲೇ ಅವಳ ವಾಸ್ತವಕ್ಕೆ ಇಳಿದಳು. ಮೈತುಂಬ ಕೂದಲುಗಳಿದ್ದ ಕರಡಿಗೊಂಬೆ ಪಿಂಕ್ ಕಲರಿನದ್ದು ಹಾಗು ಬ್ರೌನ್ ಕಲರಿನ ಅಲ್ಸೇಸಿಯನ್ ನಾಯಿಮರಿಗಳ ಗೊಂಬೆಗಳನ್ನು ಅವಳು ಆರಿಸಿಕೊಂಡಳು. ಈ ದಿನ ಶೇಖರ ಖಂಡಿತ ಖುಷಿಯಾಗುತ್ತಾನೆ ಅಂತ ಅವಳು ತನ್ನಲ್ಲೇ ಅಂದುಕೊಂಡಳು. ಗೊಂಬೆಗಳ ಪ್ಯಾಕ್‌ಗಳನ್ನು ಅಂಗಡಿಯ ಮುದ್ರಿತ ಕ್ಯಾರಿಬ್ಯಾಗಿನಲ್ಲಿ ಹಾಕಿಕೊಟ್ಟಾಗ, ಅವಳು ಬಿಲ್ಕೌಂಟರಿನ ಹತ್ತಿರ ಬಂದು ಪರ್ಸ್ ತೆಗೆಯಬೇಕೆಂದಾಗ ಪಕ್ಕನೆ ಅವಳ ದೃಷ್ಟಿ ಕ್ಯಾಶ್ ಕೌಂಟರಿನ ಪಕ್ಕದಲ್ಲಿದ್ದ ಗ್ಲಾಸಿನ ಕಪಾಟುಗಳ

ಮೇಲೆ ಹೋಯಿತು. ನಿಜ ಎಂತಹ ಮುದ್ದಾದ ಮೊಲದ ಮರಿಯ ಪ್ರತೀಕ. ಬಿಳಿಯ ಬಣ್ಣದಲ್ಲಿ ಹುದುಗಿದ ಅದರ ಕಣ್ಣುಗಳು ತನ್ನನ್ನೇ ನೋಡುತ್ತದೆ ಎಂದು ಅಹಲ್ಯಳಿಗೆ ಅನಿಸತೊಡಗಿತು. ಕ್ಯಾಶ್ ಕೌಂಟರಿನಲ್ಲಿದ್ದವರಿಗೆ ಆ ಮೊಲದ ಮರಿ ಬೇಕಲ್ಲ ಎಂದಳು. ಅವನು ಬೆಲ್ ಮಾಡಿ ಮೊಲದ ಮರಿಯ ಗೊಂಬೆ ತರಲು ಹೇಳಿದ. ಅವಳಿಗೆ ತಾನು ಬಾಲ್ಯದಿಂದಲೂ ಹಂಬಲಿಸುತ್ತಿದ್ದ ಅಪೂರ್ವ ವಸ್ತುಗಳು ತನಗೇ ದಕ್ಕಿದವು ಎಂಬ ಉಲ್ಲಾಸ ಎದೆಗಿಳಿಯಿತು. ಅದನ್ನು ಪ್ಯಾಕ್ ಮಾಡಿ ಕೊಡಲು ಹೇಳಿ ಬಿಲ್ ಪಾವತಿಸಿದಳು. ಯಾಕೋ ಅವಳು ಆ ಕ್ಷಣ ಹಗುರಾದಳು.

ಸಿದ್ಧಾಪುರ ತಾಲೂಕಿನ ಆ ಹಳ್ಳಿ ಆ ಕಾಡಿನ ಮಧ್ಯೆ, ಆ ಒಂಟಿ ಮನೆಯಲ್ಲಿ ಅವಳ ಬಾಲ್ಯ ಚಂಗನೆ ಜಿಗಿದು ಓಡುವ ಮೊಲಗಳ ಮರಿಗಳೊಂದಿಗೆ, ಜಿಗಿಯುತ್ತ ಬೆನ್ನಟ್ಟಿ ಓಡುತ್ತ, ಶಾಲೆಯ ಬಿಟ್ಟ ನಂತರ ಬಿಲದೊಳಗೆ ಹುಡುಕುತ್ತ ಜಾರಿತ್ತು. ಹೈಸ್ಕೂಲಿನ ಕೊನೆಯ ವರ್ಷ ಮುಗಿಯುವವರೆಗೂ, ಅಹಲ್ಯೆ ಮೊಲಗಳೊಂದಿಗೆ ಓಟದ ಸ್ಪರ್ಧೆ ನಡೆಸಿದ್ದಳು.

ಮನೆಯ ಕೆಲಸದಾಳು ಕಾಯ ಒಮ್ಮೆ ಇವಳ ಪ್ರೀತಿ ಕಂಡು, ಹಾಡಿಯಿಂದ ಎರಡು ಮೊಲದ ಮರಿಗಳನ್ನು ಸಾಹಸ ಮಾಡಿ ಹಿಡಿದು ತಂದಿದ್ದ. ಅವಳಪ್ಪಯ್ಯ ಅಂಗಳದಲ್ಲಿ ಸಾಕಿದ್ದ ಸೀಳುನಾಯಿಯ ಆ ಭಾರಿ ಬೇಟೆಯ ಸ್ವಭಾವ ಗೊತ್ತಿದ್ದ ಕಾರಣ, ಕಾಯನನ್ನು ಅಂಗಳದಿಂದಲೇ ವಾಪಸ್ಸು ಕಳುಹಿಸಿದ್ದ. ಆ ದಿನ ಅವಳು ಊಟ ಬಿಟ್ಟು ಪ್ರತಿಭಟಿಸಿದ್ದಳು. ಅವಳಿಗೆ ಮೊದಲಿನಿಂದಲೂ ಮೊಲದ ಮರಿಗಳನ್ನು ಸಾಕುವ ಹಂಬಲ. ಶಿರಸಿಯಲ್ಲಿ ಕಾಲೇಜು ಓದುತ್ತಿದ್ದಾಗಲೂ ತನ್ನ ಹಂಬಲವನ್ನು ಗೆಳತಿಯರ ಮಧ್ಯೆ ಹಂಚಿಕೊಳ್ಳುತ್ತಿದ್ದಳು. ಅವರೆಲ್ಲಾ ತಮಾಶೆ ಮಾಡಿ ನಗುತ್ತಿದ್ದರು. ಅವಳು ಕೆಲಸ ಸಿಕ್ಕಿ ಬೆಂಗಳೂರಿನ ಗಡಿಬಿಡಿಯಲ್ಲಿ ಒಂದಾದಾಗ ಸ್ವಲ್ಪ ಮಟ್ಟಿಗೆ ಮೊಲದ ಮರಿಗಳ ಸಾಕುವ ಹಂಬಲ ಮರೆತಿದ್ದಳು. ಈ ದಿನ ಪಕ್ಕನೆ ಮೊಲದ ಗೊಂಬೆ ಅವಳ ಆಶೆಯನ್ನು ಇಮ್ಮಡಿಸಿತ್ತು. ಮನೆಗೆ ಬರುವ ಹಾದಿಯಲ್ಲಿ ಅವಳು

ವಿಚಾರ ಮಾಡುತ್ತ ಬಂದಿದ್ದಳು. ಈ ಮೊಲದ ಬೊಂಬೆಯನ್ನು ಸುಮಿಯ ಕೈಗೆ ಕೊಡಬಾರದು. ಮತ್ತೆ ಇಂತಹ ಗೊಂಬೆ ಸಿಗುತ್ತದೆಯೋ ಇಲ್ಲವೋ ಇದನ್ನು ಜತನವಾಗಿ ತನ್ನೊಡಲಿನಲಿ ಈಗಾಗಲೇ ಮೂಡಿದ ಕರುಳ ಕಂದನಿಗೋಸ್ಕರ ಇಡಬೇಕು. ಶೇಖರನಿಗೆ ಕೂಡಾ ಈ ತನ್ನ ಬಾಲ್ಯದ ಹಂಬಲ ತಿಳಿಸಬಾರದು. ನನ್ನ ಬಯಕೆಗೆ ಕಂಡು ಹರ್ಷವಿದು. ಒಣಗಿ ಹೋಗಿದ್ದ ತೊರೆಯಲ್ಲಿ ಮತ್ತೆ ನೀರು ಜಿನುಗುತ್ತಿದೆ. ಹೊಟ್ಟೆಯೊಳಗಿನ ಮಗು ಖುಷಿಯಿಂದ ಒದ್ದಾಡಿದ ಅನುಭವ ಅವಳಿಗಾಯ್ತು.

ಮನೆಗೆ ಬಂದವಳೇ ಆಫೀಸಿನ ಫೈಲುಗಳನ್ನು ಮೊದಲು ಸೋಫಾದ ಮೇಲೆ ಒಗೆದು, ಅವಳು ಕೈಕಾಲಿಗೆ ನೀರು ಹಾಕದೇ ಸೀದಾ ತನ್ನ ಮಲಗುವ ಕೋಣೆಗೆ ಹೋದಳು. ಅವಳ ಮಾರುದ್ದ ಜಡೆ ಅವಳನ್ನು ಹಿಂಬಾಲಿಸಿತು. ಅವಳೊಳಗೆ ಏನೋ ಹೊಸದು ಪ್ರವೇಶವಾದ ಹಗುರತೆ. ಅದು ಅವಳ ಹೃದಯದ ಸಂವೇದನೆ ಇರಬೇಕು. ಒಮ್ಮೊಮ್ಮೆ ವೈಯಕ್ತಿಕ ಅನುಭವ, ಸಾಮೂಹಿಕ ಖುಷಿ ಕೊಡುವಂತೆ ಅವಳ ಉಲ್ಲಾಸದ ನಡುಗೆ ಇತ್ತು. ಆಯಾ ಅಮ್ಮಾ ಅವರು ಇವತ್ತು ದಣಿದು ಬಂದವರಂತೆ ಕಾಣುವುದಿಲ್ಲವಲ್ಲ ಅಂತ ಬಹಳ ಆಶ್ಚರ್ಯ ಹೊಂದಿದಳು. ಒಂದು ಅಮೂಲ್ಯ ವಜ್ರವನ್ನು ಗೌಪ್ಯವಾದ ಸ್ಥಳದಲ್ಲಿ ಇರಿಸುವಂತೆ ಅಹಲ್ಯಾ ಆ ಮೊಲದ ಗೊಂಬೆಯನ್ನು ತನ್ನ ಕಪಾಟಿನ ಬುಡದಲ್ಲಿ ಯಾರಿಗೂ ತೋರದಂತೆ ಬಚ್ಚಿಟ್ಟಳು. ಮತ್ತೆ ಆ ಸಂಜೆ ಸುಮಿಯ ಜೊತೆ ಖುಷಿಯಿಂದ ಗೊಂಬೆಗಳ ಒಡಗೂಡಿ ಆಟ ಆಡಿದಳು. ಶೇಖರ ಅಹಲ್ಯೆ ಸುಮಿಗೆ ಗೊಂಬೆಗಳನ್ನು ತಂದದ್ದನ್ನು ಕಂಡು ಮುದಗೊಂಡ. ಅಹಲ್ಯೆ ತನ್ನ ಎರಡನೆಯ ಪತ್ನಿಯಾಗಲು ಒಪ್ಪಿದ್ದು. ಮೊದಲು ಅವನಿಗೆ ಆಶ್ಚರ್ಯ ಆಗಿತ್ತು. ಪದವೀಧರೆ, ಸಾಧುಗಪ್ಪು ನೀಲ ಜಡೆ. ಬಿ.ಎಸ್‌ಸಿ. ಮಾಡಿ ಒಂದು ಕಂಪನಿಯಲ್ಲಿ ಕೆಲಸಕ್ಕೆ ಇದ್ದಾಳೆ. ವರ್ಷ ೩೦ರ ಹತ್ತಿರ ಬಂದಿದೆ. ಅವಳಪ್ಪ ಜಾತಕ ಅಂತ ತಿರುಗಾಡಿ ಕೈಚೆಲ್ಲಿ ಕುಳಿತಿದ್ದರು. ತಾನು ಪ್ರತಿಷ್ಠಿತ ಕಂಪನಿಯಲ್ಲಿ ಕೈತುಂಬ ಸಂಬಳ ಪಡೆಯುವ ಸಾಫ್ಟ್‌ವೇರ್ ಇಂಜಿನಿಯರ್. ಮೇಲಾಗಿ ಒಂದೇ ಮಗು, ಅದೂ ಹೆಣ್ಣುಮಗು ಹೊಂದಿದ್ದ ಕಾರಣ ತನ್ನ ತಡವಾದ ಮದುವೆಯ ಹಾದಿ

ಸುಗಮವಾಗಲೆಂದೇ, ಮದುವೆಗೆ ಒಪ್ಪಿದಳೇ ಅಂತ ಹಲವು ಬಾರಿ ಯೋಚಿಸಿದ್ದಾನೆ. ಮದುವೆಗೆ ಕೆಲಸ ಮುಂದುವರಿಸಿಕೊಂಡು ಹೋಗಲು ಒಪ್ಪಿಗೆ ಪಡೆದಿದ್ದಳು. ಮಗುವನ್ನು ಪ್ರೀತಿಯಿಂದ ಸಾಕುತ್ತೇನೆ ಎಂದು ಕರಾರು ಮಾಡಿಕೊಂಡಿದ್ದಳು. ಅದರಂತೆ ನಡೆದುಕೊಂಡಿದ್ದಳು. ಆದರೆ ಶೇಖರ ಇಲ್ಲದ ಆತಂಕ, ಕಳವಳ ಹೆಚ್ಚಿಸಿ, ಅವಳ ಮೇಲೆ ಅನುಮಾನ ವ್ಯಕ್ತಪಡಿಸುತ್ತಿದ್ದ. ಅವಳು ತಾಳ್ಮೆ ಕಳೆದುಕೊಂಡಿರಲಿಲ್ಲ. ಈಗ ತನ್ನ ಒಡಲಲ್ಲೂ ಚಿಗುರೊಡೆದಿದೆ. ಈ ವಿಷಯ ಶೇಖರನಿಗೆ ತಿಳಿಸಬೇಕು ಎಂಬ ಉಲ್ಲಾಸದಲ್ಲಿ ಅವಳಿದ್ದಳು.

ಆ ದಿನ ಕಂಪನಿಯ ಭಾರಿ ಕೆಲಸದ ಒತ್ತಡದಲ್ಲಿ ಶೇಖರ ತನಗೆ ಬಂದ ವಿದೇಶ ಯೋಗದ ಬಗ್ಗೆ ಅಹಲ್ಯೆಯಲ್ಲಿ ಬಹಳ ಹುರುಪಿನಿಂದ ಹೇಳುತ್ತಿದ್ದ. "ಆರು ತಿಂಗಳ ವಿದೇಶ ವಾಸ. ನೀನು ಸುಮಿಯನ್ನು ಅತ್ಯಂತ ಪ್ರೀತಿ ಕಾಳಜಿಯಿಂದ ನೋಡಿಕೊಳ್ಳಬೇಕು. ಒಂದು ಕೂದಲೆಳೆಯೂ ಕೊಂಕುವ ಹಾಗಿಲ್ಲ. ಮನೆಯಲ್ಲಿ ಎಲ್ಲಾ ವ್ಯವಸ್ಥೆಯಿಂದ ಇರಬೇಕು. ಬೇಕಾದರೆ ಆರು ತಿಂಗಳು ಪೇ ಲಾಸ್‌ನಲ್ಲಿ ರಜೆ ಹಾಕು. ನಾನು ಕಂಫರ್ಟ್ ಆಗಿ ವಿದೇಶದ ಪ್ರವಾಸ ಮುಗಿಸಬೇಕು. ಅದು ನಿನ್ನ ಜವಾಬ್ದಾರಿ." ಅಹಲ್ಯೆ ತನ್ನ ಬಸುರಿನ ಬಗ್ಗೆ ಹೇಳಿದಳು. ಅವನು ಒಮ್ಮೆಲೇ ವ್ಯಗ್ರನಾದ. "ಅದರ ರಗಳೆ ಈಗೇಕೆ! ನನಗೆ ವಿದೇಶ ಪ್ರವಾಸದ ಯೋಗ ಕೂಡಿ ಬಂದಿದೆ. ಸುಮೀನ ಬಿಟ್ಟು ನಾನು ಹೇಗೆ ಹೋಗೋದು ಅಂತ ಗಲಿಬಿಲಿಗೊಂಡಾಗ, ನಿನ್ನದು ಎಂತಹದು ಅಡೆತಡೆ! ನಾಳೇನೇ ಹೋಗಿ ಅಬಾರ್ಶನ್ ಮಾಡಿಸಿಕೊಂಡು ಬಾ. ಮಕ್ಕಳೇನು ಬೇಕಾದಾಗ ಹುಟ್ಟಿಸಬಹುದು. ಈಗ ನಮಗೆ ಸುಮಿ ಇದ್ದಾಳಲ್ಲ. ಅದು ಈಗ ನಮ್ಮ ಮನೆಯಲ್ಲಿ ಬರುವುದು ಬೇಡ. ನೂರೆಂಟು ತಾಪತ್ರಯಗಳು ಹುಟ್ಟುತ್ತದೆ." ಅಹಲ್ಯೆ ದಂಗಾದಳು. ಎಷ್ಟೊಂದು ಹಿತ ಕೊಡುವ ತಾಯ್ತನ ಹೊರಲು ಅವಳು ಕನಸುಗಳನ್ನು ಅಣಿಮಾಡಿಕೊಂಡಿದ್ದಳು. ಶೇಖರ ಬಿಲ್‌ಕುಲ್ ಮಗು ಬೇಡ ಎನ್ನುತ್ತಿದ್ದಾನೆ. ಇದೇ ಏನು ನಾನು ಬಯಸಿದ ಸುಖ. ಅವಳ ಗಂಟಲಿಗೆ ಬಂಡೇಕಲ್ಲು ತುರುಕಿದಂತಾಯ್ತು. ನಿನ್ನೆ ಮೊಲದ ಗೊಂಬೆ ತೆಗೆದುಕೊಂಡಾಗ, ತನ್ನಲ್ಲಿ ಹುಟ್ಟಿದ ಕಂಪನಿಗಳು, ಚಿಗುರುಗಳು,

ಉಲ್ಲಾಸದ ಹನಿಗಳು ಎಲ್ಲವೂ ಅಗ್ನಿ ಕುಂಡಕ್ಕೆ ಹವಿಸ್ಸು ಅರ್ಪಿಸಿದಂತೆ ಅವಳು ಖಾಲಿಯಾದಳು. ಶೇಖರ ಈ ಮಟ್ಟದ ಯೋಚನೆ ಮಾಡುತ್ತಾನೆಂದು ಅವಳು ಕನಸಿನಲ್ಲಿಯೂ ಎಣಿಸಿರಲಿಲ್ಲ. ಅಂದರೆ ಶೇಖರನಿಗೆ ನಾನು ಸುಮಿಯನ್ನು ನೋಡಿಕೊಳ್ಳುವ ಒಂದು ಅನಿವಾರ್ಯ ಆಯ್ಕೆ ಮಾತ್ರ. ಇಲ್ಲಿ ನನ್ನದಾವುದೂ ನನ್ನದಲ್ಲ. ಎಲ್ಲವೂ ಅವನ ಆದೇಶದಂತೆ ನಡೆಯಬೇಕು. ಈ ಪೂರಕವಾಗಿ ಬದುಕುವುದು ಅವಳಿಗೆ ಸಾವಿರ ಸಾವಿರ ಕುದಿಯುವ ನೀರಿನ ತುಂಬಿದ ಕೊಡಗಳೆಲ್ಲವನ್ನೂ ಒಮ್ಮೆಲೇ ಮೈಯಲ್ಲಾ ಸುರಿದಂತಾಯ್ತು. ಅವಳು ಬೆಂದು ಬಸವಳಿದಳು. ಪಾಪ ಯಕ್ಷಪ್ರಶ್ನೆಯಾಗಿ ಎದುರು ನಿಂತು ಕೆಣಕಿದಂತಾಯ್ತು. ಅವಳನ್ನೆತ್ತಿ ಬಹು ಆಳದ ಕೊಳ್ಳದಲ್ಲಿ ನೂಕಿದಂತಾಯ್ತು. ಅವಳ ಕಾಮನೆ ವಾಸನೆ ಎಲ್ಲವೂ ಚೂರು ಚೂರಾಗಿ ಛಿದ್ರ ವಿಛಿದ್ರವಾದವು. ಅವಳು ಬಹಳ ನೊಂದು ಕೊಂಡಳು. ಹೃದಯ ದುಃಖದಿಂದ ತುಂಬಿಕೊಂಡು ವಿಲವಿಲ ಒದ್ದಾಡಿದಳು. ಬೇಗುದಿ ಸತತವಾಗಿ ಎದೆಯೊಳಗೆ ಇಳಿದು ಪರಿ ಪರಿಯಾಗಿ ಅಪರಿಮಿತ ರೂಪದಲ್ಲಿ ಅವಳು ಬೇಯತೊಡಗಿದಳು. ಅವಳು ಶೇಖರನಿಗೆ ಮೆಲ್ಲನೆ ಹೇಳಿದಳು.

“ನೀವೀಗ ಮನೆಯ ಎಲ್ಲಾ ಬಾಗಿಲು ಕಿಟಕಿ ಸಂದಿಗೊಂದಿ ಎಲ್ಲವನ್ನೂ ಒಂದೇ ಮಾತಿನಲ್ಲಿ ಮುಚ್ಚಿ ಹಾಕಿಬಿಟ್ಟಿರಿ. ನಮ್ಮನ್ನು ಯಾರೂ ನೋಡಬಾರದೆಂದು ಮತ್ತೆ ಬೇರೆ ಯಾರ ದೃಷ್ಟಿಯೂ ನೀವು ಸುಮಿ ನಾನು ಮನೆ ಒಳಗೆ ಬರದಂತೆ ತಡೆಗೋಡೆ ಕಟ್ಟುತ್ತಿದ್ದೀರಿ. ಬದುಕು ನಿಂತ ನೀರಲ್ಲವಲ್ಲ. ಅದು ಸದಾ ಹರಿಯುವ ನದಿ ಹೊಸ ಹರಿವು ಹೊಸ ತಿರುವು. ನೋಡಿ ಶೇಖರ ಒಡಲೊಳಗಿಂದ ನಮ್ಮನ್ನಾರೋ ದಿಟ್ಟಿಸುತ್ತಿದ್ದಾರೆ ನನಗೆ ಭಾಸವಾಗುತ್ತಿದೆ. ಕಣ್ಣು ತೆರೆದು ನಮ್ಮನ್ನು ದಿಟ್ಟಿಸಿ ಪ್ರಶ್ನೆ ಕೇಳುತ್ತಿದ್ದಾರೆ. ನಾಳೆ ನಾವು ಮಾಡುವ ತೀರ್ಮಾನ ಗುನ್ನೆಯಾಗಿ ನಮ್ಮನ್ನು ಪಶ್ಚಾತಾಪದಲ್ಲಿ ಸುಡುತ್ತದೆ. ನನಗೆ ತಾಯ್ತನದ ತೀವ್ರ ಹಂಬಲವಿದೆ. ಈಗಾಗಲೇ ಹತ್ತಿರ ರಿಸ್ಕ್ ವಯಸ್ಸಿನಲ್ಲಿ ನಾನಿದ್ದೇನೆ. ಮುಂದೂಡಿದರೆ ಮತ್ತೆ ಚಿಗುರು ಹುಟ್ಟುವುದು ಇಲ್ಲವೋ ಯಾರಿಗೆ ಗೊತ್ತು. ನೀವು ವಿದೇಶಕ್ಕೆ ಹೋಗುವ ಇಲ್ಲಿ ಸುಮಿಯನ್ನು

ನೋಡಿಕೊಳ್ಳುವ ಮತ್ತೆ ನೀವು ವಿದೇಶದಿಂದ ವಾಪಸ್ಸು ಬರುವ ಹೊತ್ತಿಗೆ ಮತ್ತೆ ಹೊಸ ಮಗುವಿನ ತಂದೆ ಆಗುತ್ತೀರಿ, ಅದರ ಸುಖ ಎಲ್ಲವನ್ನೂ ನಾನು ನಿಭಾಯಿಸುತ್ತೇನೆ. ಮಗು ಬೇಡ ಅಂತ ಮಾತ್ರ ಹೇಳಬೇಡಿ." "ಅದೆಲ್ಲಾ ಸಾಧ್ಯವಿಲ್ಲ. ನೀನು ನಿನ್ನ ಕರ್ತವ್ಯ ಹಾಗೂ ಸುಮಿಯಿಂದ ವಿಮುಖ ಇಷ್ಟು ಬೇಗ ಆಗುವುದು ನನಗಿಷ್ಟವಿಲ್ಲ. ನನಗೆ ಬೇಡಾಗಿದ್ದು ನಿನಗೂ ಬೇಡ. ಸುಮಿಗೆ ಸರಿಯಾದ ಕಾಳಜಿ ಸಿಗದಿದ್ದರೆ ಅವಳ ಬಾಲ್ಯ ಹಾಳಾಗುತ್ತದೆ. ನನಗೆ ಸುಮಿ ಬಹಳ ಮುಖ್ಯ. ನಿನ್ನ ಹೊಟ್ಟೇಲಿ ಹುಟ್ಟುವ ಮಗುವಿಗಿಂತ ನೀನು ಬಸಿರು ಬಾಣಂತನ ಸಣ್ಣ ಮಗು ಕೆಲಸ ಅಂತ ನನ್ನ ಮಗಳನ್ನು ಆತಂಕದಲ್ಲಿ ತಳ್ಳುತ್ತೀಯಾ ಮೇಲಾಗಿ ನನಗೆ ನನ್ನ ಕರಿಯರ್ ಮುಖ್ಯ. ನಿನ್ನದೆಲ್ಲಾ ರಗಳೆ ಸಹಿಸಲು ನಾನು ನಿನ್ನ ಮದುವೆ ಆಗಿಲ್ಲ. ಸುಮಿಯ ಜೀವನ ಮುಖ್ಯ. ನೀನು ಸರಳವಾಗಿ ಹೋಗಿ ನಾಳೆಯೇ ಅಬಾರ್ಶನ್ ಮಾಡಿಸಿಕೋ. ಲೇಡಿ ಡಾಕ್ಟರ್‌ಗೆ ಫೋನ್ ಮಾಡಿ ತಿಳಿಸುತ್ತೇನೆ." ಶೇಖರ ಬಾಂಬ್ ಹಾಕಿದ್ದ. ಅವಳು ಚೂರಾದಳು.

ಮರುದಿನ ಆಫೀಸಿನಲ್ಲಿ ಅವಳಿಗೆ ನೆಟ್ಟಗೆ ಕುಳಿತು ಕೆಲಸ ಮಾಡಲಾಗಲಿಲ್ಲ. ಮನೆಯಲ್ಲಿ ಅತ್ತಿಗೆಯ ಹಿರಿತನ. ವಯಸ್ಸಾದ ತಾಯಿಗೆ ತಿಳಿಸಿ ಅವಳಿಗೆ ತಲೆಬಿಸಿ ಮಾಡುವುದರಲ್ಲಿ ಯಾವ ಅರ್ಥವಿಲ್ಲ. ಅಮ್ಮ ಖಂಡಿತ ಗರ್ಭಪಾತಕ್ಕೆ ಒಪ್ಪಲಾರಳು. ಅಹಲ್ಯೆಗೆ ಈ ಬದುಕಿನ ಹೆಣಿಕೆಗೆ ಎಲ್ಲೋ ಎಳೆ ತಪ್ಪಿದೆ ಅಂತ ತೀವ್ರವಾಗಿ ಅನಿಸತೊಡಗಿತು. ಆರ್ದ್ರತೆ ಇಲ್ಲದ ಶೇಖರ ಅವಳ ಒಂದು ಭಾವಕ್ಕೂ ಸ್ಪಂದಿಸದವನಾಗಿದ್ದ. ಮದುವೆಗೆ ಮುಂಚೆ, ಅವನೊಂದು ಸೆಕ್ಯೂರಿಟಿ ಕೊಡುವ ಗಂಡಸು, ಕೈತುಂಬಾ ಸಂಬಳ ಮೇಲಾಗಿ ಸಂಸಾರದಲ್ಲಿ ನೊಂದ ಒಂದು ಮಗುವಿನ ತಂದೆ. ತನ್ನ ಬದುಕು ತಿಳುವಳಿಕೆಯ ಪಾತಳಿಯ ಮೇಲೆ ಚಿಗುರಬಹುದು. ತಾನು ತುಂಬ ಘನವೆತ್ತ ಮತ್ತು ಮರ್ಯಾದೆಯ ಬದುಕು ಮಾಡಬೇಕು. ಒಂದು ವಿಶಿಷ್ಟ ಹೆಣ್ಣು ಮಗುವಿನ ತಾಯಾಗಬೇಕು ಎಂಬೆಲ್ಲಾ ಕನಸು ಕಂಡಿದ್ದಳು. ತಾನು ಬಸುರಿ ಎಂಬ ವಿಷಯ ತಿಳಿದೊಡನೆ, ದಡಕ್ಕನೆ ಒಂದೇ ಮಾತಿಗೆ ಅಬಾರ್ಶನ್ ಮಾಡಿಸಿಕೋ ಅಂತ ಹೇಳಿದನಲ್ಲ. ಆ

ಶೇಖರ ತಾಯ್ತನ ಒಂದು ಭಾವ ಕೂಡಾ ಹೇಳಿಕೊಳ್ಳಲು ತನಗೆ ಬಿಡಲಿಲ್ಲವಲ್ಲ. ಅವಳಿಗೆ ಆಫೀಸು, ಬೆಂಗಳೂರು ಎಲ್ಲವೂ ಭೂಮಿಯೊಳಗೆ ಕುಸಿದುಹೋದಂತೆ ಅನಿಸಿತು. ಸಿಡಿಲ ತಲೆ ಉರಿಯುವ ಎದೆ ಹೊತ್ತು ಅವಳು ಎಮ್.ಡಿ.ಯ ರೂಮ್ ಹೊಕ್ಕಳು. "ಸರ್ ನನಗೆ ಮಾರ್ನಿಂಗ್ ಸಿಕ್‌ನೆಸ್ ಬಿಡಲಾರದೇ ವಾಂತಿಯಾಗುತ್ತಿದೆ. ಕುರ್ಚಿ ಮೇಲೆ ಕುಳಿತುಕೊಳ್ಳಲಾಗದಷ್ಟು ಸುಸ್ತು. ದಯವಿಟ್ಟು ನಾಲ್ಕು ದಿವಸದ ರಜೆ ಸ್ಯಾಂಕ್ಷನ್ ಮಾಡ್ತಿರಾ? ಕಂಪನಿಯ ಕೆಲಸವನ್ನು ಸಾಧ್ಯವಾದರೆ ಮನೆಯಲ್ಲಿ ಮುಗಿಸಿ ತರುತ್ತೇನೆ. ದಯವಿಟ್ಟು ಲೀವ್ ಕೊಡಿ ಸರ್." ಅಷ್ಟು ಹೇಳುವಷ್ಟರಲ್ಲಿ ಅವಳಿಗೆ ದುಃಖ ಒತ್ತರಿಸಿ ಬಂದು, ತಾನು ದಿಕ್ಕೇಡಿ ಎಂಬ ಭಾವನೆ ಬಂದು, ಎಂ.ಡಿ.ಯ ಮುಂದೆ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. "ಟೇಕ್ ಯುವರ್ ಸೀಟ್ ಪ್ಲೀಸ್" ಎಂ.ಡಿ. ಹೇಳಿದಾಗ ಅವಳು ದುಃಖದ ಭಾರವನ್ನೂ ಕಡಿಮೆ ಮಾಡಿಕೊಳ್ಳಲು ಕುರ್ಚಿಯ ಮೇಲೆ ಕುಳಿತಳು. ಬಹಳ ಸಮಯದ ನಂತರ ಅವಳು ತನ್ನನ್ನು ತಾನೇ ಸಂಭಾಳಿಸಿಕೊಂಡಳು.

ಮನೆಗೆ ಬಂದಾಗ ಈ ಮನೆ ತನ್ನದಲ್ಲ. ನಾನೊಂದು ಮುರಿದ ಮನೆಯಲ್ಲಿ ಮುದುರಿ ಕುಳಿತ ಗುಬ್ಬಿಯ ಹಾಗೆ, ಅವಳಿಗೆ ಮಂಕುತನ ಆವರಿಸಿತು. ಶೇಖರ ತುಂಬಾ ಕ್ರೂರವಾಗಿ ತನ್ನೊಡನೆ ನಡೆದುಕೊಂಡ. ಅವನಿಗೆ ತನ್ನ ಕರಿಯರ್, ವಿದೇಶಯಾತ್ರೆ, ಮಗಳು ಮಾತ್ರ ಮುಖ್ಯ. ತನ್ನ ಯಾವ ಭಾವಗಳನ್ನೂ ಅವ ಮುಕ್ಕಾಗಿಸಿಕೊಳ್ಳಲಾರ. ಎಂತಹ ಸ್ವಾರ್ಥಿ ಅವನು. ಅಹಲ್ಯೆಗೆ ಮೊದಲ ಬಾರಿ ದಾಂಪತ್ಯದಲ್ಲಿ ಬರೀ ಬಿರುಕು ತುಂಬಿದ ಗೆರೆಗಳೇ ಕಂಡುಬಂದವು. ತನ್ನ ಸುತ್ತಲಿನ ಜಗತ್ತು ಬರೀ ಶೂನ್ಯ. ಇಲ್ಲಿ ಯಾರಿಗೂ ಯಾವ ಸಂಬಂಧವೂ ಇಲ್ಲ ಅಂತ ಅನಿಸತೊಡಗಿತು. ಮನೆಯಲ್ಲಿ ರಜೆ ಹಾಕಿ ಇದ್ದವಳಾದರೂ ಅವಳಿಗೆ ಸುಮಿಯನ್ನೂ ಮುದ್ದು ಮಾಡಲಾಗಲಿಲ್ಲ. ಹೊಟ್ಟೆಯಲ್ಲಿ ಮುಲುಕಾಡುವ ವಸ್ತುವಿನ ಮೇಲೆ ಅವಳಿಗೆ ತಿರಸ್ಕಾರ, ಸಿಟ್ಟು ಎರಡೂ ಏಕಕಾಲಕ್ಕೆ ಹುಟ್ಟಿಕೊಂಡವು. ಅವಳು ಸುಮ್ಮನೆ ಛಾವಣಿ ನೋಡುತ್ತ ನಾಲ್ಕೂ ರಜೆಯ ದಿನಗಳನ್ನು ಕಳೆದಳು.

ಈ ಮಧ್ಯೆ ಶೇಖರ ತನ್ನ ಪರದೇಶಯಾತ್ರೆಯ ತಯಾರಿಯಲ್ಲಿದ್ದ. ಸುಮಿ ಅಪ್ಪ ದೂರ ಹೋಗುವುದನ್ನು ಅರ್ಥ ಮಾಡಿಕೊಳ್ಳಲಾರದ ವಯಸ್ಸಿನಲ್ಲಿದ್ದಳು. ಶೇಖರ ಕಂಪನಿಯಿಂದ ರಾತ್ರಿ ೧೨ ಗಂಟೆಗೆ ಬಂದರೂ ಈ ದಿನ ಡಾಕ್ಟರ್ ಹತ್ತಿರ ಹೋಗಿದ್ದೆಯಾ ಎಂಬ ಪ್ರಶ್ನೆಯನ್ನು ಕೇಳಲು ಮರೆಯಲಿಲ್ಲ. ಅಹಲ್ಯೆ ಹಾರಿಕೆಯ ಉತ್ತರಗಳನ್ನು ಕೊಡುತ್ತಿದ್ದಳು. ಈ ದಿನ ಆಫೀಸಿನಲ್ಲಿ ಹೊತ್ತಾಯ್ತು. ಈ ದಿನ ಡಾಕ್ಟರ್ ಕ್ಲಿನಿಕ್‌ಗೆ ಬರಲಿಲ್ಲ. ಈವಾಗ ಮೂಡ್ ಸರಿಯಿಲ್ಲ ಅಂತ ಏನೋ ನೆಪಗಳನ್ನು ಹುಟ್ಟು ಹಾಕಿದಳು. ಅವಳಿಗೆ ಆ ಮಹಾನಗರದಲ್ಲಿ ತನ್ನವರೆಂಬುದು ಯಾರೂ ಇಲ್ಲ. ತನ್ನ ತಾಯ್ತನ ಬಹಳ ಆತಂಕದಲ್ಲಿದೆ. ಅಪ್ಪ, ಅಮ್ಮ, ಅಣ್ಣಂದಿರು ಶೇಖರನ ಮುಂದೆ ನಿಂತು ಜೋರು ಬಾಯಿ ಮಾಡಲಾರರು. ಇನ್ನೂ ತಾನೇ ಒಂದು ವಿಷಯಕ್ಕೆ ಗಟ್ಟಿಯಾಗಿ ಬಡಿದಾಡಬೇಕು. ಈ ಬಸಿರನ್ನು ತೆಗೆಸಿದರೆ ಮುಂದೆ ಗರ್ಭ ನಿಲ್ಲದಿದ್ದರೆ ಹೇಗೆ? ಗಂಡಸರಿಗೆ ಈ ವಿಷಯ ಬೇಗನೆ ತಲೆಯೊಳಗೆ ಹೋಗಲಾರದು. ಆದರೆ ಶೇಖರ ಹಟಮಾರಿ. ಅವನ ಒತ್ತಾಯಕ್ಕೆ ಎಲ್ಲಿ ತನ್ನ ಮನಸ್ಸು ದೇಹ ಘಾಸಿಗೊಳ್ಳುತ್ತದೆಯೋ! ಅಹಲ್ಯಾ ವಿಚಾರ ಮಾಡಿ ಮಾಡಿ ಬಳಲಿದಳು. ಆ ದಿನ ಭಾನುವಾರ. ಸುಮಿಗೆ ಎಣ್ಣೆನೀರು ಹಾಕಿ ಅಹಲ್ಯೆ ತಾನೂ ಎಣ್ಣೆಯನ್ನು ತಲೆತುಂಬ ಮೆತ್ತಿಕೊಂಡಿದ್ದಳು. ಬೆಳಗಿನ ತಿಂಡಿ ಮುಗಿದಿತ್ತು. ಅವಳು ಇನ್ನೇನು ಸ್ನಾನಕ್ಕೆ ಹೊರಡುವ ಹೊತ್ತು. ಶೇಖರ ಅಡಿಗೆ ಮನೆಗೆ ಬಂದವನೇ "ಬೇಗನೆ ತಯಾರಾಗಿರು ಡಾಕ್ಟರ್ ಬಳಿ ಹೋಗೋಣ. ಈ ದಿನ ಡಾಕ್ಟರರ ಅಪಾಯಿಂಟ್ಮೆಂಟ್ ತೆಗೆದು ಕೊಂಡಿದ್ದೇನೆ. ಇನ್ನೂ ಕೇವಲ ಒಂದು ವಾರ ಮಾತ್ರ ಕಾಲಾವಕಾಶ, ನನ್ನ ವಿದೇಶ ಪ್ರಯಾಣಕ್ಕೆ ಎಲ್ಲಾ ಬಟ್ಟೆಬರೆ ಪ್ಯಾಕಿಂಗ್ ಆಗಬೇಕು. ಆಫೀಸಿನಲ್ಲಿ ರಜೆ ಮಂಜೂರು ಮಾಡಿಸಿಕೊಂಡೆಯೋ ಹೇಗೆ?" ಅವನ ಮಾತುಗಳ ಎಡೆಯಲ್ಲಿ ಅವಳ ಧ್ವನಿಯ ಒಂದು ಎಳೆಯೂ ಹಾಯಲಿಲ್ಲ. ಅವಳಿಗೆ ತನ್ನ ಈ ತಾಯ್ತನ ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕಿತ್ತು. ಅವಳು ಮೆಲ್ಲನೆ ಹೇಳಿದಳು.

"ನೋಡಿ ಶೇಖರ ನನಗಾಗಲೇ ೩೨ ವರ್ಷ ಸದ್ಯ ಗರ್ಭ ನಿಂತಿದೆ.

ಮೊದಲ ಗರ್ಭ ತೆಗಿಸಬಾರದು ಅಂತ ಅಮ್ಮ ಹೇಳುತ್ತಿದ್ದಳು. ಆಫೀಸಿಗೆ ಬೇಕಾದರೆ ರಜೆ ಹಾಕಿ ಮನೇಲಿ ಇರ್‍ತೀನಿ. ಆದರೆ ಗರ್ಭ ತೆಗೆಸಿಕೊಳ್ಳುವುದು ಯಾಕೋ ನನಗೆ ಸರಿ ಕಾಣುತ್ತಿಲ್ಲ. ನಮಗೂ ಒಂದು ಮಗುವಾಗಲಿ. ಸುಮಿ ಮತ್ತು ಇನ್ನೊಂದು ಎರಡು ಕಣ್ಣುಗಳ ಹಾಗೆ ಇರಲಿ. ಯಾವುದು ಸರಿ ಅಂತ ವಿಚಾರ ಮಾಡೋ ಶಕ್ತಿ ನಮ್ಮಿಬ್ಬರಿಗಿದೆಯಲ್ಲ." ಅವಳಿಗೆ ತಿಳಿಯದ ಹಾಗೆ ಅವಳ ಧ್ವನಿಯಲ್ಲಿ ಬಿಗಿ ಕಾಣಿಸಿಕೊಂಡಿತು.

ಶೇಖರ ಉಗ್ರನಾದ. "ಅದೆಲ್ಲ ನಂಗೊತ್ತಿಲ್ಲ. ಈ ಮಗು ಬೇಡ ಅಂದರೆ ಬೇಡ. ಬೇಗ ಹೊರಡು. ಡಾಕ್ಟರ್ ವೇಳೆ ಕೊಟ್ಟಿದ್ದಾರೆ. ನಾನು ವಿದೇಶದಿಂದ ಬರುವುದು ಬಿಡುವುದು ಅಲ್ಲಿಗೆ ಹೋದ ಮೇಲೆ ನಿರ್ಧಾರವಾಗುತ್ತದೆ. ಬಸಿರು, ಬಾಣಂತನ ಅಂತ ನೀನು ಓಡಾಡಿದರೆ ನನ್ನ ಕರಿಯರ್ ಗತಿ ಏನು! ನಾನು ಹೇಳಿದಷ್ಟು ಕೇಳು. ಸದ್ಯ ಯಾವುದರ ಜಂಜಡ ಬೇಡ. ನೀನು ಸುಮಿಯನ್ನು ಚೆನ್ನಾಗಿ ನೋಡಿಕೊಂಡರೆ ಸಾಕು. ಬೇಗ ಸ್ನಾನ ಮಾಡಿ ಬಾ ನಾನು ರೆಡಿಯಾಗುತ್ತೇನೆ."

ಬಚ್ಚಲು ಮನೆಯೊಳಗೆ ಹೋದ ಅಹಲ್ಯೆಗೆ ದುಃಖ ಉಮ್ಮಳಿಸಿ ಬಂತು. ತಲೆಯ ಮೇಲೆ ಚೊಂಬಿನಿಂದ ನೀರು ಸುರಿದೇ ಸುರಿದು ಕೊಂಡಳು. ಸ್ವಲ್ಪ ಉಬ್ಬಿದ ಹೊಟ್ಟೆಯ ಮೇಲೆ ಮೆಲ್ಲನೆ ಕೈಯಾಡಿಸಿ ಕೊಂಡಳು. ಅವಳಿಗೆ ಇಡೀ ಮನೆ ಖಾಲಿ ಆದಂತೆ ಅನಿಸತೊಡಗಿತು. ನೀರಿನ ಹನಿಗಳೊಡನೆ ಎಷ್ಟೋ ಲಾಠಿಗಳೂ ಹರಿದಾಡಿದವು. ಎಷ್ಟೋ ಬಿಗಿದ ಮುಷ್ಟಿಗಳು ಅವಳ ಉಬ್ಬಿದ ಹೊಟ್ಟೆಯನ್ನು ಗುದ್ದಿದವು. ಶೇಖರನ ಮಾತುಗಳು ಗಗನವನ್ನು ಭೇದಿಸುವ ಘೋಷಣೆ ಅನಿಸಿತು. ಈ ದಿನ ನನ್ನತನವೆಲ್ಲಾ ಲೂಟಿಯಾಗುತ್ತದೆ ಎಂದು ಅವಳು ಅಲ್ಲಿಯೇ ಹೆದರಿ ಕುಸಿದಳು. ಸ್ನಾನದ ಮನೆಯಿಂದ ಬದಲಾದ ಮುಖ, ಶೂನ್ಯವಾದ ಕಣ್ಣೋಟ ಹೊತ್ತು ಅವಳು ಹೊರಗೆ ಬಂದಳು. ಅವ ನನ್ನನ್ನು ಬಿಡುವುದೇ ಇಲ್ಲ. ದಬ್ಬಾಳಿಕೆಯಿಂದ ತಾನೆಣಿಸಿದಂತೆ ಮಾಡುತ್ತಾನೆ. ಯಾವ ಕರ್ಮಕ್ಕೆ ಇವನನ್ನು ಮದುವೆ ಆದೆ? ಊಹುಂ ತನ್ನೊಳಗೆ ಏನೋ ಆಗುತ್ತಿರುವಂತೆ ಅವಳು ಅಂತರ್ಮುಖಿಯಾಗಿದ್ದಳು. ಒಂದು

ಗಳಿಗೆ ಅವಳು ಕಲ್ಲಿನ ವಿಗ್ರಹದಂತೆ ಹಾಲಿನಲ್ಲಿ ನಿಂತಳು. ನಂತರ ನಿಧಾನವಾಗಿ ರೂಮಿಗೆ ಹೋಗಿ ಸೀರೆ ಬದಲಿಸಿ ಬಂದಳು. ಶೇಖರನೊಡನೆ ಒಂದೂ ಮಾತನಾಡುವುದು ಅವಳಿಗೆ ಬೇಡವಾಗಿತ್ತು. ಇದು ಅವನೊಂದಿಗೆ ಎಂದೂ ಮುಗಿಯದೆ ಮೌನ. ಆ ಕ್ಷಣ ಅವಳಿಗೆ ಮೌನ ಹೆಚ್ಚು ಒಳ್ಳೆಯದೆನಿಸಿತು. ಅವಳೊಳಗೆ ಮೈತುಂಬ ಅಮಂಗಳ ಭಾವ ಆವರಿಸಿತ್ತು. ಅವಳಿಗೆ ಸಮಾಧಾನವಿರಲಿಲ್ಲ. ಮೆಲ್ಲನೆ ದ್ವೇಷದ ಒಂದು ಕಿಡಿ ಅವಳ ಮನಸ್ಸಿನೊಳಗೆ ಸುಳಿಯಿತು. ಅವಳ ಅಂತರಂಗ ಕುಸಿಯಿತು. ಅವಳು ಕೋಪಗೊಳ್ಳಲಿಲ್ಲ. ನಿಶ್ಚಯಿಸಿದಳು.

ನರ್ಸಿಂಗ್ ಹೋಂನ ಬಾಗಿಲನ್ನು ವಧಾಸ್ಥಳವನ್ನು ಪ್ರವೇಶಿಸುವಂತೆ ಅವಳು ಅವನೊಟ್ಟಿಗೆ ಹೊಕ್ಕಳು. ಅವನ ಹೆಜ್ಜೆಗಳು ಬರೀ ಅಹಂಕಾರ ದಿಂದ ತುಂಬಿದೆ. ಅವನೊಬ್ಬ ಸ್ವಾರ್ಥಿ, ಮದುವೆ ಆಗಿ ಒಂದು ಹೆಣ್ಣಿನ ಮನಸ್ಸನ್ನು ಅರ್ಥಮಾಡಿಕೊಳ್ಳದ ತಿಳಿಗೇಡಿ, ಅವನ ಮೊದಲ ಹೆಂಡತಿ ಇವನನ್ನು ಹೇಗೆ ಅರ್ಥೈಸಿದ್ದಳೋ, ಹೆರಿಗೆಯಲ್ಲಿ ಸತ್ತಳೆಂಬ ಸಮಾಚಾರ ಮಾತ್ರ ಅವಳಿಗೆ ಗೊತ್ತಾಗಿತ್ತು. ಇಂದು ಯಾರ ಭಾವನೆಗಳಿಗೂ ಸ್ಪಂದಿಸದ ಕಲ್ಲು ಹೃದಯ. ಅವಳು ಹಣ್ಣಾದ ವಿಚಾರಗಳಿಂದ ಮತ್ತಷ್ಟು ಕುಗ್ಗಿದಳು. ಡಾಕ್ಟರ್ ಕೇಳಿದ ಎಲ್ಲಾ ಪ್ರಶ್ನೆಗಳಿಗೂ ತನ್ನ ಒಪ್ಪಿಗೆ ಇದೆ ಎಂದು ಪ್ರತಿಕ್ರಿಯಿಸಿದ್ದಳು. ಅವಳನ್ನು ಓ.ಟಿ.ಗೆ ಕರೆದುಕೊಂಡು ಹೋದಾಗ ಅವಳ ಮೈ ಜುಮ್ಮೆಂದಿತು. ಕಾಲುಗಳು ಏಕಕಾಲಕ್ಕೆ ಭಾರವೂ ಜಡವೂ ಹೊಂದಿದವು. ಏಕಕಾಲಕ್ಕೆ ಎರಡು ಆತ್ಮಗಳ ಕುತ್ತಿಗೆ ಹಿಸುಕುತ್ತಿರುವ ಅನುಭವ ಅವಳಿಗಾಯಿತು. ಅವಳ ಅರೆಪ್ರಜ್ಞೆ ಮನಸ್ಸಿಗೆ ಮುದ್ದಾದ ಮಗು ಮೊಲದ ಗೊಂಬೆಯೊಡನೆ ಹರಿದಾಡುತ್ತ ಆಟವಾಡುವ ದೃಶ್ಯ ಕಣ್ಣ ಮುಂದೆ ಬಂದಂತಾಗಿ ಅವಳು ಉಮ್ಮಳಿಸಿದಳು. ಅಮ್ಮ ಎಂಬ ನರಳಿಕೆ ಅವಳ ಬಾಯಿಂದ ಹೊರಬಿದ್ದಿತ್ತು. ಎರಡೂ ಕಣ್ಣಲ್ಲಿ ನೀರಿನ ಹನಿಗಳು ಜಾರಿ ಬೀಳುತ್ತಿದ್ದವು. ಮನೆಗೆ ಬಂದಾಗ ಅಹಲ್ಯೆ ಹೊಟ್ಟೆ ತೊಳೆಸಿದ ಅವಾಂತರದಲ್ಲಿ ರೇಸಿನಲ್ಲಿ ಓಡಿ ಹೈರಾಣ ಆಗಿ ಸೋತು ಮಲಗಿದವರಂತೆ ತನ್ನ ರೂಮಿನಲ್ಲಿ ಹೋಗಿ ಮಲಗಿಬಿಟ್ಟಳು. ಕಣ್ಣು ಮುಚ್ಚಿದಾಗ ಊರ ತನ್ನ ಮನೆಯಲ್ಲಿ ಎಲ್ಲರೂ ದುಃಖಿಸುತ್ತಿದ್ದಾರೆ.

ಮನೆ ತುಂಬ ಜನ ಸೇರಿದ್ದಾರೆ. ಅಪ್ಪ ಅಳುತ್ತಿದ್ದಾರೆ. ಅಮ್ಮ ಎದೆ ಬಡಿದುಕೊಳ್ಳುತ್ತಿದ್ದಾಳೆ ಅಣ್ಣ ಬಿಕ್ಕಿ ಬಿಕ್ಕಿ ಅಳುತ್ತಿರುವ ದೃಶ್ಯಗಳು ಗೋಚರಿಸಿದವು. ಅದೊಂದು ಸ್ತಬ್ಧ ಚಿತ್ರದಂತೆ ಕಂಡಿತು. ಭಾನುವಾರ ರಜೆ ಇದ್ದರೂ ಶೇಖರ ಇವರ ಕೋಣೆಯೊಳಗೆ ಹಣಿಕಿ ಹಾಕಲಿಲ್ಲ. ಮಗಳು ಸುಮಿಯೊಡನೆ ಊಟ–ಆಟ ಮಲಗುವುದು ಎಲ್ಲಾ ಮಾಡಿದ. ಆಯಾ ತಂದ ಊಟ ಉಂಡು ಅಹಲ್ಯೆ ಮಾತ್ರೆಗಳ ನುಂಗಿ ಮುದುಡಿ ಮುದುಡಿ ಮಲಗಿದಳು.

ತುಸು ಕಾಯು ದೇವರೇ, ನಾನು ನನ್ನದೇ ಓಣಿಯಲ್ಲಿ ಹೆಜ್ಜೆಗಳ ಗುರುತು, ಓಡುವ ಮೊಲದ ಮರಿಯ ಗುರುತು, ಎಲ್ಲವನ್ನೂ ಮೂಡಿಸಬೇಕು. ಬರೀ ಚಹರೆಗಳು ಉರಿವ ಚಹರೆಗಳು. ಅವಳು ಜೀವ ಹಿಂಡಿ ಹಿಂಡಿ ನೊಂದಳು. ಎರಡು ಮೂರು ದಿವಸ ಸೂರ್ಯನ ಕಿರಣಗಳು ತಾಕದೇ ಹೊರಳಾಡಿದಳು. ಶೇಖರ ತನ್ನ ಒಡ್ಡೋಲಗದ ತಯಾರಿ ನಡೆಸಿದ್ದ. ಅವಳು ಕಠೋರ ನಿರ್ಧಾರ ತೆಗೆದುಕೊಂಡಳು ತನ್ನಲ್ಲಿ ತಾನೇ.

ಗರ್ಭ ಕಳಚಿದ ನಾಲ್ಕನೇ ದಿವಸ, ಅವಳು ಶೇಖರ ಆಫೀಸಿಗೆ ಹೋದನಂತರ, ಕೆಲಸದಾಳಿಗೆ ಸುಮಿಯನ್ನು ನೋಡಿಕೊಳ್ಳಲು ಹೇಳಿ, ಈಗ ಆಸ್ಪತ್ರೆಗೆ ಹೋಗಿ ಬರುತ್ತೇನೆ ಅಂತ ಹೇಳಿ ಮಲ್ಲೇಶ್ವರಂ ಬಸ್ಸು ಹತ್ತಿದಳು. ಅವಳು ತನ್ನ ಆಪ್ತ ಸ್ನೇಹಿತೆ ಶೈಲಳ ಮನೆಗೆ ಬಂದಾಗ, ಅವಳಮ್ಮ ಆಶ್ಚರ್ಯದಿಂದ ಬರಮಾಡಿಕೊಂಡರು. ಅವರಿಗೆ ಅಹಲ್ಯೆ ಎಂದಿನಂತೆ ಇಲ್ಲ ಅನಿಸಿತು. ಯಾಕೋ ಒಂದು ಥರಾ ಇದ್ದೀಯಲ್ಲ ಅಂತ ಒಂದು ಲೋಟ ಕಾಫಿ ಮುಂದಿರಿಸಿಟ್ಟು ಮಾತಿಗೆ ಶುರುವಿಟ್ಟರು. ಅಹಲ್ಯೆಗೆ ತನ್ನ ಸಮಸ್ಯೆಗಳನ್ನು ಹೇಗೆ ಹೇಳಬೇಕೋ ಅಂತ ತಿಳಿಯಲಿಲ್ಲ. ಅವಳು ಮೆಲ್ಲಗೆ ತನ್ನ ಹಾಗೂ ಶೇಖರನ ನಡುವೆ ನಡೆದ ವಿವಾದ ಮಾತುಕತೆ, ಮತ್ತೆ ಶೇಖರ ಮಾಡಿಸಿದ ಬಲವಂತ ಗರ್ಭಪಾತ ಎಲ್ಲವನ್ನೂ ಕಣ್ಣೀರು ಸುರಿಸುತ್ತ ಹೇಳಿದಳು. “ನಾನು ಈಗಾಗಲೇ ಅಮೂಲ್ಯವಾದುದನ್ನು ಬೆಲೆ ತೆತ್ತಿದ್ದೇನೆ. ಅವರು ನನ್ನಿಂದ ಎಲ್ಲವನ್ನೂ ಕಸಿದುಕೊಂಡಿದ್ದಾರೆ. ಹಲವು ಬಗೆಯಲ್ಲಿ ಶಿಕ್ಷಿಸಿದ್ದಾರೆ ಆಂಟಿ, ನನ್ನ

ಜೀವಂತವಿರಿಸಿ ಕೊಂದಿದ್ದಾರೆ ಆಂಟಿ. ಇನ್ನೂ ನಾನು ಅವರೊಟ್ಟಿಗೆ ಸಹಬಾಳ್ವೆ ಮಾಡಲು ಸಾಧ್ಯವಿಲ್ಲ. ನಾನು ನಾನಾಗಿ ಉಳಿದಿಲ್ಲ ಆಂಟಿ. ದಯವಿಟ್ಟು ನನಗೆ ಸಹಾಯ ಮಾಡಿ. ನಾನು ಅವನ ಅಹಂಕಾರದಿಂದ ದಬ್ಬಾಳಿಕೆಯಿಂದ ಬಿಡಿಸಿಕೊಳ್ಳಬೇಕು. ಊರಿನಲ್ಲಿದ್ದ ಅಪ್ಪ, ಅಮ್ಮ, ಅಣ್ಣನಿಗೆ ನನ್ನ ಸಮಸ್ಯೆ ಹೇಳಿದರೆ ಅವರು ಖಂಡಿತ ಒಪ್ಪಲಾರರು. ದಯವಿಟ್ಟು ನನಗೆ ಇರಲು ಒಂದು ಬಾಡಿಗೆ ರೂಮ್ ಬೇಕು. ಎಲ್ಲಾದರು ಇದ್ದರೆ ಕೂಡಲೇ ತಿಳಿಸಿರಿ." ಅವಳು ತಡೆಯಲಾಗದ ದುಃಖದಿಂದ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು.

ಶೈಲಳ ಅಮ್ಮನಿಗೆ ನಿಜವಾಗಿಯೂ ಅಹಲ್ಯೆ ಆಘಾತಕ್ಕೆ ಒಳಗಾಗಿದ್ದಾಳೆ ಅಂತ ತೀವ್ರವಾಗಿ ಅನಿಸಿತು. ಆದರೂ ತಾಯಿಯ ಸ್ಥಾನದಲ್ಲಿದ್ದ ಅವರು, ಅನುಭವದ ಒಂದೆರಡು ಮಾತುಗಳನ್ನು ಹೇಳಬೇಕೆಂದು ಹೇಳಿದರು. "ಹೀಗೆ ದಿಢೀರನೆ ಮನೆಯಿಂದ ಹೊರಗೆ ಬಂದರೆ ಹೇಗೆ? ನಾಳೆ ಮದುವೆಯ ಸಂಬಂಧ ಮುರಿದುಹೋದರೆ ಹೇಗೆ? ಅಪ್ಪ, ಅಮ್ಮನಿಗೆ ಕಷ್ಟ ಅಲ್ಲವಾ ಅಹಲ್ಯೆ? ನೀನು ಸೂಕ್ಷ್ಮ ಮನಸ್ಸಿನವಳು ಅಂತ ನನಗೆ ಗೊತ್ತು. ಯಾವುದಕ್ಕೂ ಅವಸರದ ನಿರ್ಧಾರ ಸರಿ ಅಲ್ಲ. ನಿನ್ನ ಎದೆಯಲ್ಲಿ ಎಂತಹ ತೂತುಗಳಾಗಿವೆ ಅಂತ ನನಗೆ ಗೊತ್ತು. ದಯವಿಟ್ಟು ಇನ್ನೊಮ್ಮೆ ವಿಚಾರ ಮಾಡು. ನಿನಗೆ ಅಷ್ಟೂ ಸರಿ ಅನಿಸದಿದ್ದರೆ ನಮ್ಮ ಮಹಡಿಯಲ್ಲಿ ಎರಡು ಖೋಲಿಗಳು ಖಾಲಿ ಇವೆ. ನೀನು ಯಾವಾಗ ಬಂದರೂ ಸರಿ."

"ಇಲ್ಲ ಆಂಟಿ, ನಾನು ಗಟ್ಟಿ ನಿರ್ಧಾರ ಮಾಡಿದ್ದೇನೆ. ನನ್ನ ಮನಸ್ಸಿಗೆ ಒಡಲಿಗೆ ರಿಪೇರಿ ಮಾಡಲಾಗದ ಗಾಯಗಳಾಗಿವೆ. ಅವನೊಂದಿಗೆ ವಾದಿಸಿ ಪ್ರತಿವಾದಿಸಿ ಫಲವಿಲ್ಲ. ಅವನೊಬ್ಬ ತೀರ ಪ್ರ್ಯಾಕ್ಟಿಕಲ್ ಆದ ಸ್ವಾರ್ಥ ಮನಸ್ಸುಳ್ಳ ಗಂಡಸು. ತಾನು ಮತ್ತು ತನ್ನ ಮಗಳು ಮಾತ್ರ ಸುಖವಾಗಿರಬೇಕೆಂಬುದು ಅವನ ಇಚ್ಛೆ. ಅದರಂತೆ ನಾವು ನಡೆದುಕೊಳ್ಳದಿದ್ದರೆ, ಅವನು ನನ್ನನ್ನು ಧಿಕ್ಕರಿಸಿ ನಡೆಸಿಕೊಳ್ಳುತ್ತಾನೆ. ಇದು ಎಂದೂ ರಿಪೇರಿಯಾಗದ ದಾರಿ. ನಾನು ಸುಮ್ಮನೆ ಕವಲುದಾರಿ ಹುಡುಕಿಕೊಳ್ಳುವುದು ಸರಿ ಆಂಟಿ."

ಶೇಖರ ವಿದೇಶಕ್ಕೆ ಹೋಗಲು ಎರಡೇ ದಿನ ಬಾಕಿ ಇರುವಾಗ ಅಹಲ್ಯೆ ಕಲ್ಲಾದಳು. ತನ್ನ ಪ್ರೀತಿಯ ಮೊಲದ ಮರಿ ಹಾಗೂ ತನ್ನ ಬಟ್ಟೆ–ಬರೆಗಳೊಂದಿಗೆ ಅವಳು ಶಾಶ್ವತವಾಗಿ ಆ ಮನೆಗೆ ವಿದಾಯ ಹೇಳಿ ಬಂದಿದ್ದಳು. ತನ್ನ ಹೊಲವನ್ನು ಲೂಟಿ ಮಾಡಿದ ದಂಗೆ ಖೋರನಿಗೆ ಅವಳು ಪತ್ರ ಬರೆದಿಟ್ಟು ಸೀದಾ ಗೆಳತಿಯ ಮನೆಯ ಬಾಗಿಲಿಗೆ ಬಂದು ನಿಂತಳು.

*"ಯಾವ ಕಾರಣಕ್ಕೂ ಹಿಂದುರುಗಿ ಬರಲಾರೆ. ನನ್ನ ಕಾಲು ದಾರಿಯನ್ನು ನಾನು ನಿರ್ಮಿಸಿಕೊಂಡಿರುವೆ. ಅಹಲ್ಯಾ."*

* * *

ಓದು ಪಠ್ಯ

# ಮೂಗಿನ ಮಹತ್ವ

–ಸೂ. ಸುಬ್ರಹ್ಮಣ್ಯ

'ತಾಯಿಯಂತೆ ಮಗಳು ನೂಲಿನಂತೆ ಸೀರೆ' ಎಂದು ಕನ್ನಡದಲ್ಲಿ ಒಂದು ಅವಳಿ ಗಾದೆ ಇದೆ. ಇದರ ಜೊತೆಗೆ 'ಮೂಗಿನಂತೆ ಮುಖ' ಎಂದು ಕೂಡಿಸಿಕೊಂಡು, ಒಂದು ತ್ರಿವಳಿ ಗಾದೆಯನ್ನು ತಯಾರಿಸ ಬಹುದು.

ಮೂಗು ಮುಖದ ಹೃದಯ; ಕಣ್ಣುಗಳೇ ಶ್ವಾಸಕೋಶಗಳು. ಮುಖದ ಒಂದು ಆಕಾರ ವಿಕಾರಕ್ಕೆ ಮೂಗೇ ಕಾರಣ. ಮೂಗು ಚೆನ್ನಿದ್ದರೆ ಮುಖವೂ ಸೊಗಸು. ಮೂಗಿನಿಂದ ಮುಖದ ಸೌಂದರ್ಯ ಸೊಬಗು. ಮೂಗಿಗೆ ಪ್ರಾಧಾನ್ಯ ಬಂದಿರುವುದು ಅದು ಮುಂದೆ ಬಂದಿರುವುದರಿಂದಲೇ ಅಲ್ಲ. ಅದು ಮೂಗಿನ ಮುಂದಾಳುತನವನ್ನು ಮಾತ್ರ ಸೂಚಿಸುತ್ತದೆ. ಮುಂದಾಳುತನವಿರಬೇಕಾದರೆ ಧೈರ್ಯ, ಸ್ಥೈರ್ಯಗಳಿರಬೇಕು. ಧೈರ್ಯ ಬರಬೇಕಾದರೆ ತನ್ನ ಕಾರ್ಯದಲ್ಲಿನ ಸತ್ಯತೆಯನ್ನು ಅರಿತಿರಬೇಕು. ಕಾರ್ಯದಲ್ಲಿ ಸತ್ಯತೆಯುಂಟಾಗಬೇಕಾದರೆ ಸತ್ಯಪ್ರೇಮಿಯಾಗಿರಬೇಕು. ಸತ್ಯಪ್ರೇಮವೇ ಮಹಾತ್ಮರ ಲಕ್ಷಣ. ಆದುದರಿಂದ ಮೂಗು ಸಹಾ ಮಹಾಜೀವಿ, ಅದಕ್ಕೂ ಮಹತ್ತ್ವವುಂಟು. ಅದರ ಈ ಮಹತ್ತ್ವವನ್ನೇ ಈಗ ನಾನು ಹೇಳಹೊರಟಿರುವುದು. ಅದರ ಮಹತ್ತ್ವವನ್ನು ನನ್ನ 'ಮೂಗಿನ ನೇರ'ಕ್ಕೆ ಹೇಳುತ್ತಿರುವೆನೆಂದು ವಾಚಕರಾರೂ ಭಾವಿಸಬಾರದು!

ರಾಮಾಯಣದ ಕಥೆಯ ಬೆಳವಣಿಗೆಗೆ ಕಾರಣಳಾದ ವ್ಯಕ್ತಿ ಮಂಥರೆ ಎಂದು ಅನೇಕರ ಅಭಿಪ್ರಾಯ ಇರಬಹುದು. ಇವಳಷ್ಟೇ ಅಥವಾ ಇನ್ನೂ ಸ್ವಲ್ಪ ಹೆಚ್ಚಿಗೆ ಕಾರಣಳಾದ ಮತ್ತೊಂದು ವ್ಯಕ್ತಿಯುಂಟು. ಆಕೆಯೇ ರಾವಣನ ತಂಗಿ ಶೂರ್ಪನಖಿ. ಲಕ್ಷ್ಮಣನಿಂದ ಕಿವಿ, ಮೂಗುಗಳನ್ನು ಕೊಯಿಸಿಕೊಂಡು ಅಪಮಾನ ಹೊಂದಿದವಳು ಈಕೆಯೆ. ಅದಕ್ಕೆ

ಪ್ರತೀಕಾರ ರಾವಣನಿಂದ ಸೀತಾಪಹರಣ. ಇದಕ್ಕೆ ಕಾರಣ ಅವಳ ಕಿವಿ ಮೂಗಲ್ಲದೆ ಮತ್ತೇನು? ಬರೇ ಕಿವಿ ಮಾತ್ರ ಹೋಗಿದ್ದರೆ ಆಕೆ ಸೆರಗನ್ನು ಸರಿಯಾಗಿ ಹೊದ್ದು ಮರೆಮಾಡಿಕೊಳ್ಳುತ್ತಿದ್ದಳೋ ಏನೋ! ಆದರೆ ರಾಮ–ರಾವಣರ ಕಾಳಗಕ್ಕೆ – ಏಕೆ, ಇಡೀ ರಾಮಾಯಣಕ್ಕೆ – ಕಾರಣವಾದ ಅವಳ ಮೂಗು ಅವಳ ಪಾಲಿಗೇ ಇಲ್ಲವಾಯಿತು. ಅವಳ ಈ ಇಲ್ಲವಾದ ಮೂಗಿನಿಂದಲೇ ರಾಮಾಯಣ ನಡೆಯಿತೆಂದರೆ ಉತ್ಪ್ರೇಕ್ಷೆಯೇನೂ ಆಗಲಾರದು. ಇದೆಲ್ಲವೂ ಪುರಾಣ ಪ್ರಪಂಚಕ್ಕೆ ಸಂಬಂಧಿಸಿದುದೆಂದು ಸಂದೇಹ ಪಡುವಿರೇನೋ? ಅದು ಹೋಗಲಿ. ಟ್ರಾಯ್ ದೇಶದ ಹೆಲನ್‌ಳ ಹೆಸರನ್ನಾದರೂ ಕೇಳಿರುವಿರಷ್ಟೆ? ಅದನ್ನು ಕೇಳಿಲ್ಲದಿದ್ದರೆ ಈಗ ಕೇಳುತ್ತಿರುವಿರಿ. ಕೇಳಿ, ರಸಿಕರಾಗಿರಿ. ಆಕೆ ಇಹಲೋಕದ ಸೌಂದರ್ಯ ದೇವತೆ. ಅವಳ ಮೂಗು, ನನ್ನ ದೃಷ್ಟಿಯಲ್ಲಿ, ಸೌಂದರ್ಯ ನಿಧಿ. ಅಂತಹ ಮೂಗನ್ನು ಪಡೆದಿದ್ದ ಅವಳನ್ನು ಪಡೆಯುವುದಕ್ಕಾಗಿ ಎರಡು ದೇಶಗಳಿಗೆ ಬೃಹತ್ ಯುದ್ಧವೇ ನಡೆಯಿತು. ಈ ಎರಡು ಯುದ್ಧಕ್ಕೆ – ಒಂದು ರಾಮ ರಾವಣರಿಗೆ, ಮತ್ತೊಂದು ಗ್ರೀಸ್ ಮತ್ತು ಟ್ರಾಯ್ ದೇಶಗಳಿಗೆ – ಕಾರಣವಾದ ಮೂಗು ಮಹತ್ವದ್ದೇ ಸರಿ, ಅಲ್ಲವೆ?

ಮತ್ತೆ ಕ್ಲಿಯೋಪಾತ್ರ ಮೂಗು ಏನು ಮಾಡಿತು? ಏನು ಮಾಡಲಿಲ್ಲ? ಮಂಕುತಿಮ್ಮ ಹೇಳಿರುವಂತೆ –

ನಾಸಿಕದ ಮಾಟದಿಂದಾ ಕ್ಲಿಯೋಪ್ಯಾಟ್ರಳಿಗೆ
ದಾಸರಾದರು ಶೂರ ಸೀಸರ್ ಆ್ಯಂಟನಿಗಳ್
ದೇಶ ಚರಿತೆಗಮವರ ಜಸಕಮಂಕುಶವಾಯ್ತು
ನಾಸಾಪುಟದ ರೇಖೆ – ಮಂಕುತಿಮ್ಮ ।

ಕ್ಲಿಯೋಪಾತ್ರಳ ನಾಸಿಕದ ಬಗೆಗೆ, ಕವಿಯ ಅಭಿಪ್ರಾಯಗಳನ್ನೇ ಹೋಲುವ ಫ್ರೆಂಚ್ ವಿಜ್ಞಾನಿ ಮತ್ತು ದಾರ್ಶನಿಕ ಪಾಸ್ಕಲ್, "ಕ್ಲಿಯೋಪಾತ್ರಳ ಮೂಗಿನ ಉದ್ದ ಸ್ವಲ್ಪ ಕಡಿಮೆಯಿದಿದ್ದರೆ ಜಗತ್ತಿನ ಮುಖವೇ ಬದಲಾಯಿಸುತ್ತಿತ್ತು" ಎಂದ ನುಡಿಗಳು ಇಲ್ಲಿ ಗಮನಾರ್ಹ.

ಮೂಗನ್ನು ಮೂಗುಂಗುರ, ಮೂಗುಬೊಟ್ಟು, ಇವೇ ಮೊದಲಾದ ಆಭರಣಗಳಿಂದ ಅಲಂಕರಿಸುವುದು ನಮ್ಮ ದೇಶದ ಸ್ತ್ರೀಯರಲ್ಲಿ ಮೊದಲಿನಿಂದಲೂ ಬಂದ ಪದ್ಧತಿ. ಇದಕ್ಕೆ ಕಾರಣವಿಲ್ಲದೆ ಇಲ್ಲ. ಇಡೀ ದೇಶದ ಸ್ತ್ರೀಯರೆಲ್ಲರ ಮೂಗು ಸುಂದರವಾಗಿರುವುದು ಅಸಂಭವ; ವಿಕಾರವೇ ಹೆಚ್ಚು, (ವಾಚಕಿಯರಾರೂ ಕೋಪಿಸಬಾರದು!) ಕೆಲವರು ತಮ್ಮ ಕೊರತೆಯನ್ನು ನೀಗಿಸಲು ಮತ್ತು ಐಬನ್ನು ಮುಚ್ಚಲು ಮೂಗನ್ನು ಆ ರೀತಿ ಅಲಂಕರಿಸುತ್ತಾರೆಂದು ನನ್ನ ಭಾವನೆ. ಅಲಂಕರಿಸಿದ ಮೂಗನ್ನುಳ್ಳ ಮಹಿಳೆಯರನ್ನು ಕಂಡವರ ಮನಸ್ಸು ಅವರು ತೊಟ್ಟಿರುವ ಆಭರಣದ ಮೌಲ್ಯವನ್ನು ಚಿಂತಿಸುತ್ತದೆ. ಅದರ ಆಕಾರ, ಕುಶಲತೆಗಳನ್ನು ನೋಡುತ್ತ, ಮನಸ್ಸು ಮೂಗಿನ ರೂಪವನ್ನು ಮರೆಯುತ್ತದೆ. ವೀಕ್ಷಕನಲ್ಲಿ ವಿಮರ್ಶಕನ ದೃಷ್ಟಿ ಇಲ್ಲವಾಗಿ ಬರಿಯ ಸೌಂದರ್ಯೋಪಾಸಕನಾಗುತ್ತಾನೆ. ಇದು ಚಂಚಲಮನಸ್ಸಿನ ಮಾನವನಿಗೆ ಮೂಗು ಬೀಸುವ ಮಾಯಜಾಲ. ಏನೇ ಇರಲಿ, ಮೂಗನ್ನು ಅಲಂಕರಿಸುವವರು ಅವರ ರೂಪವನ್ನು ಮೊದಲು ಕೆಡಿಸಿ, ಅನಂತರ ಶೃಂಗರಿಸುತ್ತಾರೆಂದು ನನ್ನ ಅಭಿಪ್ರಾಯ. ಮೊದಲು ಸೌಂದರ್ಯಸಾಧಕವಾದ ಆ ಮೂಗನ್ನು ಚುಚ್ಚಿಕೊಂಡು – ಅದಕ್ಕೆ ಒಂದು ಹಬ್ಬವನ್ನೇ ಆಚರಿಸಿ – ಕೆಲವೊಂದು ದಿನ ಅದಕ್ಕೆ ದಾರ ದಳಿಸಿಕೊಂಡೋ, ಕಡ್ಡಿ ಪೋಣಿಸಿಕೊಂಡೋ, ಇದ್ದ ಸಹಜ ಸೌಂದರ್ಯವನ್ನು ಇಲ್ಲವಾಗಿಸಿಕೊಳ್ಳುವ ದೃಶ್ಯ ಕವಿ ಹೃದಯದಲ್ಲಿ ಕಣ್ಣೀರು ಕರೆಸುವಂತಹದು, ಮಾನವನ ಮನಸ್ಸು ಮಿಡಿಯುವಂತಹದು. ಸುರೂಪಕ್ಕೆ ಮುನ್ನ ಕುರೂಪ; ಸುಖಕ್ಕೆ ಮುನ್ನ ನೋವು, ದುಃಖ!

ಮೂಗನ್ನು ಚುಚ್ಚಿಸಿಕೊಂಡು ಅದನ್ನು ಅಲಂಕರಿಸಿಕೊಳ್ಳುವ, ಅದರಿಂದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವ ಈ ಸಂಪ್ರದಾಯ ಇತ್ತೀಚೆಗೆ ಪಶ್ಚಿಮ ದೇಶಗಳಲ್ಲಿ ಕೂಡ – ಮುಖ್ಯವಾಗಿ ಇಂಗ್ಲೆಂಡಿನಲ್ಲಿ – ಪಸರಿಸಿದೆ. ಅಲ್ಲಿ ರಾಜಮನೆತನದ ಹಾಗೂ ಸಾಮಾನ್ಯ ಸ್ತ್ರೀಯರಲ್ಲಿ ಈ ಪದ್ಧತಿ ಬಹುವೇಗದಿಂದ ಹರಡುತ್ತಿದೆ. ನಮ್ಮವರು ಅವರನ್ನು ಅನುಕರಿಸಿ ಕಿವಿ, ಮೂಗು, ಹಣೆ, ಕೈಗಳನ್ನು (ಗಡಿಯಾರ ಬಿಟ್ಟು) ಅಲಂಕರಿಸದೆ ಹಾಗೆಯೇ ತಿರುಗಾಡಲಿಚ್ಚಿಸಿದರೆ, ಅಲ್ಲಿನವರು ನಮ್ಮ

ದೇಶದ ಸ್ತ್ರೀಯರಂತೆ ಕಾಣಲು ಪ್ರಯತ್ನಿಸುತ್ತಿರುವುದು ಸೋಜಿಗವೇ ಸರಿ. ಅಲ್ಲದೆ, ಮೂಗು ಚುಚ್ಚುವುದನ್ನು ನಮ್ಮಲ್ಲಿ ಪ್ರತಿ ಮನೆಯ ಹೆಂಗಸೂ ಅರಿತಿರುವರಾದರೆ ಅವರಲ್ಲಿ ಅದಕ್ಕೇನೆ ಒಬ್ಬ ಪ್ರವೀಣ ಇರುವನಂತೆ!

ಮೂಗುಗಳಲ್ಲೆಲ್ಲಾ ಅತಿ ವಿಲಕ್ಷಣವಾದುದೆಂದು ಹೆಸರು ಪಡೆದ ಮೂಗು ಫ್ರಾನ್ಸಿನ ಸಾಹಸಿ–ಸಿಪಾಯಿ, ಸೈರಾನೋ ಡಿ ಬರ್ಗೆ ರಾಕ್ ಎಂಬುವನದು. ಆತನ ಮೂಗು ಅತಿ ವಿಶಾಲವಾಗಿಯೂ ಕುರೂಪವಾಗಿಯೂ ಇತ್ತೆಂದು ಆತನ ಸಮಕಾಲೀನನೊಬ್ಬನು ಹೇಳಿದ್ದಾನೆ. "ಅದು (ಮೂಗು) ಮುಖದ ಹೆಚ್ಚು ಭಾಗವನ್ನೆಲ್ಲಾ ಆವರಿಸಿಕೊಂಡು, ಮುಖದ ಮಧ್ಯದಲ್ಲಿ ಒಂದು ಪರ್ವತದಂತಿದ್ದು, ಫೇಂಡಾವಿನ ಮೂತಿಯಂತೆ, ಕ್ಷಿಪ್ರದಲ್ಲಿಯೇ ಬಾಯಿಯುತ್ತ ಇಳಿಮುಖವಾಗಿತ್ತೆಂದು" ಆತನೇ ವಿಶದೀಕರಿಸಿದ್ದಾನೆ. ತನ್ನ ಅದ್ವಿತೀಯ ಮೂಗಿನ ದೆಸೆಯಿಂದಾಗಿ ಸೈರಾನೋ ಸಾವಿರ ದ್ವಂದ್ವ ಯುದ್ಧಗಳಲ್ಲಿ ಹೋರಾಡಿ ಹನ್ನೆರಡು ಜನರ ಪಾಲಿಗೆ ಯಮನಾದ! ಇದು ಮೂಗಿನ ಮಹತ್ವವಲ್ಲದೆ ಮತ್ತೇನು? ಅಲ್ಲದೆ, ಈಗಲೂ ನಮ್ಮಲ್ಲಿಯೂ ವಿಕಾರ ವಾದ, ಕುರೂಪವಾದ ಮೂಗುನ್ನುಳ್ಳವರು ಯಾರಾದರೂ – ತಮ್ಮಲ್ಲಿನ ನಾಚಿಕೆ ಮತ್ತು ಆಗುವ ಅವಮಾನಗಳನ್ನು ಲೆಕ್ಕಿಸದೆ – ಬಂದು ನನ್ನನ್ನು ಕಂಡಿದ್ದೇ ಆದಲ್ಲಿ, ಅವರನ್ನು ಎವರೆಸ್ಟ್ ಆರೋಹಿ ತೇನ್‌ಸಿಂಗ್‌ಗಿಂತಲೂ ಹೆಚ್ಚಿನ ಪ್ರಖ್ಯಾತರನ್ನಾಗಿ ಮಾಡಲು ಸಂಕಲ್ಪಿಸಿದ್ದೇನೆ. ಯಾರುಂಟು ಮುಂದೆ ಬರುವವರು?

ಇಂದು ಹೆಸರುವಾಸಿಯಾದ ನಾಸಿಕವೆಂದರೆ ಜಿಮ್ಮಿ ಡ್ಯೂರೆಂಟ್‌ನದು. ಹಾಸ್ಯಾಸ್ಪದವಾದರೂ ಪ್ರಸಿದ್ಧಿ ಪಡೆದ ಮೂಗಿನ ಅಪೂರ್ವ ಆಸರೆಯುಳ್ಳ ಡ್ಯೂರೆಂಟ್‌ನಿಗೆ ಎಲ್ಲ ಕಾಲದ ಖ್ಯಾತಿ ಖಂಡಿತ. ಸರ್ವದಾ, ಅವನ ಮೂಗಿನ ಉದ್ಧ ವೃತ್ತ ಪತ್ರಿಕೆಗಳ 'ಹರಟೆ ಬರಹಗಾರ'ರ ವಸ್ತುವಾಗಿದೆ. ವರದಿಗಳಂತೆ, ಅದು ಐದರಿಂದ ಎಂಟು ಅಂಗುಲದವರೆಗೂ ಇದೆಯಂತೆ.

ಜಿಮ್ಮಿ ವೈಯಕ್ತಿಕವಾಗಿ ವಾಸ್ತವಾಂಶವನ್ನು ತಿಳಿಯಪಡಿಸಲು

ಇಚ್ಛಿಸುವುದಿಲ್ಲ; ಹಾಗೂ ಅಂಗವಿನ್ಯಾಸ ಪರಿಶೀಲನೆಯಲ್ಲಿ ಸಿಕ್ಕು ತಾನೇಕೆ ಪೇಚಾಡಲಿ ಎನ್ನುತ್ತಾನೆ. ಅದೆಂತೆ ಇರಲಿ, ಅದನ್ನು ಕುರಿತು ಕವನಗಳನ್ನು ಕಟ್ಟಿ ಹಾಡುವುದಲ್ಲದೆ – ಆತ ತನ್ನ ಮೂಗಿಗೆ ಎಷ್ಟು ಮಹತ್ವ ಕೊಟ್ಟಿರುವನೆಂದರೆ – ಅದನ್ನು ೫೦ ಸಾವಿರ ಡಾಲರುಗಳಿಗೆ ವಿಮೆ ಮಾಡಿದ್ದಾನೆ.

ಅನೇಕರು ಮೂಗು ಇರುವ ಸನ್ನಿವೇಶ ಮತ್ತು ಹಿನ್ನೆಲೆಗಳಿಂದ ಅದರವರ ಪೂರ್ಣತೆಯನ್ನು ಅಳೆಯುತ್ತಾರೆ. ಆದರೆ ಮೂಗಿನ ಪರಿಪೂರ್ಣತೆಯನ್ನು ಅಳೆಯಲು ಪ್ರಾಚೀನ ಪ್ರಮಾಣವೊಂದಿದೆ. ಅದನ್ನು T. Cooke ಎಂಬಾತ 'The Science of Physiognomy' ಎಂಬ ಪುಸ್ತಕದಲ್ಲಿ ಹೇಳಿದ್ದಾನೆ. ಅವನ ಹೇಳಿಕೆ ಅಸತ್ಯವೆಂದು ಇದುವರೆಗೂ ಯಾರೂ ವಾದಿಸಿಲ್ಲ. ಅದರ ಪ್ರಕಾರ, ಪರಿಪೂರ್ಣವಾದ ನಾಸಿಕವು ತಲೆಯ ಉದ್ದದ ೧/೪ ಭಾಗವೂ, ಮುಖದ ಉದ್ದದ ೧/೩ ಭಾಗವೂ ಇರಬೇಕಂತೆ; ಅಲ್ಲದೆ ಮೂಗಿನ ಹೊಳ್ಳೆಯ ಅಗಲವು ಕಣ್ಣಿನ ಅಗಲದಷ್ಟು, ಮೂಗಿನ ಮೂಲದಿಂದ ತುದಿಯವರೆಗಿನ ಉದ್ದ ಹಣೆಯ ಆಳದಷ್ಟು ಇರಬೇಕಂತೆ. ನಿಮ್ಮದನ್ನೂ ಅಳೆಯಿರಿ; ಅದರ ಆಕಾರವನ್ನು ಅರಿಯಿರಿ.

ಅನೇಕ ವಿಷಯಗಳನ್ನು ಅಧ್ಯಯನ ಮಾಡಿದ್ದ ಲಿಯೋನಾರ್ಡೋ ಡ ವಿಂಚಿ ಮತ್ತೂ ಮುಂದೆ ಹೋದ. ಆತನು ಎಲ್ಲ ಬಗೆಯ ಮೂಗುಗಳನ್ನೂ ವರ್ಗೀಕರಿಸುವಂತೆ ಮೂಗುಗಳನ್ನು ಎಂಟು ಪ್ರತ್ಯೇಕ ಪಂಗಡಗಳಾಗಿ ವಿಂಗಡಿಸಿದ. ಆದರೂ ಒಮ್ಮೊಮ್ಮೆ ಗೋಚರವಾಗುವ ಕೆಲವೊಂದು ಮೂಗುಗಳು ಅವನ ಲಕ್ಷಣ ನಿರೂಪಣೆಯಿಂದ ನುಣುಚಿಕೊಳ್ಳುತ್ತಿವೆ. ಮೇಲ್ಭಾಗ ನೇರವಾಗಿಯೂ, ಕೆಳಭಾಗ ನಿಮ್ನಮಧ್ಯವಾಗಿಯೂ ಇರುವಂತಹವೇ ಅವು.

ಮೂಗುಗಳು ಸೌಂದರ್ಯ ಸಾಧಕಗಳಾಗದೆ ಖರ್ಚು ತಗಲುವ ವಸ್ತುಗಳೂ ಆಗಬಹುದು. ಟೈಕೋ ಬ್ರಾಹೆ ಎಂಬಾತನು ಕತ್ತಿವರಸೆ ಮಾಡುತ್ತಿದ್ದ ವೇಳೆಯಲ್ಲಿ ತನ್ನ ಮೂಗಿನ ತುದಿಯನ್ನು ಕಳೆದುಕೊಂಡ. ಆತ ಬೇರೊಂದು ಚಿನ್ನದ ಮೂಗನ್ನು ಮಾಡಿಸಿ ಒಂದು ಬಗೆಯ

ಅಂಟಿನಿಂದ ಅದನ್ನು ತನ್ನ ಮುಖಕ್ಕೆ ಅಂಟಿಸಿಕೊಂಡನಂತೆ. ಅಮೆರಿಕದ ಪಿಯರ್‌ಪಾಯಿಂಟ್ ಮಾರ್ಗಣಿಗೆ ಮೂಗಿನ ಮೇಲೆ ಅಸಹ್ಯವಾಗಿ ದುರ್ಮಾಂಸ ಬೆಳೆಯುತ್ತಿತ್ತಂತೆ. ಅದನ್ನು ಹೋಗಲಾಡಿಸುವುದಕ್ಕೆ ಆತ ವಿಶ್ವ ಪ್ರಯತ್ನವನ್ನೇ ಮಾಡಿದ. ಆದರೆ ಮೂಗು ಮಾತ್ರ ತನ್ನ ಬಂಧುವನ್ನು ಬಿಟ್ಟು ಕೊಡಲಿಲ್ಲ! ನಮ್ಮವರೇ ಎಷ್ಟು ಮಂದಿ ಮೂಗಿನ ಚಿಕಿತ್ಸೆಗೆ ಪರದೇಶಗಳಿಗೆ ಹೋಗಿಲ್ಲ? ಅವರ ಕಷ್ಟ ಅವರಿಗೇ ಗೊತ್ತು. ಅಷ್ಟೇಕೆ, ನಿಮ್ಮ ಮೂಗಿನ ಮೇಲಿನ ಮಡುವೆ?

ನಿಮ್ಮ ಮೂಗಿನ ಅಳತೆ, ಆಕೃತಿ ಮುಖದ ಸೌಂದರ್ಯವನ್ನು ಕೆಡಿಸುತ್ತಿದೆಯೇನು? ಚಿಂತೆಯಿಲ್ಲ. ವಿಜ್ಞಾನವು ಬಹುಮಟ್ಟಿಗೆ ಸಂಪೂರ್ಣವಾಗಿ ಹೊಸದಾದ ಮೂಗನ್ನೇ ಕೊಡಬಲ್ಲುದು. ಪ್ರಾಸಂಗಿಕವಾಗಿ, ಮೂಗನ್ನು ಪ್ಲಾಸ್ಟಿಕ್ ಶಸ್ತ್ರಚಿಕಿತ್ಸೆಯಿಂದ ಮಾರ್ಪಡಿಸುವುದು ಹೊಸದೇನೂ ಅಲ್ಲ. ನಮ್ಮವರು ಅದನ್ನು ಮೂರು ಸಾವಿರ ವರ್ಷಗಳಿಂದಲೂ ಅಭ್ಯಾಸಿಸುತ್ತಿದ್ದರಂತೆ. ೧೫ನೆಯ ಶತಮಾನದ ಇಟಲಿಯ ವೈದ್ಯನೊಬ್ಬನು ತೋಳಿನ ಚರ್ಮದಿಂದ – ಹಿಂದೂ ರೀತಿಯನ್ನು ಅನುಸರಿಸಿ – ಹೊಸ ಮೂಗನ್ನೇ ರಚಿಸುತ್ತಿದ್ದ. ಆದರೆ ಇಟಲಿಯ ಮತ್ತೊಬ್ಬ ವೈದ್ಯ ಹಳೆಯ ಮೂಗನ್ನು ಉತ್ತಮಪಡಿಸುವುದು, ಹೊಸದನ್ನು ರಚಿಸುವುದು ಇತ್ಯಾದಿ ಮಾಡಿದುದರಿಂದ ಆತನನ್ನು ಸರ್ವರಿಗೂ ಮೀಸಲಾಗಿದ್ದ ಸ್ಮಶಾನದಲ್ಲಿ ಸಮಾಧಿ ಮಾಡಬಾರದೆಂದು ನಿಬಂಧನೆ ಹಾಕಿದರು. ಕಾರಣ ಗೊತ್ತೆ? ಜನ, ಆತ ಪಿಶಾಚಿಯ ಶಕ್ತಿಯಿಂದ ಈ ಕೆಲಸವನ್ನು ಮಾಡಿಸುತ್ತಿರುವನೆಂದು ತಿಳಿದರು !

ಸೋಮನಾಥಪುರದ ದೇವಾಲಯದ ವಿಗ್ರಹವೊಂದರಲ್ಲಿನ ಮೂಗು ಮುಖದ ಮೂರನೆ ಒಂದರಷ್ಟಿದೆ. ಅದು ಅಷ್ಟಿರಬೇಕೆಂದು ಶಿಲ್ಪಿಯ ಅಭಿಪ್ರಾಯ. ಆದರೆ ಅದೇ ಶಿಲ್ಪಿ – ಆತ ಯಾರೇ ಆಗಿರಲಿ – ಎಲ್ಲ ವಿಗ್ರಹದ ಮೂಗನ್ನೂ ಅದೇ ಪ್ರಮಾಣದಲ್ಲಿ ಅದೇ ರೀತಿಯಲ್ಲಿ ರೂಪಿಸಿಲ್ಲ. ಮೂಗು ಒಂದೇ ಬಗೆಯದಾದರೆ ಮುಖದ ಭಾವವೂ ಒಂದೇ ಆಗುತ್ತದೆಯಂದು ಅರಿತ ಆ ಶಿಲ್ಪಿ ಮೂಗುಗಳನ್ನು ಬದಲಾಯಿಸಿ, ಮೂರ್ತಿಗಳನ್ನು ಬದಲಾಯಿಸಿದ್ದಾನೆ. ಮೂಗಿನ ಮಹತ್ವ ಆತ ಅರಿತವ!

ಆದುದರಿಂದ, ಮೂಗು ಎರಡು ಮುಖಗಳನ್ನು, ಅರ್ಥಾತ್ ಎರಡು ವ್ಯಕ್ತಿತ್ವಗಳನ್ನು ವ್ಯತ್ಯಾಸಿಸುವ ಒಂದು ಸಾಧನ. ಮಾನವನಿಗೆ ಮುಖದ ಮೇಲೆ ಮೂಗೇ ಇಲ್ಲವಾಗಿದ್ದರೆ? ಆಗ ನಾನು ನೀವಾಗುತ್ತಿದ್ದೆ! ನೀವು ನಾನಾಗುತ್ತಿದ್ದಿರಿ! ಅಲ್ಲವೆ? ನನ್ನ ಮೂಗಿನಿಂದಾಗಿ ನಾನು ನಾನಾಗಿದ್ದೇನೆ! ಮೂಗಿನಿಂದ ಬದುಕಬೇಕಾಗಿದೆ, ನಾವು. ಹೌದು. ಮೂಗಿಲ್ಲದಿದ್ದರೆ ಉಸಿರಾಡುತ್ತಿದ್ದೇವೆ? ಓಹೋ! ನೀವು ಬಾಯಲ್ಲಿ ಉಸಿರಾಡುವವರೋ! ಬಾಯಿ ಬಿಟ್ಟರೆ ಬಣ್ಣಗೇಡಾಗಿರುವ ಈ ಕಾಲದಲ್ಲಿ ಬಾಯಲ್ಲಿ ಉಸಿರಾಡಿದ್ದೇ ಆದರೆ ಬುದ್ಧಿಗೇಡೂ ಆದೀತು, ಎಚ್ಚರಿಕೆ!

ಮೂಗುಗಳಲ್ಲಿ ಅನೇಕ ವಿಧಗಳುಂಟು, ಪ್ರಾಣಿಗಳ ಮೂಗೆಲ್ಲವೂ ಏಕರೀತಿಯಲ್ಲಿರುವುದರಿಂದ ಅದರ ವಿವಿಧತೆಯಲ್ಲಿ ವೈಶಿಷ್ಟ್ಯವೇನೂ ಅಷ್ಟಾಗಿ ಇಲ್ಲ. ಮಾನವನ ಮೂಗುಗಳಲ್ಲಿ ಅನೇಕ ರೀತಿಯವಿದ್ದರೂ ಹೆಚ್ಚಾಗಿ ಕಾಣುವುದು ಕೆಲವು ಬಗೆಯವು. ಅವು – ಅಗಲವಾದ ಮೊಟಕಾದ ಮೂಗು, ಉದ್ದವಾದ ಮೂಗು ಮತ್ತು ಗಿಣಿ ಮೂಗು. ಅಗಲವಾದ ಮೊಟಕಾದ ಮೂಗುನ್ನುಳ್ಳ ಗುಂಡು ಮುಖವು 'Bulldog'ನ ಮುಖದಂತಿರುವುದಲ್ಲವೆ? ಈ ಮೊಟಕು ಮೂಗಿನವರನೇಕರು ವಿಲಕ್ಷಣವಂತರಾಗಿದ್ದರೂ ಲಕ್ಷಣವಾಗಿರುವವರೂ ಇಲ್ಲವೇ ಇಲ್ಲ. ಸಿನಿಮಾತಾರೆ ನಿಮ್ಮಿಯ ನಾಸಿಕವನ್ನು ನೋಡಿರುವಿರಾ? ಆಕೆಯ ಮೂಗೇ ಆಕೆಯನ್ನು ತಾರಾಪಟ್ಟಕ್ಕೇರಿಸಿದೆಯೆಂದು ನನಗನ್ನಿಸುತ್ತದೆ. ಆದರೆ ಆಕೆ ಏನನ್ನುವಳೋ? ಆ ಮೂಗಿಗೆ ಆ ಮುಖವೆ ಸರಿಯಲ್ಲವೆ? ಮೂಗಿನಂತೆ ಮುಖವಲ್ಲವೆ? ಗಿಣಿಮೂಗು ಗಿಣಿಯ ಕೊಕ್ಕಿನಂತಿರುವುದರಿಂದ ಅದಕೆ ಆ ಹೆಸರು ಅನ್ವರ್ಥವಾಗಿದೆ. ಗಿಣಿ ಮೂಗುಳ್ಳವರು ಐಶ್ವರ್ಯವಂತರಾಗುವರಂತೆ. ಉದ್ದ ಮೂಗುಳ್ಳವರೋ?

ಗ್ರೀಸ್ ದೇಶದ ಸಪ್ತಮೇಧಾವಿಗಳಲ್ಲೊಬ್ಬನಾದ ಸೊಲೊನ್ ಸುಮಾರು ಹನ್ನೆರಡು ಸೆಂಟಿಮೀಟರ್ ಉದ್ದದ ಮೂಗನ್ನು ಹೊಂದಿದ್ದನೆಂದು ಹೇಳಲಾಗಿದೆಯಾದರೂ ಪ್ರಾಯಶಃ ಇದು ಉತ್ಪ್ರೇಕ್ಷೆಯಾಗಿರಬೇಕು. ಏಕೆಂದರೆ, ಸೈರಾನೊ ಡಿ ಬರ್ಗ್‌ರಾಕನ

ನಾಸಿಕವೇ 'ಬೃಹತ್' ಆದುದೆಂಬ ಅಭಿಪ್ರಾಯಕ್ಕೆ ಹೆಚ್ಚು ಮನ್ನಣೆಯಿದೆ.

ಕಣ್ಣನ್ನು ಕಟ್ಟಿಯೂ, ಕೇವಲ ತನ್ನ ಹೆಬ್ಬೆರಳು ಮತ್ತು ತೋರು ಬೆರಳನ್ನು ಮಾತ್ರ ಬಳಸಿ ಹತ್ತು ಸಾವಿರ ಜನಗಳ ನಡುವೆಯೂ ದೊರೆ ಫ್ರೆಡ್ರಿಕ್ ಅನ್ನು ತಾನು ಪತ್ತೆಹಚ್ಚಬಲ್ಲೆನೆಂದು ಕವಿ ಲಾವೇಟರ್ ಜಂಭ ಕೊಚ್ಚಿಕೊಳ್ಳುತ್ತಿದ್ದನಂತೆ. ಫ್ರೆಡ್ರಿಕನ "ನಾಸಿಕ ದೊರೆತನ"ಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ?

"ದೊಡ್ಡ ಮೂಗಿರುವ ಜನ ನನಗಿರಲಿ" ಎಂದು ನೆಪೋಲಿಯನ್ ತನ್ನ ಆಶಯ ವ್ಯಕ್ತಪಡಿಸಿದನೆಂಬ ಪ್ರತೀತಿಯಿದೆ. ಆದರೆ ವಿಧಿ ಅವನಿಗಾಗಿ ದೊಡ್ಡ ಮೂಗಿನ ವೆಲ್ಲಿಂಗ್‌ಟನ್ ಡ್ಯೂಕನ್ನು ಕಾದಿರಿಸಿತು! ವಾಸ್ತವದಲ್ಲಿ ವಾಟರ್‌ಲೂ ಯುದ್ಧವು 'ನಾಸಿಕಗಳ ಸಮರ'ವಾಗಿಯೇ ಪರಿಣಮಿಸಿತೆನ್ನಲು ಅಡ್ಡಿಯಿಲ್ಲ. ಆದರೆ ಚರಿತ್ರೆಯ ಪ್ರಾಧ್ಯಾಪಕರು ವೆಲ್ಲಿಂಗ್‌ಟನ್ ಡ್ಯೂಕನ 'ಗರುಡ' ನಾಸಿಕ ತನ್ನ 'ಬೇಟೆ'ಯನ್ನು ಹೇಗೆ ಕಂಡುಹಿಡಿಯಿತೆಂಬುದನ್ನು ಪ್ರಾಯಶಃ ಯಾರೂ ಹೇಳಲಾರರು!

ಕ್ಲಿಯೋಪಾತ್ರಳಲ್ಲಿ ಅನುರಕ್ತನಾದ ಸೀಸರ್ ಕೂಡ ಹದ್ದಿನ ಕೊಕ್ಕಿನಂತೆ ಬಾಗಿದ್ದ ಮೂಗನ್ನು ಹೊಂದಿದ್ದ. ಈ ಬಗೆಯ ಮೂಗು ಧೈರ್ಯದ ಲಕ್ಷಣವನ್ನು ಸೂಚಿಸುತ್ತದೆ ಎಂಬ ನಂಬಿಕೆಯಿದೆ. ಇತ್ತೀಚಿನ ಕಾಲದ ಖ್ಯಾತ ಯೋಧರೆನಿಸಿದ ಫೀಲ್ಡ್ ಮಾರ್ಷಲ್ ಮಾಂಟ್ಗೊಮೆರಿ, ಫೀಲ್ಡ್ ಮಾರ್ಷಲ್ ಮಾಣೆಕ್‌ಷಾ ಅವರ ನಾಸಿಕಗಳು 'ವೈರಿ ಭಯಂಕರ'ವಾಗಿ ನಂಬಿಕೆ ಭರವಸೆಗಳ ಪ್ರತೀಕವಾಗಿ ವಿರಾಜಿಸುತ್ತಿವೆಯೆಂದರೆ ಅತ್ಯುಕ್ತಿಯೆನಿಸದು, ಜಾರ್ಜ್ ವಾಷಿಂಗ್‌ಟನ್ನನ ವಿಶಾಲವಾದ ಮತ್ತು ಕೊಕ್ಕಿನಾಕಾರದ ನಾಸಿಕವೂ ಚರಿತ್ರಾರ್ಹವಾಗಿದೆ.

ಇಂದಿನ ವಿಶ್ವದ "ಬೃಹತ್ ರಾಷ್ಟ್ರಗಳ" ಜನರು ಬೃಹತ್ ಸಾಮರ್ಥ್ಯ ಪಡೆದಿರುವುದಲ್ಲದೆ ಬೃಹತ್ ನಾಸಿಕವನ್ನೂ ಪಡೆದಿದ್ದಾರೆಂದು ಕಾಣುತ್ತದೆ. ಈ ಎಲ್ಲರ ಮೂಗನ್ನು ನೋಡಿರುವ ನಾನು ಈ ನಿರ್ಧಾರಕ್ಕೆ ಬಂದಿದ್ದೇನೆ. ಯಾವ ದೇಶದ ಜನರ ಮೂಗು ಉದ್ದವಾಗಿರುವುದೋ ಆ ದೇಶ ಮುಂದುವರಿಯುವುದರಲ್ಲಿ ಸಂಶಯವಿಲ್ಲ. ಈ ಮಾತಿನಲ್ಲಿ ಸತ್ವವಿದೆ,

ಸತ್ಯವಿದೆ. “ಬೃಹತ್ ರಾಷ್ಟ್ರಗಳು” ತಮ್ಮ ಮೂಗಿನಿಂದಲೇ ‘ಬೃಹತ್’ ಆದವೆಂದು ನನ್ನ ಅಭಿಪ್ರಾಯ. ಚೈನಾ, ಆಫ್ರಿಕಾ, ಜಪಾನ್ ಹಾಗೂ ಭಾರತದವರ ಮೂಗು ಅಷ್ಟು ಉದ್ಧವಾಗಿಲ್ಲದ ಪ್ರಯುಕ್ತ ಅವರ ದೇಶವೂ ಮುಂದುವರಿದಿಲ್ಲ. ಉದ್ದ ಮೂಗುಳ್ಳವರು ದೃಢವಂತರು. ನಿಷ್ಠಾವಂತರು. ಹಿಡಿದ ಕಾರ್ಯವನ್ನು ಮುಗಿಸಬೇಕೆಂದು ಹಟ ತೊಟ್ಟು ಕಾರ್ಯಾಂಗಕ್ಕೆ ಇಳಿಯುವವರು ಉದ್ದ ಮೂಗಿನವರು. ನಮ್ಮ ದೇಶ ಪ್ರಗತಿಯ ಪಥದಲ್ಲಿ ಹೋಗಬೇಕಾದರೆ ನಮ್ಮವರ ಮೂಗು ಮುಂದಿರಬೇಕು. ಆದುದರಿಂದ ಇಂದೇ ಬೇಡಿಯೋ, ಕಾಡಿಯೋ, ಕೃತಕವಾದದ್ದೋ, ನೈಜವಾದದ್ದೋ ಮೂಗನ್ನು, ಉದ್ದವಾದ ಮೂಗನ್ನು ಪಡೆಯಲು ಪ್ರಯತ್ನಿಸುವಿರಾ?

ಉದ್ದ ಮೂಗುಳ್ಳವರು ಉನ್ನತ ಮಟ್ಟದಲ್ಲಿರಬಲ್ಲರು. ಅವರ ಕಾರ್ಯದಲ್ಲಿ ದೃಢತೆ ಇರುವುದು. ಯಾವ ವಿಜ್ಞಾನಿಯ ಮೂಗು ಮೊಟಕು? ಯಾವ ಚರಿತ್ರಕಾರನ ಮೂಗು ಮೊಟಕು? ಮೊಟಕು ಮೂಗುಳ್ಳ ಮಹತ್ವದ ವ್ಯಕ್ತಿ ಯಾರುಂಟು? ಮಹಾತ್ಮರೆಲ್ಲ ಉದ್ದ ಮೂಗಿನವರೇ. ವಿಶ್ವವಿಖ್ಯಾತರಾದ ಟಾಗೂರ್, ಎಮರ್ಸನ್, ಬೈರನ್, ಷಾ, ನೆಪೋಲಿಯನ್ – ಇವರೆಲ್ಲರ ಮೂಗು ಮೊಟಕೆ? ಅದು ಯಶಸ್ವಿಯಾಗಿ ಕಾರ್ಯ ಸಾಧಿಸಿಲ್ಲವೆ? ಅವರ ಮೂಗು ಉದ್ದವಲ್ಲವೆ? ನಮ್ಮ ನೆಹರೂರವರನ್ನೇ ನೋಡಿ – ಅವರ ಕಾರ್ಯಸಾಧನೆ ಎಂತಹುದು! ಅವರ ಮೂಗು ಎಂತಹುದು! ಅಷ್ಟೇಕೆ, ನನ್ನನ್ನೇ ನೋಡಿ; ಈಗ ನಾನು ಹಿಡಿದಿರುವ ಕಾರ್ಯವನ್ನು ಈ ಪ್ರಬಂಧ ಬರೆಯುವುದನ್ನು ಯಶಸ್ವಿಯಾಗಿಯೇ(?)

ಸಾಧಿಸಿಲ್ಲವೆ? ನನ್ನ ಮೂಗು...!

*